# ಕಮಲ ಪತ್ರ

RNI No.:KARKAN/2023/84034 | ಸಂಪುಟ : 02 | ಸಂಚಿಕೆ : 06 | ಸೆಪ್ಟೆಂಬರ್ 2024 | ಬೆಂಗಳೂರು | ₹ 10/-



ಸುಸ್ಥಿರ ಬಿಜೆಪಿ – ವಿಕಸಿತ ಭಾರತ

ಸದಸ್ಯತಾ ಅಭಿಯಾನ - 2024

## ಸಂಘಟನಾ ಪರ್ವ

## ಸದಸ್ಯತಾ ಅಭಿಯಾನ – 2024







ಉಕ್ರೇನ್‌ನ ಕೀವ್‌ನಲ್ಲಿ ಉಕ್ರೇನ್ ಅಧ್ಯಕ್ಷ ಶ್ರೀ ವೋಲೊಡಿಮಿರ್ ಝೆಲೆನ್ಸ್ಕಿ ರವರೊಂದಿಗೆ ನಿಯೋಗ ಮಟ್ಟದ ಮಾತುಕತೆಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



ಪೋಲೆಂಡ್‌ನ ವಾರ್ಸಾದಲ್ಲಿ ಪೋಲೆಂಡ್ ಅಧ್ಯಕ್ಷ ಶ್ರೀ ಆಂಡ್ರೆಜ್ ದುಡಾ ರವರೊಂದಿಗೆ ದ್ವಿಪಕ್ಷೀಯ ಸಭೆಯಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ



ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಶಿಕ್ಷಕರೊಂದಿಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಸಂವಾದ

## ಬಿಜೆಪಿ ಸದಸ್ಯತಾ ಅಭಿಯಾನ - 2024 ಜಿಲ್ಲಾ ಮಟ್ಟದ ಕಾರ್ಯಾಗಾರ



ಬೆಳಗಾವಿ ನಗರ



ಬೆಂಗಳೂರು ಗ್ರಾಮಾಂತರ




ಬೀದರ್




ಚಾಮರಾಜನಗರ

# ಸಂಘಟನೆಯ ಬೇರುಗಳನ್ನು ಗಟ್ಟಿಗೊಳಿಸುವ ಸದಸ್ಯತಾ ಅಭಿಯಾನ

ಬಿಜೆಪಿಯ ಸಂಘಟನಾತ್ಮಕವಾದ ಚಟುವಟಿಕೆಯಲ್ಲಿ ಅತ್ಯಂತ ಮಹತ್ವವಾದ ಸದಸ್ಯತಾ ಅಭಿಯಾನದಲ್ಲಿ ನಾವೆಲ್ಲರೂ ತೊಡಗಿಸಿಕೊಂಡಿದ್ದೇವೆ. ವಿಶ್ವದ ಅತಿ ಹೆಚ್ಚು ಸದಸ್ಯರನ್ನು ಹೊಂದಿರುವ ಸಂಘಟನೆ ನಮ್ಮದು. ಅತಿ ಹೆಚ್ಚು ಸಂಸದರನ್ನು, ಶಾಸಕರನ್ನು ಹೊಂದಿರುವ ರಾಜಕೀಯ ಪಕ್ಷವೆಂಬ ಹೆಗ್ಗಳಿಕೆಯೂ ನಮ್ಮ ಬಿಜೆಪಿಯದ್ದೇ. ಇದೆಲ್ಲದರ ಜೊತೆಗೆ ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ಆಂತರಿಕವಾಗಿಯೂ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿರುವ ಏಕೈಕ ರಾಜಕೀಯ ಸಂಘಟನೆಯೂ ನಮ್ಮದೇ. ಈ ಆಂತರಿಕ ಪ್ರಜಾಪ್ರಭುತ್ವದ ಒಂದು ಪ್ರಕ್ರಿಯೆಯಾದ ಸದಸ್ಯತಾ ಅಭಿಯಾನದ ಚಟುವಟಿಕೆಯಲ್ಲಿ ನಾವೆಲ್ಲರೂ ತೊಡಗಿಸಿಕೊಂಡಿದ್ದೇವೆ. ಈಗಾಗಲೇ ಸದಸ್ಯತಾ ಗುರಿ ನಿಶ್ಚಯವಾಗಿದೆ. ಕಾರ್ಯಾಗಾರಗಳ ಮೂಲಕ ಕಾರ್ಯಯೋಜನೆ ಕಾರ್ಯಗತವಾಗಬೇಕಾದ ಹಾದಿಯೂ ಸ್ಪಷ್ಟವಾಗಿದೆ. ಮಂಡಲ ಮಟ್ಟದವರೆಗಿನ ತಂಡಗಳೂ ರಚನೆಯಾಗಿದೆ.

ಸದಸ್ಯತಾ ಅಭಿಯಾನಕ್ಕೆ 7 ಟಿ ಸೂತ್ರವನ್ನು ಅಳವಡಿಸಿಕೊಳ್ಳಬೇಕೆಂದು ಸಂಘಟನೆಯ ಹಿರಿಯರು ತಿಳಿಸಿದ್ದಾರೆ. **ಟಾಸ್ಕ್** ಎಂದರೆ ಗುರಿ ಮುಟ್ಟುವ ಸವಾಲು, **ಟೈಮ್‌ಲೈನ್** ಅಂದರೆ ಕಾಲಮಿತಿಯೊಳಗೆ ಗುರಿ ಸಾಧನೆ, **ಟೀಂ** ಅಂದರೆ ಅಭಿಯಾನಕ್ಕಾಗಿ ತಂಡಗಳ ರಚನೆ, **ಟಾರ್ಗೆಟ್** ಅಂದರೆ ಸಂಘಟನೆ ನಿಗದಿ ಪಡಿಸುವ ಗುರಿ, **ಟ್ರ್ಯಾಕಿಂಗ್** ಅಂದರೆ ತಂಡ ಅಭಿಯಾನದಲ್ಲಿ ಸಾಗುತ್ತಿರುವ ಪ್ರಗತಿ ಹಾಗೂ ಸಾಗಿರುವ ಹಾದಿಯ ಅವಲೋಕನ, ಅಗತ್ಯತೆಗೆ ತಕ್ಕಂತೆ, ಆಯಾ ಸಂದರ್ಭಕ್ಕನುಗುಣವಾಗಿ ಚಟುವಟಿಕೆಗಳ ಯೋಜನೆ, ಕಾರ್ಯಕರ್ತರ ಜೋಡಣೆ, **ಟ್ರಾವೆಲಿಂಗ್** ಅಂದರೆ ಬೂತ್ ಮಟ್ಟದವರೆಗೂ ನಿರಂತರ ಪ್ರವಾಸ ಕೈಗೊಳ್ಳುವುದು, **ಟಚ್ ಥೆರಪಿ** ಅಂದರೆ ಸಂಬಂಧ, ಸಂಪರ್ಕಗಳ ಮೂಲಕ ಪ್ರಯತ್ನಗಳನ್ನು ನಡೆಸುವುದು ಎಂಬ 7 ಟಿ ಸೂತ್ರಗಳ ಮೂಲಕ ಗುರಿಯೆಡೆಗೆ ಸಾಗಬೇಕಾಗಿದೆ.

ಒಂದು ಬಾರಿ ನಿಶ್ಚಿತ ಗುರಿ ಮುಟ್ಟುವುದು ಸುಲಭ ಸಾಧ್ಯ. ಮುಟ್ಟಿದ ಗುರಿಯನ್ನು ಉಳಿಸಿಕೊಳ್ಳುವುದು ಸುಲಭದ ಮಾತಲ್ಲ. ಆದರೆ ಬದ್ಧತೆಯುಳ್ಳ ಕಾರ್ಯಕರ್ತ, ಮಾದರಿ ನಾಯಕತ್ವ, ಶ್ರೇಷ್ಠ ವಿಚಾರಗಳನ್ನು ಅಳವಡಿಸಿಕೊಂಡಿರುವ ಬಿಜೆಪಿಯಂತಹ ಸಂಘಟನೆಗೆ ಇದು ಕಷ್ಟವೇನೂ ಅಲ್ಲ. ಈ ನಿಟ್ಟಿನಲ್ಲಿ ಎಲ್ಲರ ಕ್ರಿಯಾಶೀಲತೆಗೆ ಮತ್ತೊಂದಿಷ್ಟು ವೇಗ ನೀಡಿದಲ್ಲಿ ಗುರಿಯೆಡೆಗೆ ಸಾಗುವುದು ನಿಶ್ಚಿತವೇ ಸರಿ.

## ಸಂಪಾದಕೀಯ

ಹತಾಶ ಕಾಂಗ್ರೆಸ್ ತನ್ನ ಹಳೇ ಚಾಳಿಯನ್ನು ಮುಂದುವರೆಸಿದೆ. ತನ್ನ ಮೇಲೆ ಆರೋಪಗಳು ಬಂದ ಕೂಡಲೇ ಬಿಜೆಪಿಯ ಮೇಲೆ ಸುಳ್ಳು ಆರೋಪಗಳನ್ನು ಮಾಡುವ ಕೆಟ್ಟ ಚಾಳಿಯನ್ನು ಕಾಂಗ್ರೆಸ್ ಮುಂದುವರೆಸಿಕೊಂಡು ಬರುತ್ತಿದೆ. ತಾನೇ ಅಧಿಕಾರದಲ್ಲಿದ್ದರೂ, ಬಿಜೆಪಿಯ ಮೇಲೆ ತಾನೇ ಮಾಡುತ್ತಿರುವ ಆರೋಪಗಳ ಬಗ್ಗೆ ಸ್ಪಷ್ಟ ತನಿಖೆಯನ್ನು ಮಾಡಿಸಲೇ ಇಲ್ಲ. ತಾನು ಮಾಡುತ್ತಿರುವ ಆರೋಪಗಳ ಬಗ್ಗೆ ಕಾಂಗ್ರೆಸ್ ನಾಯಕರಿಗೇ ಸ್ಪಷ್ಟತೆಯೂ ಇಲ್ಲ, ಇಚ್ಛಾಶಕ್ತಿಯೂ ಇಲ್ಲ ಎಂಬುದು ಕಾಂಗ್ರೆಸ್ ನಾಯಕರ ನಡೆ – ನುಡಿಯಿಂದ ವ್ಯಕ್ತವಾಗುತ್ತದೆ, ಇದೆಲ್ಲದಕ್ಕಿಂತ ಮಿಗಿಲಾಗಿ ತನಿಖೆ ನಡೆಸಿದರೆ ತಾನು ಮಾಡಿರುವ ಆಧಾರ ರಹಿತ ಆರೋಪಗಳ ಸತ್ಯಾಸತ್ಯತೆ ಬಯಲಾಗಿ ತಮ್ಮದೇ ಬಂಡವಾಳ ಬಯಲಾಗುತ್ತದೆ ಎಂಬ ಆತಂಕವೂ ಕಾಂಗ್ರೆಸ್ ನಾಯಕರಲ್ಲಿ ಇದ್ದರೆ ಅಚ್ಚರಿಯೇನಿಲ್ಲ.

ಆದರೆ ಮೂಡಾ ಹಗರಣ, ವಾಲ್ಮೀಕಿ ನಿಗಮದ ಹಗರಣಗಳ ಬಗ್ಗೆ ಮಾತ್ರ ಕಾಂಗ್ರೆಸ್ ನಾಯಕರು ಇನ್ನೂ ತಮ್ಮ ಭಂಡತನವನ್ನೇ ಮುಂದುವರೆಸುತ್ತಿದ್ದಾರೆ. ತನ್ನ ಅಧೀನದಲ್ಲಿನ ಎಸ್‌ಐಟಿಯಂತಹ ಸಂಸ್ಥೆಗಳ ಮೂಲಕ ಎಲ್ಲಾ ಹಗರಣಗಳನ್ನು ಮುಚ್ಚಿಹಾಕುವ ಪ್ರಯತ್ನವೂ ಕಾಂಗ್ರೆಸ್‌ನಿಂದ ಆಗುತ್ತಿದೆ. ವಾಲ್ಮೀಕಿ ನಿಗಮದ ಹಗರಣದಲ್ಲಿ ಇ.ಡಿ. ಅಧಿಕಾರಿಗಳು ಸಚಿವ ನಾಗೇಂದ್ರರನ್ನು ಬಂಧಿಸಿ ಅವರೇ ಪ್ರಮುಖ ಆರೋಪಿ ಎಂದು ಚಾರ್ಜ್‌ಶೀಟ್ ಹಾಕಿದ್ದಾರೆ. ಆದರೆ ಕಾಂಗ್ರೆಸ್ ಸರಕಾರದ ಎಸ್‌ಐಟಿ, ನಾಗೇಂದ್ರರಿಗೆ ಕ್ಲೀನ್ ಚಿಟ್ ನೀಡಿದೆ. ಇನ್ನು ಮೂಡ ಹಗರಣದಿಂದ ಬಚಾವಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎಲ್ಲಾ ರೀತಿಯ ಪಟ್ಟುಗಳನ್ನು ಪ್ರಯೋಗಿಸುತ್ತಿದ್ದಾರೆ.

ಸದಸ್ಯತಾ ಅಭಿಯಾನದ ಜೊತೆಗೆ ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲೇ ಬೇಕಾಗಿದೆ. ಭಂಡತನ, ಮೊಂಡುತನಗಳನ್ನು ಆವಾಹಿಸಿಕೊಂಡಿರುವ ಕಾಂಗ್ರೆಸ್ ನಾಯಕರ ದಪ್ಪ ಚರ್ಮಕ್ಕೆ ಬಿಸಿ ತಾಗಿಸಲು ಸರ್ವ ರೀತಿಯಲ್ಲಿ ಸನ್ನದ್ಧರಾಗಿ ಹೋರಾಟಕ್ಕೆ ಇಳಿಯಬೇಕಾದ ಬೇಕಾದ ಜವಾಬ್ದಾರಿ ಪ್ರತಿಯೊಬ್ಬ ಬಿಜೆಪಿ ಕಾರ್ಯಕರ್ತನದ್ದಾಗಿದೆ. ತಾರ್ಕಿಕ ಅಂತ್ಯವನ್ನು ಕಾಣಿಸುವ ತನಕ ಹೋರಾಟಗಳನ್ನು ಮುನ್ನಡೆಸಿದ ನಾಯಕತ್ವ ಹಾಗೂ ಕಾರ್ಯಕರ್ತರುಗಳಿಂದ ಹಗರಣಗಳ ಸರಕಾರದ ಅಂತ್ಯ ಖಚಿತ. ಕಾಂಗ್ರೆಸ್ ಸರಕಾರದ ಅಂತ್ಯ ಸನ್ನಿಹಿತ.

**(ಬಿದರೆ ಪ್ರಕಾಶ್)**
ಸಂಪಾದಕರು

# ಕಮಲ ಪಥ

**ಪ್ರಕಾಶಕರು**
ಹೆಚ್.ಎಸ್. ಗೋಪಿನಾಥ್
ಮೊ : 9341231253

**ಸಂಪಾದಕರು**
ಬಿದರೆ ಪ್ರಕಾಶ್
ಮೊ : 9513447961


## ಸುಭಾಷಿತ



**ನಿಮ್ಮನ್ನು ಹುಡುಕುವ ಅತ್ಯುತ್ತಮ ಮಾರ್ಗವೆಂದರೆ ಇತರರ ಸೇವೆಯಲ್ಲಿ ನಿಮ್ಮನ್ನು ಕಳೆದುಕೊಳ್ಳುವುದು.**

**- ಮಹಾತ್ಮಾ ಗಾಂಧಿ**




**ಕಮಲ ಪಥ ಪತ್ರಿಕೆಗಾಗಿ ಸಂಪರ್ಕಿಸಿ :**
☎ : 08022041976, 23569999
ಅಜಿತ್‌ಶೆಟ್ಟಿ ಹೆರಂಜೆ 97430 91999
ಪದ್ಮಾವತಿ ಜೋಷಿ : 95380 20388
email : bjpkamalapatha@gmail.com
#7/6, 4ನೇ ತಿರುವು, ಸಿ.ಸಿ. ರಸ್ತೆ,
ಸರ್ವಜ್ಞನಗರ, ಕಾಕ್ಸ್ ಟೌನ್,
ಬೆಂಗಳೂರು 560 005




## ಈ ಸಂಚಿಕೆಯಲ್ಲಿ





**06 ಭಾರತ್ ವಿಜಯ್ ಭಾಜಪ ವಿಜಯ್ ಬಿಜೆಪಿ ಸದಸ್ಯತಾ ಅಭಿಯಾನಕ್ಕೆ ಚಾಲನೆ**






**11 ಸದಸ್ಯತಾ ಅಭಿಯಾನ ರಾಜ್ಯ ಹಾಗೂ ಜಿಲ್ಲಾ ಕಾರ್ಯಾಗಾರ**

- **ದೀವಟಿಗೆ :** ನಮ್ಮ ಆಚರಣೆಗಳು ದೇಶ ಪ್ರೇಮದ ಸಂಕೇತ ........................ 05
- ಸಂಘಟನಾ ಪರ್ವ - ಸದಸ್ಯತಾ ಅಭಿಯಾನಕ್ಕೆ ಚಾಲನೆ ............................08
- ಬಿಜೆಪಿ ಕೇವಲ ರಾಜಕೀಯ ಪಕ್ಷವಲ್ಲ, ಒಂದು ರಾಷ್ಟ್ರೀಯ ಆಂದೋಲನ...........16
- ಬೇರುಗಳನ್ನು ನೆನಪಿಸಿದ ಸಮಾಜ ಸಂತ ..........................................19
- ರಾಜಕೀಯ - ಯುವಕರಿಗೆ ಅವಕಾಶ ನಿರಾಕರಣೆ ...............................23
- Brutus - an Honorable Man .......................................25
- ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಸದಸ್ಯತಾ ಅಭಿಯಾನ ಕಾರ್ಯಾಗಾರ ...29
- **ಸ್ಮರಣೆ - ಪ್ರೇರಣೆ :** ಕುಗ್ಗದ ಸಾಮಾಜಿಕ ಕಳಕಳಿ - ಶ್ರೀನಿವಾಸ ಐಯ್ಯಂಗಾರ್ ....31
- **ಪುಸ್ತಕ ಪರಿಚಯ :** ಮುಚ್ಚಿಟ್ಟ ಕರ್ನಾಟಕ ಚರಿತ್ರೆ ..................................32
- **ಮನ್ ಕಿ ಬಾತ್**- ಯುವಜನ ರಾಜಕೀಯ ಅರಂಗೇಟ್ರಂಗೆ ಸಿದ್ಧ..................34



# ನಮ್ಮ ಆಚರಣೆಗಳು ದೇಶಪ್ರೇಮದ ಸಂಕೇತ

**- ಭಗತ್ ಸಿಂಗ್**

**ಭಾ**ರತದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರಾದ ಭಗತ್ ಸಿಂಗ್, ಅವರ ಕ್ರಾಂತಿಕಾರಿ ವಿಚಾರಗಳು ಮತ್ತು ಭಾರತೀಯ ಸ್ವಾತಂತ್ರ್ಯ ಚಳವಳಿಯ ಮೇಲೆ ಬೀರಿದ ಆಳವಾದ ಪ್ರಭಾವವು ಈಗಲೂ ಚರ್ಚೆಯಲ್ಲಿರುತ್ತವೆ. ಹಬ್ಬಗಳು, ಧರ್ಮ ಮತ್ತು ಸಂಸ್ಕೃತಿಯ ಕುರಿತಾದ ಅವರ ಅಭಿಪ್ರಾಯಗಳು ಸಾಮಾನ್ಯವಾಗಿ ಸಾಂಪ್ರದಾಯಿಕ ನಂಬಿಕೆಗಳಿಗೆ ಸವಾಲು ಹಾಕುವ ತರ್ಕಬದ್ಧ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ. ಈ ವಿಷಯಗಳ ಕುರಿತು ಸಿಂಗ್ ಅವರ ಆಲೋಚನೆಗಳನ್ನು ಅವರ ಬರಹಗಳು ಮತ್ತು ಪತ್ರಗಳಲ್ಲಿ ದಾಖಲಿಸಲಾಗಿದೆ, ಇದು ಅವರ ಸಂಕೀರ್ಣ ಮತ್ತು ವಿಶ್ವ ದೃಷ್ಟಿಕೋನದ ಒಳನೋಟಗಳನ್ನು ಒದಗಿಸುತ್ತದೆ.

### ಹಬ್ಬಗಳನ್ನು ಕುರಿತು ಭಗತ್ ಸಿಂಗ್ ನಿಲುವು

ಭಗತ್‌ಸಿಂಗ್ ಧಾರ್ಮಿಕ ಸಂಪ್ರದಾಯ ಮತ್ತು ಧಾರ್ಮಿಕತೆಯ ವಿಮರ್ಶಕರಾಗಿದ್ದರು. ಅವರ ಬರಹಗಳಲ್ಲಿ, ಹಬ್ಬಗಳ ಮಹತ್ವದ ಬಗ್ಗೆ ಪೂರ್ಣವಾದ ತಿಳುವಳಿಕೆಯಿಲ್ಲದೆ ಹೇಗೆ ಆಚರಿಸಲಾಗುತ್ತದೆ ಎಂದು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಏಕತೆ ಮತ್ತು ಸಂತೋಷವನ್ನು ಬೆಳೆಸುವ ಉದ್ದೇಶದಿಂದ ಹಬ್ಬಗಳು ಹೆಚ್ಚು ಜನ ಸಂಪರ್ಕವನ್ನುಂಟು ಮಾಡಬೇಕು ಎನ್ನುವುದು ಅವರ ಅಭಿಪ್ರಾಯ ಆದರೆ ಅದು ವೈಭವದ ಮತ್ತು ಪ್ರದರ್ಶನ ವಸ್ತುವಾದದ್ದು ಅವರಿಗೆ ಅಸಹನೀಯವೆನಿಸಿತ್ತು. ಹಬ್ಬಗಳ ಸಮಯದಲ್ಲಿ ಆಚರಣೆಗಳು ಮತ್ತು ಮೂಢನಂಬಿಕೆಗಳ ಮೇಲಿನ ಅತಿಯಾದ ಗಮನವು ಅವುಗಳ ನಿಜವಾದ ಸಾರವನ್ನು ಕಳೆದುಕೊಳ್ಳುತ್ತದೆ ಮತ್ತು ಅವುಗಳನ್ನು ಕೇವಲ ಪಾಲನೆಗೆ ಮಾತ್ರ ಸೀಮಿತ ಮಾಡುತ್ತವೆ ಎಂಬುದು ಅವರ ಅಭಿಪ್ರಾಯವಾಗಿತ್ತು.

ನಾನೇಕೆ ನಾಸ್ತಿಕನಾಗಿದ್ದೇನೆ ಎಂಬ ತನ್ನ ಲೇಖನದಲ್ಲಿ ಭಗತ್ ಸಿಂಗ್ ಕುರುಡು ನಂಬಿಕೆ ಮತ್ತು ಧಾರ್ಮಿಕ ಆಚರಣೆಗಳ ಧಾರ್ಮಿಕ ಸ್ವಭಾವದ ವಿರುದ್ಧ ವಾದಿಸಿದರು. ಅವರು ಉತ್ಸವಗಳನ್ನು ಸಾಂಸ್ಕೃತಿಕ ಪುಷ್ಟೀಕರಣದ ಸಂಭಾವ್ಯ ಮಾರ್ಗಗಳಾಗಿ ನೋಡಿದರು ಆದರೆ ಅವುಗಳು ವಿಮರ್ಶಾತ್ಮಕ ಚಿಂತನೆ ಅಥವಾ ಸಾಮಾಜಿಕ ಏಕತೆಯನ್ನು ಪ್ರೇರೇಪಿಸಲು ವಿಫಲವಾಗಿರುವ ಕುರಿತು ಉಲ್ಲೇಖಿಸಿದ್ದಾರೆ. ವಿಶೇಷವಾಗಿ ವಸಾಹತುಶಾಹಿ ಅವಧಿಯಲ್ಲಿ, ಜನಸಾಮಾನ್ಯರನ್ನು ಕುಶಲತೆಯಿಂದ ನಿಯಂತ್ರಿಸಲು ಧರ್ಮವನ್ನು ಹೇಗೆ ಬಳಸಿದ್ದಾರೆ ಎಂಬುದನ್ನು ಅವರ ಬರಹಗಳಲ್ಲಿ ಕಾಣಬಹುದು.

### ಸಾಂಸ್ಕೃತಿಕ ಆಚರಣೆಗಳು ಮತ್ತು ಮೂಢನಂಬಿಕೆಗಳ ವಿಮರ್ಶೆ

ಭಗತ್ ಸಿಂಗ್ ಅವರು ಮೂಢನಂಬಿಕೆಗಳನ್ನು ಕಟುವಾಗಿ ಟೀಕಿಸಿದರೂ ಹಬ್ಬಗಳು ಮತ್ತು ಆಚರಣೆಗಳು ಜನರನ್ನು ಒಟ್ಟುಸೇರಿಸಿ ನಮ್ಮ ಹಿಂದೂಸ್ಥಾನದ ಮೂಲ ಬೇರುಗಳಾದ ವೇದ, ಉಪನಿಷತ್ತುಗಳನ್ನು, ತರ್ಕ, ತತ್ತ್ವಗಳನ್ನು ದೇಶದಾದ್ಯಂತ ಒಂದೇ ಬಗೆಯಲ್ಲಿ ಹಂಚಿಕೊಳ್ಳಲು ಇರುವ ಮಾರ್ಗವೆಂದು ಬಲವಾಗಿ ನಂಬಿದ್ದರು. ದುಷ್ಟದಮನದ ದಸರಾ, ಸಾಮಾಜಿಕ ಒಗ್ಗಟ್ಟನ್ನು ತೋರ್ಪಡಿಸುವ ಗಣೇಶೋತ್ಸವ, ಪ್ರಕೃತಿ ಬದಲಾವಣೆಯನ್ನು ಸ್ಪಷ್ಟವಾಗಿ ತೋರಿಸುವ ಯುಗಾದಿ(ಬಿಸು) ಎಲ್ಲವೂ ಭಾರತದ ಯುವ ಜನರಲ್ಲಿ ತತ್ತ್ವವನ್ನು ಮತ್ತು ಶಕ್ತಿಯನ್ನು ಕೊಡುತ್ತವೆ ಎನ್ನುವುದರಲ್ಲಿ ಯಾವ ಅನುಮಾನವಿಲ್ಲ ಎನ್ನುತ್ತಾರೆ.

ತಮ್ಮ ಬರಹಗಳಲ್ಲಿ, ಮೂಢನಂಬಿಕೆಯನ್ನು ವಿವೇಚನೆಯಿಂದ ಬದಲಾಯಿಸುವ ಮತ್ತು ಜನರಲ್ಲಿ ಒಗ್ಗಟ್ಟಿನ ಪ್ರಜ್ಞೆಯನ್ನು ಬೆಳೆಸುವ ಸಾಂಸ್ಕೃತಿಕ ಪುನರುಜ್ಜೀವನದ ಅಗತ್ಯವನ್ನು ಆಗಾಗ್ಗೆ ಒತ್ತಿಹೇಳಿದರು. ಕೋಮು ವಿಭಜನೆಗಳನ್ನು ಬಲಪಡಿಸುವ ಬದಲು ಮಾನವೀಯ ಮೌಲ್ಯಗಳನ್ನು ಉತ್ತೇಜಿಸುವ ರೀತಿಯಲ್ಲಿ ಹಬ್ಬಗಳನ್ನು ಆಚರಿಸುವುದರ ಮೂಲಕ ಸಮಾಜವನ್ನು ರೂಪಿಸುತ್ತಾ ಹೋದರೆ ದೇಶ ವಿಶ್ವಗುರುವಾಗುವುದನ್ನು ಯಾರೂ ತಪ್ಪಿಸಲಾರರು ಎನ್ನುವುದು ಅವರ ವಾದವಾಗಿತ್ತು.

### ಸಾಮಾಜಿಕ ಬದಲಾವಣೆಯ ಸಾಧನವಾಗಿ ಹಬ್ಬಗಳು

ಅವರ ವಿಮರ್ಶಾತ್ಮಕ ನಿಲುವಿನ ಹೊರತಾಗಿಯೂ, ಭಗತ್ ಸಿಂಗ್ ಹಬ್ಬಗಳ ಸಾಮರ್ಥ್ಯವನ್ನು ಸಾಮಾಜಿಕ ಬದಲಾವಣೆಯ ವೇದಿಕೆಗಳಾಗಿ ಗುರುತಿಸಿದರು. ಜನಸಾಮಾನ್ಯರಿಗೆ ಶಿಕ್ಷಣ ನೀಡಲು, ಕ್ರಾಂತಿಕಾರಿ ವಿಚಾರಗಳನ್ನು ಹರಡಲು ಮತ್ತು ಸಾಮಾಜಿಕ ಮಾನದಂಡಗಳಿಗೆ ಸವಾಲು ಹಾಕಲು ಅವಕಾಶಗಳನ್ನು ಕಂಡರು. ಹಬ್ಬಗಳನ್ನು ಆಚರಿಸುವ ವಿಧಾನವನ್ನು ಮರು ರೂಪಿಸುವ ಮೂಲಕ ಸಮಾಜವನ್ನು ಹೆಚ್ಚಿನ ಸಮಾನತೆ ಮತ್ತು ನ್ಯಾಯದ ಕಡೆಗೆ ಸಜ್ಜುಗೊಳಿಸಬಹುದು ಎಂದು ಸಿಂಗ್ ನಂಬಿದ್ದರು.

ಹಬ್ಬಗಳು ಮತ್ತು ಸಂಸ್ಕೃತಿಯ ಕುರಿತು ಭಗತ್ ಸಿಂಗ್ ಅವರ ವಿಮರ್ಶಾತ್ಮಕ ದೃಷ್ಟಿಕೋನವು ವೈಚಾರಿಕತೆ, ಸಮಾನತೆ ಮತ್ತು ಸಾಮಾಜಿಕ ಸುಧಾರಣೆಗೆ ಅವರ ವಿಶಾಲವಾದ ದೃಷ್ಟಿಕೋನವನ್ನು ತಿಳಿಸುತ್ತದೆ. ಅವರ ಒಳನೋಟವು ಸಂಪ್ರದಾಯದ ಪಾತ್ರದ ಬಗ್ಗೆ ಮತ್ತು ಮಾನವೀಯತೆಯ ಆಧುನಿಕ ಮೌಲ್ಯಗಳೊಂದಿಗೆ ಹೊಂದಿಕೊಳ್ಳುವ ಸಾಂಸ್ಕೃತಿಕ ಆಚರಣೆಗಳ ಅಗತ್ಯವನ್ನು ಚರ್ಚಿಸುವಂತೆ ಮಾಡುತ್ತವೆ.



# ಭಾರತ್ ವಿಜಯ್ ಭಾಜಪ ವಿಜಯ್

## ಆಂತರಿಕ ಪ್ರಜಾಪ್ರಭುತ್ವ ರಾಜಕೀಯ ಪಕ್ಷಕ್ಕೆ ಅಗತ್ಯ

# ಬಿಜೆಪಿ ಸದಸ್ಯತಾ ಅಭಿಯಾನಕ್ಕೆ ಚಾಲನೆ


(ವರದಿ)



ರತನ್ ರಮೇಶ್ ಪೂಜಾರಿ
ರಾಜ್ಯ ಮಾಧ್ಯಮ ಸಮಿತಿ ಸದಸ್ಯರು,
ಬಿಜೆಪಿ ಕರ್ನಾಟಕ


**ದಿ. ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ಜನ್ಮದಿನದ ಆಚರಣೆಯ ಸಂದರ್ಭದಲ್ಲಿ ಸದಸ್ಯತ್ವ ಅಭಿಯಾನದ ಜೊತೆಜೊತೆಗೇ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ 2047ನೇ ಇಸವಿಗೆ ಭಾರತವನ್ನು ವಿಕಸಿತ ರಾಷ್ಟ್ರವಾಗಿ, ಅಭಿವೃದ್ಧಿ ಹೊಂದಿದ ದೇಶವಾಗಿ ಪರಿವರ್ತನೆ ಮಾಡುವ ಸಂಕಲ್ಪಕ್ಕೆ ದೊಡ್ಡ ಶಕ್ತಿ ತುಂಬಲು ಸಮಾಜದ ವಿವಿಧ ಸ್ತರದ ಬೇರೆ ಬೇರೆ ಕ್ಷೇತ್ರದವರನ್ನು ಗುರುತಿಸಿ ಎಲ್ಲರನ್ನೂ ಸದಸ್ಯತ್ವದ ಅಭಿಯಾನದಲ್ಲಿ ನೋಂದಣಿ ಮಾಡುವ ಗುರಿಗೆ ಚಾಲನೆ...**



ನವ ದೆಹಲಿಯ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಬಿಜೆಪಿ ರಾಷ್ಟ್ರೀಯ ಸದಸ್ಯತಾ ಅಭಿಯಾನದ ಉದ್ಘಾಟನಾ ಕಾರ್ಯಕ್ರಮವನ್ನು ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ರವರು ಪ್ರಧಾನಿ ಶ್ರೀ ನರೇಂದ್ರ ಮೋದಿಯವರನ್ನು ಮೊದಲ ಸದಸ್ಯರನ್ನಾಗಿ ನೋಂದಾಯಿಸಿ ಅಭಿಯಾನಕ್ಕೆ ಚಾಲನೆ ನೀಡಿದರು.

ಪ್ರತಿ ಆರು ವರ್ಷಕ್ಕೊಮ್ಮೆ ನಡೆಯುವ ಬಿಜೆಪಿ ಸದಸ್ಯತಾ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಿ ಶ್ರೀ ನರೇಂದ್ರ ಮೋದಿ ರವರು ಮಾತನಾಡಿ ಬಿಜೆಪಿ ಸದಸ್ಯರು ಹೊಸತನದಿಂದ ಯೋಚಿಸಿ, ಗಡಿ, ಗ್ರಾಮಗಳನ್ನು ಪಕ್ಷಕ್ಕೆ ಭದ್ರ ಕೋಟೆಯನ್ನಾಗಿ ಪರಿವರ್ತಿಸುವಂತೆ ಕರೆ ನೀಡಿದರು. ಹೊಸ ಪೀಳಿಗೆಗೂ 10 ವರ್ಷಗಳ ಹಿಂದಿನ ಹಗರಣಗಳ ಬಗ್ಗೆ ಸುದ್ದಿಗಳ ಬಗ್ಗೆ ತಿಳಿದಿಲ್ಲ. ಸದಸ್ಯತ್ವ ಅಭಿಯಾನದಲ್ಲಿ 18 ರಿಂದ 25 ವರ್ಷ ವಯಸ್ಸಿನವರನ್ನು ಗುರಿಯಾಗಿಸಲು ಪಕ್ಷದ ನಾಯಕರಿಗೆ ಕರೆ ನೀಡಿದರು. ಅಸ್ತಿತ್ವದಲ್ಲಿರುವ ಸದಸ್ಯತ್ವಗಳನ್ನು ನವೀಕರಿಸಲಾಗುತ್ತದೆ ಮತ್ತು ಹೊಸ ಸದಸ್ಯರನ್ನು ಸೇರಿಸಿಕೊಳ್ಳಲಾಗುತ್ತದೆ ಎಂದು ಅವರು ತಿಳಿಸಿದರು.

## ರಾಜಕೀಯ ಸಂಸ್ಕೃತಿ ಬದಲಿಸಿದ ಬಿಜೆಪಿ

ಲೋಕಸಭೆಯಲ್ಲಿ ಇಬ್ಬರು ಸಂಸದರ ಪಕ್ಷವಾಗಿ ಬಿಜೆಪಿಯ ಬೆಳವಣಿಗೆಯನ್ನು ನೆನಪಿಸಿಕೊಂಡ ಪ್ರಧಾನಿ ಶ್ರೀ ನರೇಂದ್ರ ಮೋದಿಯವರು, ಪಕ್ಷದ ಬೆಳವಣಿಗೆಗೆ ಕಾರಣವಾದ ರಾಷ್ಟ್ರ ಮೊದಲು ಮತ್ತು ಜನರ ಕಲ್ಯಾಣದ ಸಿದ್ಧಾಂತ ಮತ್ತು ಬದ್ಧತೆಯನ್ನು ಕೊಂಡಾಡಿದರು. ಬಿಜೆಪಿ ಮತ್ತು ಅದರ ಮೂಲರೂಪ ಜನಸಂಘವನ್ನು ಪ್ರತಿಸ್ಪರ್ಧಿಗಳು ಅಪಹಾಸ್ಯ ಮಾಡಿದ್ದಾರೆ. ಆದರೆ, ದೇಶದ ರಾಜಕೀಯ ಸಂಸ್ಕೃತಿಯನ್ನು ಬದಲಾಯಿಸಲು ಪಕ್ಷ ಸಾಕಷ್ಟು ಕೆಲಸ ಮಾಡಿದೆ. ಈ ಅಭಿಯಾನ ಕೇವಲ ಸಂಖ್ಯೆಯಲ್ಲ, ಸೈದ್ಧಾಂತಿಕ ಮತ್ತು ಭಾವನಾತ್ಮಕ ಅಭಿಯಾನ ಎಂದು ಅವರು ಹೇಳಿದರು.

ರಾಜಕೀಯ ಪಕ್ಷಗಳು ಆಂತರಿಕ ಪ್ರಜಾಪ್ರಭುತ್ವವನ್ನು ಅನುಸರಿಸದಿದ್ದಾಗ ಏನಾಗುತ್ತದೆ ಎಂಬುದಕ್ಕೆ ಅನೇಕ ವಿರೋಧ ಪಕ್ಷಗಳೇ ಉತ್ತಮ ಉದಾಹರಣೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಅಭಿಪ್ರಾಯ ವ್ಯಕ್ತಪಡಿಸಿದರು.

## ಭಾರತ್ ವಿಜಯ್ – ಭಾಜಪ ವಿಜಯ್

ಬಿಜೆಪಿ ಸದಸ್ಯತ್ವ ಅಭಿಯಾನ ಮತ್ತೆ ಭಾರತ್ ವಿಜಯ್ ಮತ್ತು ಭಾಜಪ ವಿಜಯ್ ಅಭಿಯಾನವನ್ನು ಪ್ರಾರಂಭಿಸಲಿದೆ ಎಂದು ಕೇಂದ್ರ ಗೃಹ ಸಚಿವರಾದ ಶ್ರೀ ಅಮಿತ್ ಶಾ ಅವರು ಹೇಳಿದರು. ರಕ್ಷಣಾ ಸಚಿವರಾದ ಶ್ರೀ ರಾಜನಾಥ್ ಸಿಂಗ್ ಅವರು ಮಾತನಾಡಿ ರಾಜಕೀಯದಲ್ಲಿನ ವಿಶ್ವಾಸಾರ್ಹತೆಯ ಬಿಕ್ಕಟ್ಟನ್ನು ಪ್ರಧಾನಿ ಶ್ರೀ ನರೇಂದ್ರ ಮೋದಿ ಕೊನೆಗೊಳಿಸಲಿದ್ದಾರೆ ಎಂದು ಹೇಳಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ರವರು ಮಾತನಾಡಿ, ಪ್ರಜಾಸತ್ತಾತ್ಮಕವಾಗಿ ನಡೆಯುವ ಮತ್ತು ಅದರ ಸಂವಿಧಾನವನ್ನು ಅನುಸರಿಸುವ ಏಕೈಕ ರಾಜಕೀಯ ಪಕ್ಷ ಬಿಜೆಪಿ. ಪಕ್ಷವು 2014ರಲ್ಲಿ ಮೊದಲ ಬಾರಿಗೆ ಮಾಡಿದಂತೆ ಈ ಅಭಿಯಾನದಲ್ಲಿ 10 ಕೋಟಿ ಸದಸ್ಯರ ಮೈಲಿಗಲ್ಲನ್ನು ದಾಟಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

## ‘ಸಂಘಟನಾ ಪರ್ವ’

# ಸದಸ್ಯತ್ವ ಅಭಿಯಾನಕ್ಕೆ ಚಾಲನೆ

## ಪಕ್ಷ ಸದಸ್ಯತ್ವ ನೋಂದಣಿಯಲ್ಲಿ ಹೊಸ ದಾಖಲೆ ರಾಜ್ಯಾಧ್ಯಕ್ಷ ಶ್ರೀ ಬಿ.ವೈ. ವಿಜಯೇಂದ್ರ ವಿಶ್ವಾಸ



**ಬಿಜೆಪಿ ಸದಸ್ಯತ್ವ ಅಭಿಯಾನ ಪರ್ವಕ್ಕೆ ಚಾಲನೆ ದೊರಕಿದ್ದು ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರದಲ್ಲಿ ಅಭಿಯಾನ ನಡೆಯುತ್ತಿದ್ದು, ಪ್ರತಿಯೊಂದು ಬೂತ್‌ನಲ್ಲಿ ಕೂಡ ಕನಿಷ್ಠ 300 ರಿಂದ 400 ಸಂಖ್ಯೆಯಲ್ಲಿ ಸದಸ್ಯರನ್ನಾಗಿ ಮಾಡುವ ಗುರಿ**



ಪಕ್ಷದ ಸಂಘಟನೆ ಬಲಪಡಿಸುವ ಉದ್ದೇಶದ 'ಸಂಘಟನಾ ಪರ್ವ, ಸದಸ್ಯತ್ವ ಅಭಿಯಾನ 2024'ನ್ನು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಮೊದಲ ಸದಸ್ಯತ್ವ ಪಡೆಯುವುದರ ಮೂಲಕ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು ಬಿಜೆಪಿ ಸದಸ್ಯತ್ವ ಅಭಿಯಾನ ಪರ್ವ ಉದ್ಘಾಟನೆ ಗೊಂಡಿದ್ದು, ರಾಜ್ಯದ ಎಲ್ಲ 224 ವಿಧಾನಸಭಾ ಕ್ಷೇತ್ರದಲ್ಲಿ ಅಭಿಯಾನ ನಡೆಯುತ್ತಿದ್ದು, ಪ್ರತಿಯೊಂದು ಬೂತ್‌ನಲ್ಲಿ ಕೂಡ ಕನಿಷ್ಠ 300 ರಿಂದ 400 ಸಂಖ್ಯೆಯಲ್ಲಿ ಸದಸ್ಯರನ್ನಾಗಿ ಮಾಡುವ ಗುರಿ ಹೊಂದಿದೆ ಎಂದು ತಿಳಿಸಿದರು.

ಕಳೆದ ಬಾರಿಯ ಸದಸ್ಯತಾ ಅಭಿಯಾನದಲ್ಲಿ 1.04 ಕೋಟಿ ಸದಸ್ಯರ ನೋಂದಣಿ ಆಗಿತ್ತು, ಈ ಬಾರಿ ಅದನ್ನು ಮೀರಿ ಸದಸ್ಯತ್ವ ನೋಂದಣಿ ಮಾಡುವ ಸಂಕಲ್ಪಹೊಂದಿದ್ದು, ಅಟಲ್ ಬಿಹಾರಿ ವಾಜಪೇಯಿ ಅವರ 100ನೇ ಜನ್ಮದಿನದ ಆಚರಣೆಯ ಸಂದರ್ಭದಲ್ಲಿ ಸದಸ್ಯತ್ವ ಅಭಿಯಾನದ ಜೊತೆಜೊತೆಗೇ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರ 2047ನೇ ಇಸವಿಗೆ ಭಾರತವನ್ನು ವಿಕಸಿತ ಭಾರತವನ್ನಾಗಿ, ಅಭಿವೃದ್ಧಿ ಹೊಂದಿದ ದೇಶವಾಗಿ ಪರಿವರ್ತನೆ ಮಾಡುವ ಸಂಕಲ್ಪಕ್ಕೆ ದೊಡ್ಡ ಶಕ್ತಿ ತುಂಬಲು ಸಮಾಜದ ವಿವಿಧ ಸ್ತರದ ಹಾಗೂ ಬೇರೆ ಬೇರೆ ಕ್ಷೇತ್ರದವರನ್ನು ಗುರುತಿಸಿ ಎಲ್ಲರನ್ನೂ ಸದಸ್ಯತ್ವದ ಅಭಿಯಾನದಲ್ಲಿ ನೊಂದಣಿ ಮಾಡುವ ಗುರಿಯನ್ನು ಹೊಂದಲಾಗಿದೆ ಎಂದು ಅವರು ತಿಳಿಸಿದರು.

**ಲಕ್ಷಾಂತರ ಜನರ ಸಂಕಟಕ್ಕೆ ಸ್ಪಂದನೆ:** ಕೋವಿಡ್ ಸಂದರ್ಭದಲ್ಲಿ ಜನರಿಗೆ ಸ್ಪಂದಿಸಿದ ಬಿಜೆಪಿ ಒಂದು ವಿಭಿನ್ನ ಸೇವಾಪರ ಪಕ್ಷ, ಮತ್ತೊಂದು ಕಡೆ ಬಿಜೆಪಿ ಸೇವೆಯೇ ಸಂಘಟನೆ ಎಂಬ ಶ್ರೇಷ್ಠ ಭಾವನೆಯಿಂದ ದೇಶ ಮೊದಲು, ನಂತರ ಪಕ್ಷ ಎಂಬ ಉತ್ತಮ ಸಿದ್ಧಾಂತವನ್ನು ಹೊಂದಿದೆ. ಕೋವಿಡ್ ದಿನಗಳಲ್ಲಿ ದೇಶದ ಇತರ ರಾಜಕೀಯ ಪಕ್ಷದವರು ಮನೆಯಲ್ಲಿ ಕೂತಿದ್ದರು. ಆದರೆ, ಬಿಜೆಪಿ ದೇಶದ ಲಕ್ಷಾಂತರ ಜನರ ಸಂಕಷ್ಟಕ್ಕೆ ಸ್ಪಂದಿಸಿತ್ತು. ಮಾಜಿ ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ, ಮುಖಂಡರು, ಕಾರ್ಯಕರ್ತರು ಆಹಾರದ ಕಿಟ್ ಮಾತ್ರವಲ್ಲದೆ ಇಡೀ ರಾಜ್ಯದಲ್ಲಿ ಉಚಿತ ಔಷಧಿಯನ್ನು ಕೊಡುವ ಸತ್ಕಾರ್ಯವನ್ನು ಮಾಡಿದ್ದಾರೆ ಎಂದು ಅವರು ಸ್ಮರಿಸಿದರು.

**ಬಿಜೆಪಿ ದೇಶಹಿತದ ಪಕ್ಷ:** ಕರ್ನಾಟಕ ರಾಜ್ಯ ಸಹ-ಉಸ್ತುವಾರಿಗಳಾದ ಶ್ರೀ ಸುಧಾಕರ ರೆಡ್ಡಿ ಅವರು ಮಾತನಾಡಿ, ಇಲ್ಲಿ ಹಬ್ಬದ ವಾತಾವರಣ ಮೂಡಿದ್ದು ಸದಸ್ಯತಾ ಅಭಿಯಾನದ ಗುರಿ ಮೀರಿ ಸಾಧನೆ ಮಾಡಿ ಎಂದು ಅಭಿನಂದಿಸಿದರು. ಬಿಜೆಪಿ ಸೇವೆ, ನಿಷ್ಠೆ ಹಾಗೂ ದೇಶಹಿತದ



ಪಕ್ಷವಾಗಿದೆ ಆದರೆ ಕಾಂಗ್ರೆಸ್ ಕುಟುಂಬದ ಪಕ್ಷ ಎಂದು ಟೀಕಿಸಿದರು. ಕಾಂಗ್ರೆಸ್, ಕುಟುಂಬ ಮೊದಲು, ದೇಶ ಕೊನೆಯಲ್ಲಿ ಎಂಬ ಧ್ಯೇಯಹೊಂದಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಪಕ್ಷವನ್ನು ವಿದೇಶೀಯ ಸ್ಥಾಪಿಸಿದರೆ, ನಮ್ಮದು ಭಾರತೀಯರೇ ಸ್ಥಾಪಿಸಿದ ಪಕ್ಷ ಎಂದು ತಿಳಿಸಿದರು. ಕಾಂಗ್ರೆಸ್‌ನದ್ದು ಬೆಲೆ ಏರಿಸುವ, ಬೇಜವಾಬ್ದಾರಿ, ಹಗರಣಗಳ ಸರಕಾರ, ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಿಗೆ ಮುಖ್ಯಮಂತ್ರಿಗೆ ಆ ಹುದ್ದೆಯಲ್ಲಿ ಮುಂದುವರೆಯುವ ಹಕ್ಕಿಲ್ಲ ಅವರು ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.



**ಮತ ಹಾಕಿದ ಶೇ.75 ರಷ್ಟು ಜನರ ಸದಸ್ಯತ್ವ ಗುರಿ:** ವಿಧಾನಸಭೆ ಪ್ರತಿಪಕ್ಷ ನಾಯಕರಾದ ಶ್ರೀ ಆರ್. ಅಶೋಕ್ ರವರು ಮಾತನಾಡಿ ಕಳೆದ ಚುನಾವಣೆಗಳಲ್ಲಿ ಪಕ್ಷ ಪಡೆದ ಮತಗಳಲ್ಲಿ ಶೇ.75ರಷ್ಟು ಮಂದಿಯ ಸದಸ್ಯತ್ವ ನೋಂದಣಿಗೆ ಒತ್ತು ನೀಡುವಂತೆ ರಾಷ್ಟ್ರೀ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್.ಸಂತೋಷ್ ಅವರು ಗುರಿ ನೀಡಿದ್ದಾರೆ. ಕಳೆದ ಚುನಾವಣೆಗಳಲ್ಲಿ ಬಿಜೆಪಿ ಮೂರನೇ ಸ್ಥಾನದಲ್ಲಿರುವ 'ಸಿ' ಶ್ರೇಣಿಯಲ್ಲಿ ಹೆಚ್ಚು ಸದಸ್ಯತ್ವ ಮಾಡಿಸಬೇಕು. ಪೇಜ್ ಪ್ರಮುಖರ ಹಂತಕ್ಕೆ ಹೋದರೆ ಶೇ.75ರಷ್ಟು ಸದಸ್ಯತ್ವದ ಗುರಿಸಾಧನೆ ಸಾಧ್ಯ ಎಂದು ಅವರು ಸಲಹೆ ನೀಡಿದರು.



**ಯಾವುದೇ ಸಂದರ್ಭದಲ್ಲಿ ಚುನಾವಣೆ:** ವಿಧಾನಪರಿಷತ್ ಮೇಲ್ಮನೆ ಪ್ರತಿಪಕ್ಷ ನಾಯಕರಾದ ಶ್ರೀ ಛಲವಾದಿ ನಾರಾಯಣಸ್ವಾಮಿ ರವರು ಮಾತನಾಡಿ ರಾಜ್ಯದಲ್ಲಿ ಯಾವುದೇ ಸಂದರ್ಭದಲ್ಲೂ ರಾಜ್ಯ ಚುನಾವಣೆ ಎದುರಿಸುವ ಸ್ಥಿತಿ ಬರಬಹುದು. ಹೀಗಾಗಿ ಸದಸ್ಯತ್ವ ನೋಂದಣಿ ಕಾರ್ಯವು ಹಬ್ಬದ ಮಾದರಿಯಲ್ಲಿ ನಡೆಯಬೇಕು ಎಂದು ಹೇಳಿದರು.



ಸದಸ್ಯತ್ವ ಅಭಿಯಾನದ ಸಂಚಾಲಕರು ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಸ್.ಎಸ್. ನಂದೀಶ್ ರೆಡ್ಡಿ ರವರು ಮಾತನಾಡಿ ದೇಶಾದ್ಯಂತ ಒಂದೇ ದಿನದಲ್ಲಿ 50.31 ಲಕ್ಷಕ್ಕೂ ಹೆಚ್ಚು ಜನರು ಸದಸ್ಯರಾಗಿದ್ದಾರೆ. ರಾಜ್ಯದಲ್ಲಿ 5 ಲಕ್ಷಕ್ಕೂ ಹೆಚ್ಚು ಸದಸ್ಯರ ನೋಂದಣಿಯಾಗಿದೆ. ಮುಂದಿನ 40-45 ದಿನ ಎರಡು ಹಂತಗಳ ಅಭಿಯಾನದಲ್ಲಿ ಭಾಗವಹಿಸೋಣ ಎಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ, ರಾಜ್ಯ ಉಸ್ತುವಾರಿಗಳಾದ ಶ್ರೀ ಸುಧಾಕರ ರೆಡ್ಡಿ, ಸಂಸದರಾದ ಶ್ರೀ ಗೋವಿಂದ ಕಾರಜೋಳ, ಶ್ರೀ ಪಿ.ಸಿ.ಮೋಹನ್, ಮಾಜಿ ಉಪಮುಖ್ಯಮಂತ್ರಿಗಳಾದ ಡಾ. ಅಶ್ವತ್ಥನಾರಾಯಣ್, ವಿಧಾನಪರಿಷತ್ ಸದಸ್ಯರಾದ ಡಾ. ಸಿ.ಟಿ. ರವಿ, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ. ಸುನೀಲ್ ಕುಮಾರ್, ಶ್ರೀ ಜೆ. ಪ್ರೀತಂ ಗೌಡ, ಶಾಸಕರಾದ ಶ್ರೀ ಕೆ. ಗೋಪಾಲಯ್ಯ, ಶ್ರೀ ರಾಮಮೂರ್ತಿ, ಶ್ರೀ ಆರ್. ವಿಶ್ವನಾಥ್, ಶ್ರೀ ಮುನಿರತ್ನ, ಪ್ರಕೋಷ್ಠಗಳ ರಾಜ್ಯ ಸಂಯೋಜಕರಾದ ಶ್ರೀ ಎಸ್. ದತ್ತಾತ್ರಿ, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಕಾರ್ಯಕಾರಿಣಿ ಸದಸ್ಯರು, ರಾಜ್ಯ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು ಹಾಗೂ ಪಕ್ಷದ ಮುಖಂಡರು ಉಪಸ್ಥಿತರಿದ್ದರು.

**88 00 00 2024 ಈ ನಂಬರ್‌ಗೆ**

**ಮಿಸ್ಡ್ ಕಾಲ್ ನೀಡುವುದರ ಮೂಲಕ ಬಿಜೆಪಿಯ ಸದಸ್ಯರಾಗೋಣ**

**ವಿಕಸಿತ ಭಾರತದ ನಿರ್ಮಾಣದಲ್ಲಿ ಭಾಗಿಯಾಗೋಣ...**







## ಬಿಜೆಪಿ ವತಿಯಿಂದ ಹಮ್ಮಿಕೊಂಡಿರುವ ಮುಂಬರುವ ಕಾರ್ಯಕ್ರಮಗಳು

- ಎಲ್ಲಾ ಜಿಲ್ಲೆಗಳಲ್ಲಿ 17.09.2024 ರಿಂದ 19.09.2024ರ ವರೆಗೆ ರಕ್ತದಾನ ಶಿಬಿರ.
- ಸೆಪ್ಟೆಂಬರ್ 18 ರಿಂದ ಸೆಪ್ಟೆಂಬರ್ 24 ರವರೆಗೆ ಎಲ್ಲಾ ಶಾಲೆ ಮತ್ತು ಆಸ್ಪತ್ರೆ ಆವರಣದಲ್ಲಿ ಸ್ವಚ್ಛತಾ ಅಭಿಯಾನ.
- ಪ್ಯಾರಿಸ್ ಪ್ಯಾರಾಲಿಂಪಿಕ್ಸ್ - 2024 ರ ಎಲ್ಲಾ ಭಾಗವಹಿಸಿದವರಿಗೆ ರಾಜ್ಯ ಕಾರ್ಯಾಲಯದಲ್ಲಿ ಅಭಿನಂದನಾ ಕಾರ್ಯಕ್ರಮ ಮತ್ತು ದಿವ್ಯಾಂಗರಿಗೆ ಸಹಾಯಕ ಸಲಕರಣೆ ವಿತರಣೆ.
- ಸೆಪ್ಟೆಂಬರ್ 23 ರಂದು ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 60 ವರ್ಷ ಮೇಲ್ಪಟ್ಟ ವೃದ್ಧ ಮಹಿಳೆಯರಿಗೆ ಉಚಿತ ಆರೋಗ್ಯ ಶಿಬಿರ.
- ಗೌರವಾನ್ವಿತ ಪ್ರಧಾನಿಯವರ ಜೀವನ ಮತ್ತು ಸಾಧನೆಗಳ ಚಿತ್ರ ಪ್ರದರ್ಶನ.
- ಡಾ. ಆರ್. ಬಾಲಸುಬ್ರಮಣ್ಯಂ ಅವರು ಬರೆದಿರುವ ಪವರ್ ವಿಥ್‌ಇನ್: ದಿ ಲೀಡರ್‌ಶಿಪ್ ಲೆಗಸಿ ಆಫ್ ನರೇಂದ್ರ ಮೋದಿ ಪುಸ್ತಕದ ವಿಷಯಗಳನ್ನಾಧಾರಿಸಿ ಸೆಮಿನಾರ್.
- ಕಲೆ ಮತ್ತು ಚಿತ್ರಕಲೆ, ರಂಗೋಲಿ, ಭಾಷಣ ಹಾಗೂ ರಸಪ್ರಶ್ನೆ ಸ್ಪರ್ಧೆ.
- ಸ್ಥಳೀಯ ಅರಣ್ಯ ಇಲಾಖೆ ಮತ್ತು ಪರಿಸರ ಸಚಿವಾಲಯದ ಸಮನ್ವಯದೊಂದಿಗೆ ಬೃಹತ್ ಟ್ರೀ ಪ್ಲಾಂಟೇಶನ್ ಡ್ರೈವ್ ಮತ್ತು ಏಕ್ ಪೆಡ್ ಮಾ ಕೆ ನಾಮ್ ಅಭಿಯಾನವನ್ನು ಸೆಪ್ಟೆಂಬರ್ 17 ರಿಂದ ಅಕ್ಟೋಬರ್ 2 ರವರೆಗೆ ದೊಡ್ಡ ಪ್ರಮಾಣದಲ್ಲಿ ಆಯೋಜನೆ.
- ಪ್ರತಿ ಬೂತ್‌ನಲ್ಲಿ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಜೀವನ ಮತ್ತು ಕೊಡುಗೆಯ ಸ್ಮರಣೆ ಮತ್ತು ಪುಷ್ಪ ನಮನ.
- ಎಲ್ಲಾ ಕಾರ್ಯಕರ್ತರು ಬೂತ್ ಮಟ್ಟದಲ್ಲಿ ಅಲ್ಪಾವಧಿ ವಿಸ್ತಾರಕ್‌ಗಳಾಗಿ ಸಮಯವನ್ನು ನೀಡಿ ಪ್ರತಿ ಬೂತ್‌ನಲ್ಲಿ ಕನಿಷ್ಠ 100 ಸದಸ್ಯರು ಮನೆ-ಮನೆಗೆ ತೆರಳಿ ಅಭಿಯಾನ ನಡೆಸಿ ಪ್ರಾಥಮಿಕ ಸದಸ್ಯರ ಸಭೆ ಆಯೋಜನೆ.
- ಅಕ್ಟೋಬರ್ 2 ರಂದು ಮಹಾತ್ಮ ಗಾಂಧಿಯವರ ಪ್ರತಿಮೆಗಳ ಸುತ್ತಲೂ ಸ್ವಚ್ಛತಾ ಅಭಿಯಾನ ಹಾಗೂ ಪುಷ್ಪ ನಮನ ಕಾರ್ಯಕ್ರಮ. ಅಂದು ಕನಿಷ್ಠ ಒಂದು ಖಾದಿ ಉತ್ಪನ್ನವನ್ನು ಖರೀದಿಸಿ ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಉತ್ತೇಜನ ನೀಡುವುದು.




# ಸದಸ್ಯತಾ ಅಭಿಯಾನ - 2024

## ರಾಜ್ಯ ಹಾಗೂ ಜಿಲ್ಲಾ ಕಾರ್ಯಾಗಾರಗಳ ವರದಿ

**ಸದಸ್ಯತಾ ಅಭಿಯಾನ ಎಂಬುದು ಬಿಜೆಪಿಯಲ್ಲಿ ನಿರಂತರವಾಗಿ ಅಳವಡಿಸಿಕೊಂಡಿರುವ ಪ್ರಕ್ರಿಯೆ. 2018ರ ಬಿಜೆಪಿಯ ಸದಸ್ಯತಾ ಅಭಿಯಾನದಲ್ಲಿ 19.8 ಕೋಟಿ ಸದಸ್ಯರ ನೊಂದಾವಣೆಯ ಮೂಲಕ ವಿಶ್ವದ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರ ಹೊಮ್ಮಿದೆ. 2024 ರಿಂದ 2030ರ ಅವಧಿಗೆ ಮತ್ತೆ ಸದಸ್ಯರನ್ನು ನೊಂದಾಯಿಸುವ ಪ್ರಕ್ರಿಯೆಗೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಹಾಗೂ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ. ನಡ್ಡಾ ಅವರು ಚಾಲನೆ ನೀಡಿದ್ದಾರೆ. ಸುಮಾರು ಒಂದು ತಿಂಗಳುಗಳ ಕಾಲ ನಡೆಯುವ ಈ ಅಭಿಯಾನವನ್ನು ನಿರ್ವಹಿಸಲು ರಾಷ್ಟ್ರೀಯ ಮಟ್ಟದಿಂದ ಮಂಡಲ ಮಟ್ಟದವರೆಗೆ ತಂಡಗಳನ್ನು ರಚಿಸಿ, ಆ ತಂಡಗಳಿಗೆ ಆಯಾ ಹಂತದಲ್ಲಿ ಕಾರ್ಯಾಗಾರಗಳನ್ನೂ ಮಾಡಲಾಗಿದೆ. ಪ್ರತೀ ಬೂತ್‌ನಲ್ಲಿ ಕನಿಷ್ಠ 300 ಸದಸ್ಯರನ್ನು ನೊಂದಾಯಿಸುವ ಗುರಿಯನ್ನೂ ನೀಡಲಾಗಿದೆ.**




**ಬೆಂ**ಗಳೂರಿನ ಅರಮನೆ ಮೈದಾನದ ವೈಟ್ ಪೆಟಲ್ಸ್ ಸಭಾಂಗಣದಲ್ಲಿ ಆಗಸ್ಟ್ 24 ರಂದು ಸದಸ್ಯತ್ವ ಅಭಿಯಾನದ ರಾಜ್ಯ ಮಟ್ಟದ ಕಾರ್ಯಾಗಾರ ನಡೆಯಿತು. ಲೋಗೋ ಮತ್ತು ಮಿಸ್ಡ್‌ಕಾಲ್ ದೂರವಾಣಿ ಸಂಖ್ಯೆಯನ್ನು ಬಿಜೆಪಿ ರಾಜ್ಯ ಅಧ್ಯಕರಾದ ಶ್ರೀ ಬಿ.ವೈ. ವಿಜಯೇಂದ್ರ ಅವರು ಬಿಡುಗಡೆ ಮಾಡಿದರು. ಕಾರ್ಯಾಗಾರವನ್ನು ಉದ್ಘಾಟಿಸಿದ ಬಿಜೆಪಿ ರಾಷ್ಟ್ರೀಯ ಕಾರ್ಯದರ್ಶಿ ಶ್ರೀ ರಿತುರಾಜ್ ಸಿನ್ಹ, ಕರ್ನಾಟಕವು ದಕ್ಷಿಣ ಭಾರತದಲ್ಲಿ ಸದಸ್ಯತ್ವದಲ್ಲಿ ಮೊದಲ ಸ್ಥಾನದಲ್ಲಿ ಇರುವಂತೆ ನೋಡಿಕೊಳ್ಳಿ ಎಂಬ ಪ್ರೋತ್ಸಾಹದ ಮಾತನಾಡಿದರು. ವಿರಾಟ್ ಬಿಜೆಪಿ ಪರಿವಾರಕ್ಕೆ ನಮ್ಮ ಹೆಸರು ಮತ್ತೆ ನೋಂದಾಯಿಸುವುದರ ಜೊತೆಗೆ ಹೊಸ ಸದಸ್ಯರನ್ನೂ ಪರಿಚಯಿಸಬೇಕು ಎಂದು ಮನವಿ ಮಾಡಿದರು. ಪ್ರತಿ ಬೂತ್‌ನಲ್ಲಿ ಕನಿಷ್ಠ 300 ಸದಸ್ಯತ್ವದ ಗುರಿಯೊಂದಿಗೆ ಮನೆ ಮನೆ ಭೇಟಿ ಮಾಡಿ, ಯಾವುದೇ ಬೂತ್‌ನ್ನು ಬಿಡದೆ ಪ್ರತೀ ಬೂತ್‌ನಲ್ಲೂ ಸದಸ್ಯರನ್ನಾಗಿ ಮಾಡಬೇಕು, ಶಕ್ತಿಯುತ ಬೂತ್‌ಗಳಲ್ಲಿ ಗರಿಷ್ಟ ಸಂಖ್ಯೆಯ ಸದಸ್ಯರನ್ನು ನೋಂದಾಯಿಸಬೇಕು ಎಂದು ಕರೆ ನೀಡಿದರು.

ವಿಪಕ್ಷ ನಾಯಕ ಶ್ರೀ ಆರ್. ಅಶೋಕ್ ಅವರು ಮಾತನಾಡಿ, ಸದಸ್ಯತ್ವ ಅಭಿಯಾನ ಬಿಜೆಪಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ನಮ್ಮದು ಆಂತರಿಕ ಪ್ರಜಾಪ್ರಭುತ್ವವನ್ನು ಅಳವಡಿಸಿಕೊಂಡಿರುವ ಪಕ್ಷ ಎಂದರು. ರಾಜ್ಯ ಸಹ ಪ್ರಭಾರಿ ಶ್ರೀ ಸುಧಾಕರ ರೆಡ್ಡಿ, ವಿಧಾನಪರಿಷತ್ ವಿಪಕ್ಷ ನಾಯಕ ಶ್ರೀ ಛಲವಾದಿ ನಾರಾಯಣಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ್, ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ನಂದೀಶ್ ರೆಡ್ಡಿ, ಶ್ರೀ ಪಿ.ರಾಜೀವ್, ಶ್ರೀ ಸುನೀಲ್ ಕುಮಾರ್, ಶ್ರೀ ಪ್ರೀತಂ ಗೌಡ, ಶಾಸಕರಾದ ಶ್ರೀ ಮಹೇಶ್ ಟೆಂಗಿನಕಾಯಿ, ಶ್ರೀ ದೊಡ್ಡನಗೌಡ ಪಾಟೀಲ್, ವಿಧಾನಪರಿಷತ್ ಸದಸ್ಯ ಶ್ರೀ ಪ್ರತಾಪ್ ಸಿಂಹ ನಾಯಕ್, ಸಂಸದ ಶ್ರೀ ಪಿ.ಸಿ.ಮೋಹನ್ ಮೊದಲಾದ ಪ್ರಮುಖರು ವೇದಿಕೆಯಲ್ಲಿದ್ದರು.

ಶ್ರೀಮತಿ ಪ್ರತಿಮಾ ಸುಭಾಷ್ ವಂದೇಮಾತರಂ ಹಾಡಿದರು. ಶಾಸಕ ಶ್ರೀ ಮಹೇಶ್ ಟೆಂಗಿನಕಾಯಿ ಕಾರ್ಯಕ್ರಮ ನಿರ್ವಹಿಸಿದರು. ಸಂಸದರಾದ ಶ್ರೀ ಪಿ.ಸಿ. ಮೋಹನ್ ಸ್ವಾಗತಿಸಿದರು. ಅಭಿಯಾನದ ರಾಜ್ಯ ಸಂಚಾಲಕ ಮತ್ತು ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ನಂದೀಶ್ ರೆಡ್ಡಿ ರವರು ಪವರ್ ಪಾಯಿಂಟ್ ಮೂಲಕ ಸದಸ್ಯತ್ವ ಪ್ರಕ್ರಿಯೆಯ ಮಾಹಿತಿ ನೀಡಿದರು. ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಮಾಜಿ ಸಂಸದರು, ಮಾಜಿ ಶಾಸಕರುಗಳು, ರಾಜ್ಯ ಪದಾಧಿಕಾರಿಗಳು ಮತ್ತು ಪಕ್ಷದ ಆಹ್ವಾನಿತ ಮುಖಂಡರು ಭಾಗವಹಿಸಿದ್ದರು.



## ಸದಸ್ಯತಾ ಅಭಿಯಾನಕ್ಕೆ 7 ಟಿ ಸೂತ್ರ

**– ರಿತುರಾಜ್ ಸಿನ್ಹ, ರಾಜ್ಯ ಸದಸ್ಯತಾ ಪ್ರಭಾರಿ**

ಸದಸ್ಯತಾ ಅಭಿಯಾನಕ್ಕೆ **7 ಟಿ** ಸೂತ್ರವನ್ನು ಅಳವಡಿಸಿಕೊಳ್ಳಬೇಕು.

**ಟಾಸ್ಕ್** – ಗುರಿ ಮುಟ್ಟುವ ಸವಾಲು

**ಟೈಮ್‌ಲೈನ್** – ಕಾಲಮಿತಿಯೊಳಗೆ ಗುರಿ ಸಾಧನೆ

**ಟೀಂ** – ಅಭಿಯಾನಕ್ಕಾಗಿ ತಂಡಗಳ ರಚನೆ

**ಟಾರ್ಗೆಟ್** – ಸಂಘಟನೆ ನಿಗದಿ ಪಡಿಸುವ ಗುರಿ

**ಟ್ರ್ಯಾಕಿಂಗ್** – ತಂಡ ಅಭಿಯಾನದಲ್ಲಿ ಸಾಗುತ್ತಿರುವ ಪ್ರಗತಿ ಹಾಗೂ ಸಾಧನೆಯ ಹಾದಿಯನ್ನು ಗುರುತಿಸುವುದು ಅಗತ್ಯತೆಗೆ ತಕ್ಕಂತೆ, ಆಯಾ ಸಂದರ್ಭಕ್ಕನುಗುಣವಾಗಿ ಯೋಜನೆಗಳನ್ನು ರೂಪಿಸುವುದು

**ಟ್ರಾವೆಲಿಂಗ್** – ಬೂತ್ ಮಟ್ಟದವರೆಡಗೂ ನಿರಂತರ ಪ್ರವಾಸ ಕೈಗೊಳ್ಳುವುದು

**ಟಚ್ ಥೆರಪಿ** – ಕಾರ್ಯ ಯೋಜನೆಯ ಸಂಪರ್ಕ ಅನುಷ್ಠಾನದಲ್ಲಿ ಕಡೇಗಳಿಗೆಯ ಪ್ರಯತ್ನಗಳನ್ನು ನಡೆಸುವುದು ಎಂಬ 7 ಟಿ ಗಳ ಮೂಲಕ ಗುರಿಯೆಡೆಗೆ ಸಾಗಬೇಕು

# ಜಿಲ್ಲಾ ಕಾರ್ಯಗಾರಗಳ ವರದಿ

**ದಕ್ಷಿಣ ಕನ್ನಡ :** ಬಿಜೆಪಿ ಸದಸ್ಯತಾ ಅಭಿಯಾನ-2024ರ ಕಾರ್ಯಾಗಾರವು ದ.ಕ. ಬಿಜೆಪಿ ಕಛೇರಿಯ ಸಭಾಂಗಣದಲ್ಲಿ ನಡೆಯಿತು. ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಕಾರ್ಯಕ್ರಮವನ್ನು ಉದ್ಘಾಟಿಸಿದರು.




ದ.ಕ. ಬಿಜೆಪಿ ಜಿಲ್ಲಾಧ್ಯಕ್ಷರಾದ ಶ್ರೀ ಸತೀಶ್ ಕುಂಪಲ, ವಿಧಾನ ಪರಿಷತ್ ಸದಸ್ಯ ಹಾಗೂ ದ.ಕ. ಜಿಲ್ಲಾ ಸದಸ್ಯತಾ ಅಭಿಯಾನ ಪ್ರಭಾರಿ ಶ್ರೀ ಪ್ರತಾಪಸಿಂಹ ನಾಯಕ್ ಮತ್ತು ಶ್ರೀಮತಿ ಭಾರತಿ ಶೆಟ್ಟಿ , ಮ.ನ.ಪಾ. ಮಹಾಪೌರರಾದ ಶ್ರೀ ಸುಧೀರ್ ಶೆಟ್ಟಿ, ಶಾಸಕರಾದ ಡಾ. ವೈ. ಭರತ್ ಶೆಟ್ಟಿ, ವಿಭಾಗ ಪ್ರಭಾರಿ ಶ್ರೀ ಉದಯ ಕುಮಾರ್ ಶೆಟ್ಟಿ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪ್ರೇಮಾನಂದ ಶೆಟ್ಟಿ, ಶ್ರೀ ಯತೀಶ್ ಆರ್ವಾರ್, ಶ್ರೀ ಕಿಶೋರ್ ಕುಮಾರ್ ಬೊಟ್ಯಾಡಿ, ಪ್ರಮುಖರಾದ ಶ್ರೀ ದೇವದಾಸ ಶೆಟ್ಟಿ, ಕಸ್ತೂರಿ ಪಂಜ, ಶ್ರೀ ವಿಕಾಸ್ ಪುತ್ತೂರು, ಶ್ರೀ ನಿತೀಶ್ ಶಾಂತಿವನ, ಶ್ರೀ ವಿಜಯ ಕುಮಾರ್ ಶೆಟ್ಟಿ, ಮಾಜಿ ಶಾಸಕರಾದ ಶ್ರೀ ಬಾಲಕೃಷ್ಣ ಭಟ್, ಶ್ರೀ ಕೆ. ಮೋನಪ್ಪ ಭಂಡಾರಿ, ಉಪಮೇಯರ್ ಶ್ರೀಮತಿ ಸುನೀತಾ ಹಾಗೂ ಜಿಲ್ಲಾ ಹಾಗೂ ಮಂಡಲದ ಇತರ ಆಪೇಕ್ಷಿತರು ಉಪಸ್ಥಿತರಿದ್ದರು

**ಉಡುಪಿ :** ಉಡುಪಿ ಜಿಲ್ಲಾ ಸದಸ್ಯತಾ ಅಭಿಯಾನ ಕಾರ್ಯಾಗಾರ ಜಿಲ್ಲಾಧ್ಯಕ್ಷರಾದ ಶ್ರೀ ಕಿಶೋರ್ ಕುಮಾರ್ ಕುಂದಾಪುರ ಅವರ ಅಧ್ಯಕ್ಷತೆಯಲ್ಲಿ ಆ.28ರಂದು ಬಿಜೆಪಿ ಜಿಲ್ಲಾ ಕಾರ್ಯಾಲಯದಲ್ಲಿ ನಡೆಯಿತು.

ಶ್ರೀ ಕಿಶೋರ್ ಕುಮಾರ್ ಕುಂದಾಪುರ ಅವರು ಪ್ರಾಸ್ತಾಕವಾಗಿ ಮಾತನಾಡಿದರು. ಸದಸ್ಯತಾ ಅಭಿಯಾನ 2024ರ ಸದಸ್ಯತ್ವ ಪ್ರಕ್ರಿಯೆಯ ಮಾಹಿತಿ ಪತ್ರಕವನ್ನು ಉಡುಪಿ ಶಾಸಕ ಶ್ರೀ ಯಶ್‌ಪಾಲ್ ಎ. ಸುವರ್ಣ ಅವರು ಬಿಡುಗಡೆ ಮಾಡಿದರು. ಸದಸ್ಯತಾ ಅಭಿಯಾನದ ರಾಜ್ಯ ಸಮಿತಿ ಸದಸ್ಯ, ವಿಧಾನ ಪರಿಷತ್ ಸದಸ್ಯ ಶ್ರೀ ಪ್ರತಾಪ್ ಸಿಂಹ ನಾಯಕ್ ಜಿಲ್ಲಾ ಸಂಚಾಲಕ ಶ್ರೀ ಮಟ್ಟಾರು ರತ್ನಾಕರ ಹೆಗ್ಡೆ, ವಿಭಾಗ ಪ್ರಭಾರಿ ಶ್ರೀ ಕೆ.ಉದಯಕುಮಾರ್ ಶೆಟ್ಟಿ ಕಾರ್ಯಾಗಾರದ ಅಪೇಕ್ಷಿತರು ಸಭೆಯಲ್ಲಿ ಉಪಸ್ಥಿತರಿದ್ದರು. ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾಗೂ ಸದಸ್ಯತಾ ಅಭಿಯಾನದ ಜಿಲ್ಲಾ ಸಂಚಾಲಕ ದಿನಕರ ಶೆಟ್ಟಿ ಹೆಗಡೆ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

**ಕೊಡಗು :** ಕೊಡಗುಜಿಲ್ಲೆಯ ಸದಸ್ಯತಾ ಅಭಿಯಾನದ ಕಾರ್ಯಾಗಾರ 27/08/24 ರಂದು ಜಿಲ್ಲಾ ಬಿಜೆಪಿ ಅಧ್ಯಕ್ಷರಾದ ಶ್ರೀ ಕಾಳಪ್ಪ ರವರ ಅಧ್ಯಕ್ಷ ತೆ ಯಲ್ಲಿ ನಡೆಯಿತು. ಈ ಕಾರ್ಯಾಗಾರವನ್ನು ಶ್ರೀ ವಿಕಾಸ್ ಪುತ್ತೂರು ನಡೆಸಿ ಕೊಟ್ಟರು. ಜಿಲ್ಲಾ ಸಂಚಾಲಕರಾದ ಶ್ರೀ ಲೋಕೇಶ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಮಹೇಶ್ ಜೈನಿ, ಶಾಸಕರುಗಳಾದ ಶ್ರೀ ಕೆ. ಜಿ. ಬೋಪಯ್ಯ ಶ್ರೀ ಎಸ್.ಜಿ.ಮೇದಪ್ಪ, ಶ್ರೀ ಬಾಂಡ್ ಗಣಪತಿ, ಶ್ರೀ ಕುಶಾಲಪ್ಪ, ಶ್ರೀ ಎಂ. ಬಿ. ದೇವಯ್ಯ, ಶ್ರೀ ಬಿ.ಎ. ಹರೀಶ್ ಸೇರಿದಂತೆ ಪಕ್ಷದ ಪ್ರಮುಖರು ಭಾಗವಹಿಸಿದ್ದರು

**ಮೈಸೂರು ನಗರ :** ಮೈಸೂರು ನಗರ ಜಿಲ್ಲಾ ಸದಸ್ಯತಾ ಅಭಿಯಾದ ಕಾರ್ಯಗಾರ ದಿನಾಂಕ 27-8-2024ರಂದು ಬಿಜೆಪಿ ಜಿಲ್ಲಾ ಕಾರ್ಯಲಯದಲ್ಲಿ ನಗರ ಜಿಲ್ಲಾಧ್ಯಕ್ಷರಾದ ಶ್ರೀ ಎಲ್ ನಾಗೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಸದರಾದ ಶ್ರೀ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಉದ್ಘಾಟನಾ ಭಾಷಣ ಮಾಡಿ ಕಿರು ಹೊತ್ತಿಗೆಯನ್ನು ಬಿಡುಗಡೆ ಮಾಡಿದರು.



ನಗರ ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಎಂ ರಾಜೇಂದ್ರ, ಮೈಸೂರು ವಿಭಾಗ ಪ್ರಭಾರಿ ಶ್ರೀ ಮೈ.ವಿ. ರವಿಶಂಕರ್, ಮಾಜಿ ಮೇಯರ್ ಶ್ರೀ ಸಂದೇಶ್ ಸ್ವಾಮಿ, ಶ್ರೀ ಎನ್.ವಿ. ಫಣೀಶ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಎಚ್.ಜಿ. ಗಿರಿಧರ್, ಶ್ರೀ ಬಿ.ಎಂ. ರಘು, ಶ್ರೀ ಮಹೇಶ್ ಹಾಗು ಇತರ ಜಿಲ್ಲಾ ಹಾಗು ಮಂಡಲ ಪದಾಧಿಕಾರಿಗಳು ಉಪಸ್ಥಿತರಿದ್ದರು

**ಚಾಮರಾಜ ನಗರ :** ಚಾಮರಾಜ ಜಿಲ್ಲಾ ಸದಸ್ಯತಾ ಅಭಿಯಾನದ ಕಾರ್ಯಾಗಾರ ದಿನಾಂಕ 28-8-2024ರಂದು ಬಿಜೆಪಿ ಜಿಲ್ಲಾ ಕಾರ್ಯಲಯದಲ್ಲಿ ನಗರ ಜಿಲ್ಲಾಧ್ಯಕ್ಷರಾದ ಶ್ರೀ ಸಿ ಎಸ್ ನಿರಂಜನ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡಯಿತು. ಕಾರ್ಯಕ್ರಮದಲ್ಲಿ ಮಾಜಿ ಸಂಸದ ಶ್ರೀ ಮುನಿಸ್ವಾಮಿ, ಅಭಿಯಾನ ಸಂಚಾಲಕರಾದ ಶ್ರೀ ಹೊನ್ನೂರು ಮಹದೇವಸ್ವಾಮಿ, ರಾಜ್ಯ ಬಿಜೆಪಿ ಉಪಾಧ್ಯಕ್ಷ ಶ್ರೀ ಎನ್. ಮಹೇಶ್, ಮಾಜಿ ಶಾಸಕರಾದ ಶ್ರೀ ಎಸ್. ಬಾಲರಾಜು,

ವಿಧಾನ ಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಶ್ರೀ ಎಂ.ರಾಮಚಂದ್ರ, ಓಬಿಸಿ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಶ್ರೀ ನೂರೊಂದು ಶೆಟ್ಟಿ, ಮಾಜಿ ಅಧ್ಯಕ್ಷರಾದ ಶ್ರೀ ನಾರಾಯಣಪ್ರಸಾದ್, ಶ್ರೀ ಆರ್.ಸುಂದರ್. ಚಾಮುಲ್ ಅಧ್ಯಕ್ಷ ಶ್ರೀ ವೈ.ಸಿ.ನಾಗೇಂದ್ರ, ಡಾ. ಎ.ಆರ್.ಬಾಬು, ಪ್ರಧಾನ ಕಾರ್ಯದರ್ಶಿ ಶ್ರೀ ಪಿ.ವೃಷಬೇಂದ್ರಪ್ಪ, ಶ್ರೀ ಪ್ರಕಾಶ್ ಮೂಡ್ನಕೂಡು, ಶ್ರೀ ಮಹದೇವ ಸ್ವಾಮಿ ಹೊನ್ನೂರು ಹಾಗೂ ಇತರ ಜಿಲ್ಲಾ ಹಾಗು ಮಂಡಲ ಪದಾಧಿಕಾರಿಗಳು ಉಪಸ್ಥಿತರಿದ್ದರು

**ಶಿವಮೊಗ್ಗ :** ಶಿವಮೊಗ್ಗ ಜಿಲ್ಲಾ ಸದಸ್ಯತಾ ಅಭಿಯಾನದ ಕಾರ್ಯಾಗಾರ ದಿನಾಂಕ 27-8-2024ರಂದು ಜಿಲ್ಲಾ ಕಾರ್ಯಾಲಯದಲ್ಲಿ ಶಿವಮೊಗ್ಗ ಜಿಲ್ಲಾಧ್ಯಕ್ಷರಾದ ಶ್ರೀ ಟಿ ಡಿ ಮೇಘರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ದಕ್ಷಿಣಕನ್ನಡದ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಅವರು ಕಾರ್ಯಾಗಾರವನ್ನು ಉದ್ಘಾಟಿಸಿದರು.




ಸಂಸದರಾದ ಶ್ರೀ ಬಿ.ವೈ. ರಾಘವೇಂದ್ರ, ರಾಜ್ಯ ಪ್ರಕೋಷ್ಟಗಳ ಸಂಯೋಜಕರಾದ ಶ್ರೀ ಎಸ್ ದತ್ತಾತ್ರಿ, ಶಾಸಕರದಾದ ಶ್ರೀ ಎಸ್.ಎನ್. ಚನ್ನಬಸಪ್ಪ, ವಿಧಾನಪರಿಷತ್ ಸದಸ್ಯರಾದ ಶ್ರೀ ಡಿ.ಎಸ್. ಅರುಣ, ಡಾ ಧನಂಜಯ ಸರ್ಜಿ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವರಾಜು, ಶ್ರೀ ಎಂ.ಬಿ. ಹರಿಕೃಷ್ಣ, ಶ್ರೀ ಸಿ.ಹೆಚ್. ಮಾಲತೇಶ್, ರಾಜ್ಯ ಉಪಾಧ್ಯಕ್ಷರಾದ ಶ್ರೀ ಹರತಾಳು ಹಾಲಪ್ಪ ಹಾಗೂ ಇತರ ಜಿಲ್ಲಾ ಮತ್ತು ಮಂಡಲ ಪಧಾದಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು

**ಉತ್ತರ ಕನ್ನಡ :** ಉತ್ತರ ಕನ್ನಡಜಿಲ್ಲಾ ಸದಸ್ಯತಾ ಅಭಿಯಾನದ ಕಾರ್ಯಾಗಾರ ದಿನಾಂಕ 27-8-2024ರಂದು ನಗರದ ಗಾಣಿಗರ ಕಲ್ಯಾಣ ಮಂಟಪದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಎನ್.ಎಸ್. ಹೆಗಡೆ ಅವರ ನೇತೃತ್ವದಲ್ಲಿ ನಡೆಯಿತು. ಬಿಜೆಪಿ ಶಿಸ್ತು ಸಮಿತಿಯ ಅಧ್ಯಕ್ಷರಾದ ಶ್ರೀ ಲಿಂಗರಾಜ ಪಾಟೀಲ್ ಅವರು ಉದ್ಘಾಟನಾ ಭಾಷಣ ಮಾಡಿದರು.

ಕಾರ್ಯಾಗಾರದಲ್ಲಿ ಶಾಸಕರಾದ ಶ್ರೀ ದಿನಕರ ಶೆಟ್ಟಿ, ರಾಜ್ಯ ವಕ್ತಾರ ಶ್ರೀ ಹರಿಪ್ರಕಾಶ ಕೋಣೆಮನೆ. ವಿಧಾನಪರಿಷತ್ ಸದಸ್ಯರಾದ



ಶ್ರೀ ಶಾಂತಾರಾಮ ಸಿದ್ದಿಕಿ, ಮಾಜಿ ಶಾಸಕರಾದ ಶ್ರೀ ಸುನೀಲ ನಾಯ್ಕ, ಶ್ರೀ ವಿವೇಕಾನಂದ ವೈದ್ಯ, ಪಕ್ಷದ ಪ್ರಮುಖರಾದ ಶ್ರೀ ವೆಂಕಟೇಶ ನಾಯ್ಕ, ಶ್ರೀ ಕೆ.ಜಿ. ನಾಯ್ಕ, ಶ್ರೀ ಎಂ.ಜಿ. ನಾಯ್ಕ, ಶ್ರೀ ಸಂತೋಷ್ ತಳವಾರ, ಶ್ರೀ ಈಶ್ವರ ನಾಯ್ಕ, ಶ್ರೀ ವಿನೋದ ನಾಯ್ಕ, ಶ್ರೀ ರಾಘವೇಂದ್ರ ಭಟ್ ಪಾರ್ಟಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಗುರುಪ್ರಸಾದ ಹೆಗ್ಡೆ, ಶ್ರೀ ಪ್ರಶಾಂತ್ ನಾಯ್ಕ್, ಶ್ರೀ ಶಿವಾಜಿ ನರಸಾಣಿ ಹಾಗು ಇತರ ಜಿಲ್ಲಾ ಹಾಗೂ ಮಂಡಲ ಪದಾಧಿಕಾರಿಗಳು ಉಪಸ್ಥಿತರಿದ್ದರು

**ಧಾರವಾಡ ಗ್ರಾಮಾಂತರ :** ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಧಾರವಾಡ ಗ್ರಾಮಾಂತರ ಸದಸ್ಯತ್ವ ಅಭಿಯಾನದ ಕಾರ್ಯಾಗಾರ ಜಿಲ್ಲಾ ಅಧ್ಯಕ್ಷರಾದ ಶ್ರೀ ನಿಂಗಪ್ಪ ಸುತಗಟ್ಟಿ ಅಧ್ಯಕ್ಷತೆಯಲ್ಲಿ ನಡೆಯಿತು.



ಅಭಿಯಾನದ ಸಂಚಾಲಕರಾದ ಶ್ರೀ ಅನೀಲ ಬೆನಕೆ ಉದ್ಘಾಟನಾ ಭಾಷಣ ಮಾಡಿದರು. ಶಾಸಕರಾದ ಶ್ರೀ ಮಹೇಶ ಟೆಂಗಿನಕಾಯಿ, ಶ್ರೀ ಎಂ.ಆರ್. ಪಾಟೀಲ, ವಿಧಾನಪರಿಷತ್ ಸದಸ್ಯರಾದ ಶ್ರೀ ಪ್ರದೀಪ ಶೆಟ್ಟರ, ರಾಜ್ಯ ರೈತ ಮೋರ್ಚಾದ ಕಾರ್ಯದರ್ಶಿ ಶ್ರೀ ಬಸವರಾಜ ಕುಂದಗೋಳಮಠ, ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಶ್ರೀ ಶಶಿಮೌಳಿ ಕುಲಕರ್ಣಿ, ಪ್ರಧಾನ ಕಾರ್ಯದರ್ಶಿ ಶ್ರೀ ಶಿವಾನಂದ ಗುಂಡಗೋ, ಶ್ರೀ ಮಾಲತೇಶ ಶ್ಯಾಗೋಟಿ, ಜಿಲ್ಲಾವಕ್ತಾರ ಶ್ರೀ ಗುರು ಪಾಟೀಲ ಹಾಗು ಇತರ ಜಿಲ್ಲಾ ಹಾಗು ಮಂಡಲ ಪದಾಧಿಕಾರಿಗಳು ಉಪಸ್ಥಿತರಿದ್ದರು.

**ಗದಗ :** ಬಿಜೆಪಿ ಗದಗ ಜಿಲ್ಲಾ ಸದಸ್ಯತಾ ಅಭಿಯಾನದ ಕಾರ್ಯಾಗಾರ ದಿನಾಂಕ 27-8-2024ರಂದು ಜಿಲ್ಲಾ ಕಾರ್ಯಾಲಯದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ತೋಟಪ್ಪ ಕುರಡಗಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು.



ಕಾರ್ಯಗಾರದ ಉದ್ಘಾಟನಾ ಭಾಷಣವನ್ನು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಸ್. ಸಂಕನೂರ ರವರು ಮಾಡಿದರು. ಅಭಿಯಾನದ ಜಿಲ್ಲಾ ಸಂಚಾಲಕ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಪಾಟೀಲ ಮಲ್ಲಾಪೂರ ಪ್ರಾಸ್ತಾವಿಕವಾಗಿ ಮಾತಾನಾಡಿದರು. ಕಾರ್ಯಾಗಾರದ ವಿಷಯ ತಜ್ಞರಾಗಿ ಬಳ್ಳಾರಿ ವಿಭಾಗದ ಸಹಪ್ರಭಾರಿ ಶ್ರೀ ಚಂದ್ರಶೇಖರಗೌಡ ಪಾಟೀಲ ಪಾಲ್ಗೊಂಡರು, ಶ್ರೀ ಪ್ರಶಾಂತ ಜಾಧವ, ಮಾಜಿ ಅಧ್ಯಕ್ಷ ಶ್ರೀ ಎಂ.ಎಸ್. ಕರಿಗೌಡ್ರ, ಮಾಜಿ ಜಿಲ್ಲಾಧ್ಯಕ್ಷ ಶ್ರೀ ಮುತ್ತಣ್ಣ ಲಿಂಗನಗೌಡ್ರ, ಪ್ರಧಾನ ಕಾರ್ಯದರ್ಶಿ ಶ್ರೀ ಆರ್.ಕೆ. ಚವ್ಹಾಣ ವೇದಿಕೆ ಮೇಲೆ ಉಪಸ್ಥಿತರಿದ್ದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀ ಪಕೀರೇಶ್ ರಟ್ಟಿಹಳ್ಳಿ ನಿರೂಪಿಸಿದರು, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಅಂಕಲಕೋಟಿ ವಂದಿಸಿದರು.

**ಬೆಳಗಾವಿ ಗ್ರಾಮಾಂತರ :** ಬೆಳಗಾವಿ ಗ್ರಾಮಾಂತರ ಜಿಲ್ಲಾ ಸದಸ್ಯತಾ ಅಭಿಯಾನದ ಕಾರ್ಯಗಾರ ದಿನಾಂಕ 27-8-2024ರಂದು ಜಿಲ್ಲಾ ಕಾರ್ಯಾಲಯದಲ್ಲಿ ಜಿಲ್ಲಾಧ್ಯಕ್ಷರಾದ ಶ್ರೀ ಸುಭಾಷ್ ಪಾಟೀಲ್ ಅವರ ನೇತೃತ್ವದಲ್ಲಿ ನಡೆಯಿತು.

ಬೆಳಗಾವಿ ಗ್ರಾಮಂತರ ಜಿಲ್ಲೆಯ ಸದಸ್ಯತಾ ಅಭಿಯಾನದ ಪ್ರಭಾರಿಗಳಾದ ಶ್ರೀ ದಾದಾ ಗೌಡ ಬಿರಾದರ ಅವರು ಸದಸ್ಯತಾ ಅಭಿಯಾನದ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಭಾರತೀಯ ಜನತಾ ಪಾರ್ಟಿ ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷರಾದ ಶ್ರೀ ವಿವೇಕಾನಂದ ಡಬ್ಬಿ ಹಾಗೂ ಮಾಜಿ ಶಾಸಕ ಶ್ರೀ ವಿಶ್ವನಾಥ್ ಪಾಟಿಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಡಾ.ಕೆ.ವಿ.ಪಾಟೀಲ್, ಶ್ರೀ ಸಂದೀಪ್ ದೇಶಪಾಂಡೆ, ಶ್ರೀ ಧನಶ್ರೀ ದೇಸಾಯಿ, ರಾಜ್ಯ ಸಾಮಾಜಿಕ ಜಾಲತಾಣ ಪ್ರಕೋಷ್ಠದ ಸದಸ್ಯ ಶ್ರೀ ನಿತಿನ್ ಚೌಗಲೆ, ಯುವ ಮೋರ್ಚಾ ರಾಜ್ಯ ಉಪಾಧ್ಯಕ್ಷ ಶ್ರೀ ಈರಣ್ಣ ಅಂಗಡಿ, ಶ್ರೀ ವಿರೂಪಾಕ್ಷ ಮಾಮನಿ, ಅಭಿಯಾನದ ಜಿಲ್ಲಾ ಸಹ ಸಂಚಾಲಕರಾದ ಶ್ರೀ ಪ್ರಶಾಂತ್ ಅಮ್ಮನ ಭಾವಿ, ಶ್ರೀ ಚೇತನ್ ಅಂಗಡಿ, ಶ್ರೀ ವೀರಭದ್ರ ಪೂಜಾರಿ, ಶ್ರೀ ಬಸವರಾಜ್ ನೇಸರಗಿ, ಶ್ರೀ ಮಹೇಶ್ ಮೋಹಿತೆ, ಮತ್ತು ಜಿಲ್ಲೆ ಮಂಡಲದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

**ಹುಬ್ಬಳ್ಳಿ-ಧಾರವಾಡ :** ಹುಬ್ಬಳ್ಳಿ ಧಾರವಾಡ ಜಿಲ್ಲಾ ಸದಸ್ಯತಾ ಅಭಿಯಾನದ ಕಾರ್ಯಾಗಾರ ದಿನಾಂಕ 27-8-2024ರಂದು ಜಿಲ್ಲಾ ಕಾರ್ಯಾಲಯದಲ್ಲಿ ಜರುಗಿತು. ಶಾಸಕ ಶ್ರೀ ಮಹೇಶ್ ಟೆಂಗಿನಕಾಯಿ ಅವರು ಕರೆ ಮಾಡುವ ದೂರವಾಣಿ ಸಂಖ್ಯೆಯನ್ನು ಬಿಡುಗಡೆಗೊಳಿಸಿದರು.



ಈ ಸಂದರ್ಭದಲ್ಲಿ ಕೇಂದ್ರ ಸಚಿವರಾದ ಶ್ರೀ ಪ್ರಹ್ಲಾದ ಜೋಶಿ, ಶಾಸಕರಾದ ಶ್ರೀ ಅರವಿಂದ್ ಬೆಲ್ಲದ, ಜಿಲ್ಲಾಧ್ಯಕ್ಷರಾದ ಶ್ರೀ ತಿಪ್ಪಣ್ಣ ಮಜ್ಜಗಿ, ಜಿಲ್ಲಾ ಪ್ರಧಾನಕಾರ್ಯದರ್ಶಿಗಳಾದ ಶ್ರೀ ದತ್ತಮೂರ್ತಿ ಕುಲಕರ್ಣಿ, ಶ್ರೀ ವಿಜಯಾನಂದ ಶೆಟ್ಟಿ, ಶ್ರೀ ಶಿವು ಮೆಣಸಿನಕಾಯಿ ಹಾಗೂ ಜಿಲ್ಲೆಯ ಹಾಗೂ ಮಂಡಲದ ಪದಾಧಿಕಾರಿಗಳು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಬಿಜೆಪಿ ಸದಸ್ಯತಾ ಅಭಿಯಾನದ ಕಾರ್ಯಾಗಾರವನ್ನು ದಿ.25-8-2024ರಂದು ವಿಜಯಪುರ. ದಿ. 26-8-2024ರಂದು ಬೆಳಗಾವಿ ನಗರ, ಬೀದರ್, ಕಲಬುರಗಿ ನಗರ, ಗ್ರಾಮಾಂತರ, ಬಳ್ಳಾರಿ ಹಾಗೂ ಕೋಲಾರದಲ್ಲಿ, ದಿ. 27-82024ರಂದು ಮಂಡ್ಯ, ಹಾಸನ ಹಾವೇರಿ, ಚಿಕ್ಕೋಡಿ, ಬಾಗಲಕೋಟೆ, ಯಾದಗಿರಿ, ಕೊಪ್ಪಳ, ದಾವಣಗೆರೆ, ಚಿತ್ರದುರ್ಗ, ಮಧುಗಿರಿ, ರಾಮನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ ಮತ್ತು ಚಿಕ್ಕಬಳ್ಳಾಪುರದಲ್ಲಿ, ದಿ. 28-8-2024ರಂದು ಚಿಕ್ಕಮಗಳೂರು ಜಿಲ್ಲೆಯಲ್ಲಿ ಹಾಗೂ ದಿ. 29-8-2024 ರಂದು ರಾಯಚೂರು ಜಿಲ್ಲೆಯಲ್ಲಿ ಗಣ್ಯರು, ಮುಖಂಡರು, ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಉಪಸ್ಥಿತಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.




# ಬಿಜೆಪಿ

## ಕೇವಲ ರಾಜಕೀಯ ಪಕ್ಷವಲ್ಲ, ಒಂದು ರಾಷ್ಟ್ರೀಯ ಆಂದೋಲನ!!!

ಸದಸ್ಯತಾ ಅಭಿಯಾನ - 2024



ಮಹೇಶ್ ಹೆಗಡೆ
ಬಿಜೆಪಿ ಕಾರ್ಯಕರ್ತರು

**2047 ರ ವಿಕಸಿತ ಭಾರತದ ಸಾಕಾರಕ್ಕಾಗಿ,
ಅಸಾಧ್ಯವನ್ನು ಸಾಧ್ಯವಾಗಿಸಲು,
ರಾಷ್ಟ್ರೀಯ ಚಟುವಟಿಕೆಯ ಭಾಗವಾಗಲು,
ಮಹತ್ವದ ಕಾರ್ಯ ಸಾಧಿಸಲು,
ಭಾರತವನ್ನು ವಿಜಯದೆಡೆಗೆ, ವಿಕಾಸದೆಡೆಗೆ,
ವಿಶ್ವಗುರುವಾಗಿಸಲು ಬಿಜೆಪಿಯೊಂದಿಗೆ ಜೊತೆಗೂಡಿ.
ಬಿಜೆಪಿಯ ಸದಸ್ಯರಾಗಿ ರಾಷ್ಟ್ರ ಯಜ್ಞಕಾರ್ಯದಲ್ಲಿ ಭಾಗಿಯಾಗಿ.**



## 88 00 00 2024

ಈಗ ದೇಶದೆಲ್ಲೆಡೆ **88000 02024** ಈ ಹತ್ತು ಸಂಖ್ಯೆ ಚಾಲ್ತಿಯಲ್ಲಿದೆ. ದೇಶ ಮೊದಲೆಂಬ ಸಂಘಟನೆ ಬಿಜೆಪಿಯ 'ಸಂಘಟನಾ ಪರ್ವ–ಸದಸ್ಯತ್ವ ಅಭಿಯಾನ–2024' ಆರಂಭವಾಗಿದೆ. ವಿಕಸಿತ ಭಾರತದ ಗುರಿ ತಲುಪಲು ನಿಮ್ಮೆಲ್ಲರ ಸಹಕಾರ ಬೇಕಾಗಿದೆ. ವಿಜಯದೆಡೆಗೆ–ವಿಕಾಸದೆಡೆಗೆ ಸಾಗಲು ಒಂದು ಹೆಜ್ಜೆ ಹಾಕಬೇಕಾಗಿದೆ. ಭಾರತೀಯ ಜನತಾ ಪಾರ್ಟಿ ಇದು ಕೇವಲ ರಾಜಕೀಯ ಪಕ್ಷದ ಹೆಸರಲ್ಲಾ, ಇದೊಂದು ರಾಷ್ಟ್ರೀಯ ವೈಚಾರಿಕತೆಯ ದೇಶ ಮೊದಲೆಂಬ ಧ್ಯೇಯವನ್ನು ಹೊತ್ತ ಸಂಘಟನೆ. ರಾಜಕೀಯಕ್ಕಿಂತ ಮಿಗಿಲಾಗಿ ದೇಶದ ಹಿತ, ನಮ್ಮ ಪರಂಪರೆಯ ಉಳಿವು, ಸನಾತನ ಸಂಸ್ಕೃತಿಯ ರಕ್ಷಣೆ, ಪ್ರಜಾಪ್ರಭುತ್ವ ಮೌಲ್ಯಗಳನ್ನು ಕಾಪುಡುವುದು ಮುಖ್ಯಉದ್ದೇಶ ಮತ್ತು ಬದ್ಧತೆ. ಅದಕ್ಕೆ ಇಂದು ಬಿಜೆಪಿ ಎಲ್ಲರ ಮನಗಳಲ್ಲಿ ಮನೆ ಮಾಡಿ ನಿಂತಿದೆ.

### ಸೊನ್ನೆಯಿಂದ ಅಧಿಕಾರದೆಡೆಗೆ

ಪಂ. ದೀನದಯಾಳ ಉಪಾಧ್ಯಾಯ, ಡಾ. ಶ್ಯಾಮ ಪ್ರಸಾದ್ ಮುಖರ್ಜಿ, ದಿ. ಜಗನ್ನಾಥರಾವ್ ಜೋಶಿಯವರ ಕಾಲದ ಜನಸಂಘದಿಂದ, ನಂತರದ ದಿ. ಅಟಲ್ ಬಿಹಾರಿ ವಾಜಪೇಯಿ, ಶ್ರೀ ಎಲ್.ಕೆ ಅಡ್ವಾಣಿಯವರ ಕಾಲದ ಬಿಜೆಪಿ ರಾಷ್ಟ್ರೀಯತೆಯ ಆದರ್ಶದ ತತ್ವದಡಿಯಲ್ಲಿ ಕಟ್ಟಿದ ಪಕ್ಷ. ಬಿಜೆಪಿ ಕೇವಲ ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲುವುದಕ್ಕೆ ಸೀಮಿತವಾಗಿರುವ ಉದ್ದೇಶವನ್ನು ಹೊಂದದೆ, ಒಂದು ವ್ಯವಸ್ಥೆಯಾಗಿ ಬದಲಾವಣೆ ತರಲು, ಒಂದು ಸಿದ್ಧಾಂತವಾಗಿ ರಾಷ್ಟ್ರೀಯತೆಯನ್ನು ಪ್ರಚುರ ಪಡಿಸಲು, ಒಂದು ಸಂಘಟನೆಯಾಗಿ ಜನಪರ ಧ್ವನಿಯಾಗಲು, ಒಂದು ಚಳುವಳಿ ನಮ್ಮ ಪರಂಪರೆ, ಸಂಸ್ಕೃತಿ, ನಮ್ಮ ಸ್ವಂತಿಕೆಯನ್ನು ಉಳಿಸಿಕೊಳ್ಳಲು ಯೋಚಿಸಿ, ಯೋಜಿಸಿ, ಸಹಭಾಗಿತ್ವ ಮತ್ತು ಸಮನ್ವಯತೆಯಿಂದ ಕಟ್ಟಿದ ಪಕ್ಷವಾಗಿದೆ. ಅದೇ ಕಾರಣಕ್ಕೆ 1980 ರಲ್ಲಿ ಒಂದಷ್ಟು ಸಮಾನ ಮನಸ್ಕರಿಂದ ಆರಂಭವಾದ ಪಕ್ಷ ಇಂದು ವಿಶ್ವದ ಅತ್ಯಂತ ದೊಡ್ಡ ಮತ್ತು ಅತೀ ಹೆಚ್ಚು ಸದಸ್ಯರನ್ನು, ಕಾರ್ಯಕರ್ತರನ್ನು ಹೊಂದಿರುವ ಪಕ್ಷವಾಗಿ ಬೆಳೆದು ನಿಂತಿದೆ. ಕೇವಲ ಎರಡು ಸಂಸದರನ್ನು ಹೊಂದಿದ್ದ ಪಕ್ಷ ಇಂದು ಸ್ವತಂತ್ರವಾಗಿ ಆಡಳಿತವನ್ನು ನಡೆಸುವಷ್ಟು ಪ್ರಬಲವಾಗಿ ಬೆಳೆದಿದೆ.

### ಕಾರ್ಯಕರ್ತರ ಪಕ್ಷ

ಬಿಜೆಪಿಯು ಯಾವುದೋ ನಾಲ್ಕಾರು ನಾಯಕರ ಅಥವಾ ನಾಯಕರಿಂದಲೇ ತುಂಬಿರುವ ಪಕ್ಷವಲ್ಲ, ಕಾರ್ಯಕರ್ತರಿಂದ ರೂಪಿಸಿದ ಪಕ್ಷ. ಇಲ್ಲಿ ಎಲ್ಲರೂ ಕಾರ್ಯಕರ್ತರೇ, ಎಲ್ಲರೂ ನಾಯಕರೇ.. ಪ್ರಧಾನಿಯಿಂದ ಬೂತ್ ಕಾರ್ಯಕರ್ತನವರೆಗೂ ಸಮಾನ ಗೌರವ ಸಿಗುತ್ತದೆ. ಅದೇ ಕಾರಣಕ್ಕೆ ರೈಲ್ವೆ ಸ್ಟೇಷನ್‌ಲ್ಲಿ ಒಬ್ಬ ಚಾ ಮಾರುತ್ತಿದ್ದ ಸಾಮಾನ್ಯ ಕಾರ್ಯಕರ್ತ ಇಂದು ದೇಶದ ಪ್ರಧಾನಿಯಾಗಿರುವುದು. ಇಲ್ಲಿ ಯಾವುದೇ ಫಲಾಪೇಕ್ಷೆ ಇಲ್ಲದೆ, ದೇಶ ಮೊದಲು, ನಂತರ ಪಕ್ಷ, ಆಮೇಲೆ ನಾನು ಎಂದು ಈ ರಾಷ್ಟ್ರಕ್ಕಾಗಿ ಕೆಲಸ ಮಾಡುವ, ಕರ್ತವ್ಯ ಮತ್ತು ಜವಾಬ್ದಾರಿ ನಿಭಾಯಿಸುವ ದೊಡ್ಡ ಕಾರ್ಯಕರ್ತರ ಪಡೆ ಇದೆ. ತನಗೆ ಸ್ವಲ್ಪ, ಸಮಾಜಕ್ಕೆ ಸರ್ವಸ್ವ ಎನ್ನುವ ಮನಸ್ಥಿತಿಯ ಮನಗಳು ಇಲ್ಲಿವೆ. ದೇಶದ ಜನರ ಆಶೋತ್ತರಗಳನ್ನು ಈಡೇರಿಸುವ ಸಲುವಾಗಿ ಕಾರ್ಯಕರ್ತರ ನಿರಂತರ ಪರಿಶ್ರಮದಿಂದ

ಗೆಲುವು ಸಾಧಿಸುವ ಪಕ್ಷವಾಗಿದೆ. ಕಾರ್ಯಕರ್ತರ ಅಭಿಪ್ರಾಯ, ಇಚ್ಛೆಗೆ ಪೂರಕವಾಗಿ ನಡೆದು ಕೊಳ್ಳುವ ಪಕ್ಷ ಎಂದರೆ ಬಿಜೆಪಿ. ಪ್ರತಿ ಕಾರ್ಯಕರ್ತನೂ ಸಹ ದೇಶ ಮೊದಲು, ಜನಕಲ್ಯಾಣವೇ ಆದ್ಯತೆಯೆಂದು ದುಡಿಯುತ್ತಾನೆ.

## ಹೋರಾಟಗಳಿಂದ ಬಲವಾದ ಸಂಘಟನೆ

ಯಾವುದೇ ವೈಚಾರಿಕ ಸಂಘಟನೆಗಳಾಗಲಿ ಜನಪರ ಧ್ವನಿಯಾಗಿ ನಿಲ್ಲುವುದು ಮುಖ್ಯ. ಅನ್ಯಾಯ, ತಪ್ಪುಗಳ ವಿರುದ್ಧ, ನಮ್ಮದನ್ನು ಉಳಿಸಿಕೊಳ್ಳಲು, ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಹೋರಾಟಗಳನ್ನು ಮಾಡಬೇಕಾಗುತ್ತದೆ. ಬಿಜೆಪಿ ಸಹ ಜನಪರ ಧ್ವನಿಯಾಗಿ ಹೋರಾಟಗಳ ಅಡಿಯಲ್ಲಿ ಬಲಗೊಂಡ ಪಕ್ಷ. ಬಿಜೆಪಿ ಹೋರಾಟಗಳು ರಾಜಕೀಯ ಲಾಭಕ್ಕಾಗಲಿ, ನಾಮಕಾವಸ್ಥೆಗಾಲಿ, ದ್ವೇಷಕ್ಕಾಗಲಿ ಮಾಡಿದ ಹೋರಾಟಗಳಲ್ಲ. ಬದಲಾಗಿ ಈ ದೇಶದ ಮತ್ತು ಜನರ ಹಿತಾಸಕ್ತಿಗಾಗಿ ನಡೆದ ಹೋರಾಟ. ಬಿಜೆಪಿ ಹೋರಾಟಗಳು ಕೇವಲ ಆರಂಭ ಶೂರತ್ವದ ಪ್ರದರ್ಶನವಲ್ಲ, ಬದಲಾಗಿ ತಾರ್ಕಿಕ ಅಂತ್ಯ ಕಾಣುವವರೆಗೂ ಬಿಡದ ಹೋರಾಟಗಳು. ಕೆಲವೊಮ್ಮೆ ನಿರೀಕ್ಷಿತ ಫಲಿತಾಂಶ ನಿಧಾನವಾಗಿರಬಹುದು, ಆದರೆ ಅಂತಿಮ ಫಲಿತಾಂಶ ಬರುವರೆಗೂ ಬದ್ಧತೆಯಿಂದ ಹೋರಾಟಗಳನ್ನು ಮಾಡುವುದು ಬಿಜೆಪಿಯ ಶಕ್ತಿ. ಅದು ರಾಮ ಮಂದಿರ ಹೋರಾಟವಿರಲಿ, ಆರ್ಟಿಕಲ್ 370 ರದ್ದತಿ ಹೋರಾಟವಿರಲಿ, ಕಾಶ್ಮೀರಿ ಚಲೋ ಹೋರಾಟವಿರಲಿ, ರೈತಪರ ಹೋರಾಟವಿರಲಿ ಎಲ್ಲವೂ ತಾರ್ಕಿಕ ಅಂತ್ಯ ಕಂಡ ಹೋರಾಟಗಳೇ. ಒಳ್ಳೆಯ ಉದ್ದೇಶ ಹಾಗೂ ಸರಿಯಾದ ಮಾರ್ಗದಲ್ಲಿ ರೂಪಿಸುವ ಹೋರಾಟಗಳು ಬಿಜೆಪಿಯನ್ನು ಬಲವಾಗಿಸಿದೆ.

## ಆಂತರಿಕ ಪ್ರಜಾಪ್ರಭುತ್ವ ಅಳವಡಿಕೊಂಡ ಪಕ್ಷ

ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತದಲ್ಲಿ, ಸಾಂವಿಧಾನಿಕವಾಗಿ ಆಡಳಿತದಲ್ಲಿ ಮಾತ್ರವಲ್ಲದೆ, ಬಿಜೆಪಿ ಆಂತರಿಕವಾಗಿಯು ಪ್ರಜಾಪ್ರಭುತ್ವ ವನ್ನು ಗೌರವಿಸಿ ಅಳವಡಿಸಿಕೊಂಡ ಪಕ್ಷ. ಪಕ್ಷ ಸಂಘಟನೆಯಿಂದ, ಪಕ್ಷದದೊಳಗಿನ ಜವಾಬ್ದಾರಿ ಹಂಚಿಕೆಯವರೆಗೂ ಪ್ರಜಾಪ್ರಭುತ್ವದ ಅನುಸಾರವೆ ನಡೆಯುತ್ತದೆ. ಭಾರತದಲ್ಲಿ ಯಾವುದೇ ರಾಜಕೀಯ ಪಕ್ಷವು ತನ್ನ ಸದಸ್ಯತ್ವ ಅಭಿಯಾನವನ್ನು ಪ್ರಜಾಸತ್ತಾತ್ಮಕವಾಗಿ ನಡೆಸುವುದಿಲ್ಲ. ಆದರೆ, ಬಿಜೆಪಿ ಪ್ರತಿ ಆರು ವರ್ಷಗಳಿಗೊಮ್ಮೆ ಈ ಸಂಪ್ರದಾಯವನ್ನು ಯಥಾಸ್ಥಿತಿಯಲ್ಲಿ ಇಟ್ಟುಕೊಂಡು ಮುನ್ನಡೆಯುತ್ತಿರುವ ಏಕೈಕ ರಾಜಕೀಯ ಪಕ್ಷವಾಗಿದೆ. ಈಗ ನಡೆಯುತ್ತಿರುವ ಸದಸ್ಯತಾ ಅಭಿಯಾನವು ಸಹ ಇದರ ಮುಂದುವರೆದ ಭಾಗವೇ.

## ಮತ್ತೆ ಬಂದಿದೆ ಸದಸ್ಯತ್ವ ಅಭಿಯಾನ ಪರ್ವ

ಪಕ್ಷದ ಕಾರ್ಯಕರ್ತರು ಬಹಳ ಉತ್ಸಾಹದಿಂದ ಗೋಡೆಗಳ ಮೇಲೆ ಪಕ್ಷದ ಚಿಹ್ನೆಯನ್ನು ಬಿಡಿಸುವ ಮೂಲಕ, ಕಾಲ್ನಡಿಗೆಯಲ್ಲಿ, ಸೈಕಲ್ ಮೂಲಕ ಪಕ್ಷ ಸಂಘಟನೆಯನ್ನು ಮಾಡುತ್ತಿದ್ದ ಕಾಲಘಟ್ಟದಿಂದ



ಇಂದಿನ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಪಕ್ಷವನ್ನು ಸಂಘಟಿಸುವ ಕಾಲಘಟ್ಟದವರೆಗೆ ಬಂದು ನಿಂತಿದ್ದೇವೆ. ಪ್ರತೀ ಆರು ವರ್ಷಕ್ಕೊಮ್ಮೆ ಪಕ್ಷ ಒಂದು ಪ್ರಕ್ರಿಯೆಯಾದ, ಸದಸ್ಯತ್ವ ನವೀಕರಣ ಮತ್ತು ಹೊಸ ಸದಸ್ಯರ ಸೇರ್ಪಡೆ ಕಾರ್ಯ ಮತ್ತೆ ಬಂದಿದೆ. ಬಿಜೆಪಿ ಸದಸ್ಯತ್ವ ಅಭಿಯಾನವು ಸಂಪೂರ್ಣ ಪಾರದರ್ಶಕವಾಗಿ ನಡೆಯುತ್ತಿದೆ. ಪ್ರಜಾಪ್ರಭುತ್ವದ ಅಂಶಗಳನ್ನು ಅಳವಡಿಸಿಕೊಂಡು ನಡೆಯುತ್ತಿದೆ. ವಿವಿಧ ಹಂತದಲ್ಲಿ ನಡೆಯುವ ಸದಸ್ಯತ್ವ ಅಭಿಯಾನ ಪ್ರಕ್ರಿಯೆಗೆ ಮೊದಲನೆ ಹಂತವಾಗಿ ಸೆಪ್ಟೆಂಬರ್–2 ರಂದು ಪ್ರಧಾನಿ ಮೋದಿ ಅವರು ಚಾಲನೆ ನೀಡಿದ್ದಾರೆ. 10 ಕೋಟಿಗೂ ಹೆಚ್ಚು ಸದಸ್ಯತ್ವದ ಗುರಿಯನ್ನು ಇಟ್ಟುಕೊಳ್ಳಲಾಗಿದೆ ಮತ್ತು ಸಾಧಿಸಲಿದ್ದೇವೆ. 88000 02024 ಈ ನಂಬರಿಗೆ ಮಿಸ್ ಕಾಲ್ ಕೊಡುವ ಮೂಲಕ ಬಿಜೆಪಿ ಸದಸ್ಯರಾಗಿ ನೋಂದಾವಣಿ ಮಾಡಿಕೊಳ್ಳಬಹುದಾಗಿದೆ. ಅಲ್ಲದೆ ನಮೋ ಆ್ಯಪ್, ಕ್ಯೂಆರ್ ಕೋಡ್, ಬಿಜೆಪಿಯ ಅಧಿಕೃತ ವೆಬ್‌ಸೈಟ್, ಅರ್ಜಿ ಮೂಲಕವೂ ಸದಸ್ಯತ್ವ ನೋಂದಾವಣೆಗೆ ಅವಕಾಶವಿದೆ.

## ರಾಜ್ಯದಲ್ಲೂ ಆರಂಭವಾದ ಅಭಿಯಾನ

ಸಂಘಟನೆಯನ್ನು ಬಲಗೊಳಿಸುವ ಸಲುವಾಗಿ ನಡೆಯುವ ಸದಸ್ಯತ್ವ ಅಭಿಯಾನವು ರಾಜ್ಯದಲ್ಲೂ ಆರಂಭವಾಗಿದೆ. ಸೆಪ್ಟೆಂಬರ್ 4 ರಂದು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರರವರ ಮುಂದಾಳತ್ವದಲ್ಲಿ ನಾಯಕರು, ಪ್ರಮುಖರು ಸೇರಿ ಅಧಿಕೃತವಾಗಿ ಅಭಿಯಾನಕ್ಕೆ ಚಾಲನೆ ನೀಡಿದರು. ಅಚ್ಚುಕಟ್ಟಾದ ಪೂರ್ವತಯಾರಿಯೊಂದಿಗೆ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ, ರಾಜ್ಯ ಮಟ್ಟದ ಕಾರ್ಯಾಗಾರ ನಡೆದರೆ, ಎಲ್ಲ ಮೋರ್ಚಾ ಹಾಗೂ ಪ್ರಕೋಷ್ಠಗಳ ರಾಜ್ಯಮಟ್ಟದ ಕಾರ್ಯಾಗಾರಗಳು ಆಯೋಜಿಸಲ್ಪಟ್ಟವು. ಪಕ್ಷದ 39 ಸಂಘಟನಾತ್ಮಕ ಜಿಲ್ಲೆಗಳಲ್ಲಿ, ಎಲ್ಲಾ ಮಂಡಲಗಳಲ್ಲಿಯೂ ಸಹ ಸದಸ್ಯತ್ವ ಕಾರ್ಯಾಗಾರಗಳನ್ನು ನಡೆಸಲಾಗಿದೆ. ರಾಜ್ಯಮಟ್ಟದಿಂದ ಬೂತ್‌ಮಟ್ಟದವರೆಗೂ ತಂಡಗಳನ್ನು ರಚಿಸಿ, ಬೂತ್ ಅಧ್ಯಕ್ಷರಿಂದ ಹಿಡಿದು ಎಲ್ಲಾ ಹಂತದ ಪದಾಧಿಕಾರಿಗಳು, ಗ್ರಾಮ ಪಂಚಾಯತಿ ಸದಸ್ಯರಿಂದ ಹಿಡಿದು ಎಲ್ಲಾ ಹಂತದ ಜನಪ್ರತಿನಿಧಿಗಳನ್ನು ಒಂದು ತಿಂಗಳು ಈ ಪ್ರಕಿಯೆಗೆ ಜೋಡಿಸಲಾಗಿದ್ದು, ರಾಜ್ಯದಲ್ಲಿ 1.5 ಕೋಟಿ ಸದಸ್ಯತ್ವ ಗುರಿಯನ್ನು ತಲುಪವ ಕಡೆಗೆ ಹೆಜ್ಜೆ ಇಡಲಾಗಿದೆ.


# ಬೇರುಗಳನ್ನು ನೆನಪಿಸಿದ ಸಮಾಜ ಸಂತ........

## ಪಂ. ದೀನದಯಾಳರನ್ನು 3 ಮುಖಗಳಲ್ಲಿ ನಾವು ಅಧ್ಯಯನ ಮಾಡಬೇಕು. ವ್ಯಕ್ತಿಯಾಗಿ, ಸಂಘಟಕರಾಗಿ ಹಾಗೂ ದಾರ್ಶನಿಕರಾಗಿ. . . . .

**ಬಿ.ಎಲ್. ಸಂತೋಷ**
ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ

### ವ್ಯಕ್ತಿಯಾಗಿ.......

ವ್ಯಕ್ತಿಯಾಗಿ ದೀನದಯಾಳರದ್ದು ಆದರ್ಶ ಜೀವನ. ಸಮಾಜ ಕಾರ್ಯಕ್ಕೆ ಬದುಕನ್ನು ಸುಲಭವಾಗಿ ಅರ್ಪಿಸಬಹುದಾದ ಸ್ಥಿತಿಯಲ್ಲಿದ್ದ ಕುಟುಂಬವೇನಲ್ಲ ಅವರದ್ದು. ಸಣ್ಣಂದಿನಲ್ಲೇ ತಂದೆಯನ್ನು ಕಳೆದುಕೊಂಡ ಅವರು, ಏಳನೇ ವಯಸ್ಸಿನಲ್ಲಿ ತಾಯಿಯನ್ನೂ ಕಳೆದುಕೊಂಡರು. ಅನಾರೋಗ್ಯಕ್ಕೆ ತುತ್ತಾಗಿದ್ದ ತಮ್ಮನೂ 18ನೇ ವಯಸ್ಸಿನಲ್ಲಿ ದೀನದಯಾಳರನ್ನು ಅಗಲಿದ.



ಓದಿನಲ್ಲಿ ದೀನದಯಾಳರು ಸದಾ ಮುಂದು. ಹಂತಹಂತವಾಗಿ ಪರೀಕ್ಷೆಗಳಲ್ಲಿ ಮೊದಲನೆ ಸ್ಥಾನದಲ್ಲಿ ತೇರ್ಗಡೆಯಾಗುತ್ತಾ ಬಂದರು. ಬೋರ್ಡ್ ಮಟ್ಟದ ಪರೀಕ್ಷೆಯಲ್ಲಿ ಅವರ ರೇಖಾಗಣಿತದ ಉತ್ತರ ಪತ್ರಿಕೆಯನ್ನು ಅನೇಕ ವರ್ಷಗಳವರೆಗೆ ಕಾಯ್ದಿರಿಸಿದ್ದರು. ತಾವೊಬ್ಬರೇ ಓದುವುದರಲ್ಲಿ ಮುಂದೆ ಹೋದರೆ ಸಾಲದು, ಸಹಪಾಠಿಗಳನ್ನು ಮುಂದೆ ಕರೆದೊಯ್ಯಬೇಕು ಎನ್ನುವುದು ಅವರ ನಿಲುವು. ಈ ನಿಟ್ಟಿನಲ್ಲಿ ಝಿರೋ ಅಸೋಸಿಯೇಷನ್ ಮಿತ್ರ ಮಂಡಳಿಯನ್ನು ಕಾಲೇಜಿನಲ್ಲಿ ರಚಿಸಿ ಪಾಠದಲ್ಲಿ ಹಿಂದೆ ಬಿದ್ದವರಿಗೆ ಪಾಠ ಮಾಡುತ್ತಾ, ಜೊತೆಯಲ್ಲಿ ಓದಿಸುತ್ತಾ ಪಾಸಾಗುವಂತೆ ನೋಡಿಕೊಳ್ಳುತ್ತಿದ್ದರು.

ತುಂಬಾ ಅಧ್ಯಯನಶೀಲ ಮನೋವೃತ್ತಿಯ ದೀನದಯಾಳರು ಸಂಘಟನೆಯ ಜವಾಬ್ದಾರಿ ಹೊತ್ತಾಗಲೂ ತನ್ನ ಅಧ್ಯಯನದ ಪ್ರವೃತ್ತಿಯನ್ನು ಬಿಡಲಿಲ್ಲ. ಜನಸಂಘದ ಅಖಿಲ ಭಾರತೀಯ ಜವಾಬ್ದಾರಿ ಹೊಂದಿದ್ದಾಗಲೂ ಎಲ್ಲರೂ ಮಲಗಿದ ನಂತರ, ಸ್ವಲ್ಪ ಕಾಲವಾದರೂ ಅಧ್ಯಯನ ಮಾಡುತ್ತಿದ್ದರು. ಸ್ವಂತಕ್ಕೆ ಕಠೋರವಾದ ಅವರು ಅನ್ಯ ಕಾರ್ಯಕರ್ತರ ಹಾಗೂ ಸಮಾಜ ಬಾಂಧವರ ಕಷ್ಟ-ಸುಖಗಳಲ್ಲಿ ಒಂದಾಗುತ್ತಿದ್ದರು. ತುಂಬಾ ಸರಳ ವ್ಯಕ್ತಿತ್ವದ ಅವರ ಜೀವನ ಇಂದಿಗೂ ಸಾರ್ವಜನಿಕ ಕ್ಷೇತ್ರದ ಕಾರ್ಯಕರ್ತರಿಗೆ ಮಾದರಿ.

ಕೆಲಸದಲ್ಲಿ ತೊಡಗಿದ ಮೇಲೆ ಯಾವ ಕೆಲಸವನ್ನೂ ಸಣ್ಣದು, ದೊಡ್ಡದು ಎಂಬ ದೃಷ್ಟಿಯಲ್ಲಿ ನೋಡುತ್ತಿರಲಿಲ್ಲ. ಪಾಂಚಜನ್ಯ ವಾರಪತ್ರಿಕೆಯ ಕಾರ್ಯದಲ್ಲಿ ಅವರು ಲೇಖಕರಾಗಿ, ಕಾಂಪೋಸಿಟರಾಗಿ, ಮೊಳೆ ಜೋಡಿಸುವವರಾಗಿ, ಮುದ್ರಣ ಯಂತ್ರವನ್ನು ನಡೆಸುವವರಾಗಿ, ಪತ್ರಿಕೆಯ ಬಂಡಲ್‌ಗಳನ್ನು ರೇಲ್ವೆ ಸ್ಟೇಷನ್‌ಗೆ ಸಾಗಿಸುವವರಾಗಿ ಎಲ್ಲ ರೀತಿಯ ಕೆಲಸಗಳನ್ನು ಅವರು ಮಾಡಿದ್ದರು. ಅಂತಿಮವಾಗಿ ಬಿಲ್ ಬರೆಯುವ ಕೆಲಸವನ್ನು ಮಾಡಿದ್ದರು.

### ಸಂಘಟಕರಾಗಿ. . . .

ದೀನದಯಾಳರು ಸಂಘದ ಪ್ರಚಾರಕರಾಗಿ, ಜನಸಂಘದ ಪದಾಧಿಕಾರಿಯಾಗಿ, ಸಂಘಟನಾ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ. ಸಂಘದ ಪ್ರಚಾರಕರಾಗಿ ಉತ್ತರಪ್ರದೇಶದ ಉದ್ದಗಲಕ್ಕೂ ಓಡಾಡಿದರು. ಕೇವಲ ಕಡಲೆಪುರಿ ತಿಂದು ಬದುಕಿದ ದಿನಗಳು ಅವರದ್ದಾಗಿತ್ತು. ತಮ್ಮ ಅನುಕೂಲಕ್ಕಾಗಿ ಎಂದೂ ಬೇರೆಯವರಿಗೆ ತೊಂದರೆಕೊಟ್ಟವರಲ್ಲ. ಅತ್ಯಂತ ಕಿರಿಯ ಕಾರ್ಯಕರ್ತನಿಗೂ ಅನುಕೂಲ ಮಾಡಿಕೊಡುವ ಮನೋಭಾವ ಅವರದ್ದು.

ಭಾರತೀಯ ಜನಸಂಘದ ಜವಾಬ್ದಾರಿ ಹೊತ್ತ ನಂತರ ಇಡೀ ಭಾರತ ಅವರ ಕಾರ್ಯಕ್ಷೇತ್ರವಾಯಿತು. ದೀನದಯಾಳರ ಕಾರ್ಯಶೈಲಿಯನ್ನು ನೋಡಿದ ಡಾ. ಶ್ಯಾಂಪ್ರಸಾದ್ ಮುಖರ್ಜಿಯವರು ನನಗೆ ಇಂತಹ ಇನ್ನಿಬ್ಬರು ದೀನದಯಾಳರು ಸಿಕ್ಕರೆ ದೇಶದ ರಾಜಕೀಯ ಚಿತ್ರವನ್ನೇ ಬದಲಾಯಿಸುತ್ತೇನೆ ಎಂದಿದ್ದರು. ರಾಜಕೀಯ ಪಕ್ಷವೊಂದರ ರಾಷ್ಟ್ರೀಯ ಜವಾಬ್ದಾರಿ ಹೊತ್ತವರು ಹೀಗೂ ಬದುಕಬಹುದು ಎಂದು ಪಂ. ದೀನದಯಾಳರು ತೋರಿಸಿಕೊಟ್ಟರು.



**ಜನಸಂಘದ ಸಂಘಟನಾ ಕಾರ್ಯದರ್ಶಿಯಾಗಿ ದೀನದಯಾಳರದ್ದು ಅಪಾರ ಕೊಡುಗೆ.**

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ರಾಜಕೀಯ ಪಕ್ಷಗಳು ತಮ್ಮೊಳಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು ಎನ್ನುವುದು ಅವರ ಬಲವಾದ ನಂಬಿಕೆ. ಜನಸಂಘದಲ್ಲಿ ಹಾಗೂ ನಂತರ ಭಾರತೀಯ ಜನತಾ ಪಕ್ಷದಲ್ಲಿ ಸದಸ್ಯತಾ, ಸಾಂಸ್ಥಿಕ ಚುನಾವಣೆಗಳು, ಸಾಮೂಹಿಕ ನಿರ್ಣಯ ಮುಂತಾದ ಅನೇಕ ಪದ್ಧತಿಗಳು ಜಾರಿಗೊಂಡಿರುವುದರಲ್ಲಿ ದೀನದಯಾಳರದ್ದು ವಿಶೇಷ ಪಾತ್ರ.

ಜಾತಿ, ಹಣದ ಪ್ರಭಾವದಿಂದ ಹೊರತಾದ ರಾಷ್ಟ್ರೀಯ ಮನೋಭಾವದ, ಜನಪರಕಾಳಜಿಯ, ಸಂಸ್ಕಾರಯುತ ಕಾರ್ಯಕರ್ತರ ಬಲದ ಮೇಲೆ ಪಕ್ಷವೊಂದನ್ನು ಸಂಘಟಿಸಬಹುದು ಎನ್ನುವುದನ್ನು ತೋರಿಸಿಕೊಟ್ಟರು.

ರಾಷ್ಟ್ರ ಜೀವನದಲ್ಲಿ ಹಾಗೂ ಆಡಳಿತದಲ್ಲಿ ರಾಷ್ಟ್ರೀಯ ವಿಚಾರಗಳ ಅಳವಡಿಕೆಗೆ ಆಗ್ರಹಿಸಿ ಕಾಶ್ಮೀರ, ಗೋವಾ, ಹೈದರಾಬಾದ್, ಜುನಾಗಢ ಮುಂತಾದ ಅನೇಕ ಕಡೆ ಕಾರ್ಯಕರ್ತರನ್ನು ಹೋರಾಟದ ಮಾರ್ಗಕ್ಕಿಳಿಸಿ ಜನಸಂಘವನ್ನು ವಿಶಿಷ್ಟ ಪಕ್ಷವಾಗಿಸಿದ ಹಿರಿಮೆ ಅವರದ್ದು. ರಾಜಕೀಯದಲ್ಲಿ ಅಧಿಕಾರದಷ್ಟೇ ಆದರ್ಶವೂ ಮುಖ್ಯ ಎನ್ನುವುದನ್ನು ತೋರಿಸಿಕೊಟ್ಟವರು ದೀನದಯಾಳರು. ಚುನಾವಣೆಗಳಲ್ಲಿ ತನ್ನ ಜಾತಿಯ ಹೆಸರನ್ನು ಉಪಯೋಗಿಸಲು ಅವರು ಬಿಡಲಿಲ್ಲ. ರಾಜಸ್ಥಾನದಲ್ಲಿ ಜಮೀನ್ದಾರಿ ಪದ್ಧತಿಯ ಪರವಾಗಿ ನಿಂತ ಜನಸಂಘದ 6 ಶಾಸಕರನ್ನು ಪಕ್ಷದಿಂದ ಉಚ್ಚಾಟಿಸಿದವರು ಅವರು. ರಾಜಕೀಯದ ಪ್ರಚಾರವನ್ನು ಹಾಗೂ ಪರಿಭಾಷೆಯನ್ನು ವೈಯಕ್ತಿಕ ಮಟ್ಟಕ್ಕೆ ವಿರೋಧಿಸುತ್ತಿದ್ದ ಅವರು ವೈಚಾರಿಕ ನೆಲೆಯಲ್ಲೇ ಉತ್ತರಿಸಬೇಕು ಎನ್ನುವುದನ್ನು ಪ್ರತಿಪಾದಿಸಿದ್ದರು.

65ರ ಯುದ್ಧದ ಸಂದರ್ಭದಲ್ಲಿ ಸರ್ಕಾರಕ್ಕೆ ಸಂಪೂರ್ಣ ಸಹಕಾರಿಯಾಗಿ ನಿಂತು ಆದರ್ಶದ ನಿಲುಮೆಯನ್ನು ತೋರಿಸಿದರು.

68ರಲ್ಲಿ ಜನಸಂಘದ ಅಧ್ಯಕ್ಷರಾಗಿ ಅಲ್ಪಕಾಲ ಇದ್ದ ಅವರು ಸಾವಿನಲ್ಲೂ ಅನಾಮಿಕತೆಯನ್ನು ಅಯಾಚಿತವಾಗಿ ಸಾಧಿಸಿದರು.

**ದಾರ್ಶನಿಕರಾಗಿ. . . . .**



ಸಂಘದ ಪ್ರಚಾರಕರಾಗಿ ಜನಸಂಘದ ಜವಾಬ್ದಾರಿ ಹೊತ್ತು ಸಮಾಜ ಕಾರ್ಯವನ್ನು ಉಸಿರಾಗಿಸಿಕೊಂಡ ಪಂ. ದೀನದಯಾಳರಿಗೆ ದೇಶದ ಅಭಿವೃದ್ಧಿಯ ಹಿನ್ನೆಲೆಯಲ್ಲಿ ನೆಹರು ತುಳಿದ ಮಾರ್ಗ ಸರಿ ಎಂದು ಕಾಣುತ್ತಿರಲಿಲ್ಲ. ಸ್ವದೇಶಿ, ಸ್ವಾವಲಂಬನೆಗಳೇ ನಮ್ಮ ಅರ್ಥನೀತಿಯ ಅಡಿಗಲ್ಲಾಗಬೇಕು ಎಂದು ಪ್ರತಿಪಾದಿಸಿದವರು ಅವರು. ಕೃಷಿ ಉತ್ಪಾದನೆ ಹೆಚ್ಚಬೇಕು, ಆಹಾರದ ಸ್ವಾವಲಂಬನೆ ಸಾಧಿಸಬೇಕು ಎಂದು ಸಾರಿದರು.



ಅಭಿವೃದ್ಧಿಯ ಮಾರ್ಗದಲ್ಲಿ ಜೀವನ ಮೌಲ್ಯಗಳು ಹಾಗೂ ಪರಿಸರ ಇವೆರಡೂ ಕಳೆದುಹೋಗುತ್ತಿದ್ದುದನ್ನು ದೀನದಯಾಳರು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅಭಿವೃದ್ಧಿ ಹಾಗೂ ಪಶ್ಚಿಮೀಕರಣ (Development & Westernisation), ಕೈಗಾರಿಕೀಕರಣ ಹಾಗೂ ಉದಾರೀಕರಣ (Industrialization & Globalisation) ನಡುವಿನ ಅಂತರ ನಿಧಾನಕ್ಕೆ ಮಸುಕಾಗುತ್ತಿದ್ದುದನ್ನು ಅವರು ಗಮನಿಸುತ್ತಿದ್ದರು. ಇವೆಲ್ಲದಕ್ಕೂ ಉತ್ತರವಾಗಿ ತಮ್ಮ ಉಪನ್ಯಾಸಗಳ ಮುಖಾಂತರ ಏಕಾತ್ಮಮಾನವದರ್ಶನದ ವಿಚಾರವನ್ನು ಅವರು ಜನಸಂಘದ ಕಾರ್ಯಕರ್ತರೆದುರಿಗೆ ಮಂಡಿಸಿದರು.

ಭಾರತೀಯ ಚಿಂತನೆಯಲ್ಲಿ ವ್ಯಕ್ತಿ ಮತ್ತು ಸಮಾಜ ಹಾಗೂ ಪ್ರಕೃತಿ ಮತ್ತು ಪರಮಾತ್ಮನ ನಡುವೆ ಅಂತರವಿಲ್ಲ. ಒಂದು ಇನ್ನೊಂದಕ್ಕೆ ಜೋಡಿಸಿಕೊಂಡಿರುವ, ಒಂದು ಇನ್ನೊಂದರ ಏಳಿಗೆಗಾಗಿ ಅಸ್ತಿತ್ವದಲ್ಲಿರುವ ಅಂಶಗಳು. ಇಲ್ಲಿ ತಾಕಲಾಟವಿಲ್ಲ, ಸಮರಸತೆಯಿದೆ; ಸಂಘರ್ಷವಿಲ್ಲ, ಸಹಜೀವನವಿದೆ. ವ್ಯಕ್ತಿಯ ಜೀವನ ಸಮಾಜಾಭಿಮುಖವಾಗಿ ನಡೆಯುತ್ತಾ, ಪ್ರಕೃತಿಗೆ ಪೂರಕವಾಗಿ ಜೀವನ ಕ್ರಮವನ್ನು ಅರಳಿಸಿಕೊಳ್ಳುತ್ತಾ ಮಾನವನೇ ದೈವತ್ವಕ್ಕೇರುವ ಜೀವನಕ್ರಮ ಭಾರತದ್ದು. ಸಾವಿರಾರು ವರ್ಷಗಳ ಕಾಲ ಇಲ್ಲಿನ ಋಷಿಮುನಿಗಳು, ಸಮಾಜ ಚಿಂತಕರು ಈ ಜೀವನ ಕ್ರಮವನ್ನು ವಿಚಾರದಲ್ಲಿ ಪ್ರಸ್ತಾಪಿಸುವುದಲ್ಲದೇ, ಅದಕ್ಕೆ ಪೂರಕವಾದ ಜೀವನ-ಸಮಾಜ ರಚನೆಯನ್ನು ಸಾಧಿಸಿದರು.

ಸಾವಿರಾರು ವರ್ಷಗಳ ಲಿಖಿತ ಇತಿಹಾಸ ಹಾಗೂ ಲಕ್ಷಾಂತರ ವರ್ಷಗಳ ನಂಬಿಕೆಯ ಇತಿಹಾಸವುಳ್ಳ ಭಾರತ ಇಂದು ಕವಲುದಾರಿಯಲ್ಲಿ ನಿಂತಿದೆ. ಈ ಮಣ್ಣಿನ ನೆಲದಲ್ಲಿ ಅರಳಿದ ವಿಚಾರವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಂಡ ಸಮಾಜ ಕಳೆದ ಶತಮಾನದಲ್ಲಿ ಬಿರುಗಾಳಿಯಂತೆ ಬಂದ ಆಧುನಿಕ ಭೌತವಾದಕ್ಕೆ ತನ್ನನ್ನು ತಾನೇ ಒಡ್ಡಿಕೊಂಡಿದೆ. ಪರಂಪರೆಯಿಂದ ಬಂದ ಜೀವನ ಪದ್ಧತಿ, ಪ್ರಕೃತಿಯೊಡನೆ ಸಮರಸತೆ, ಆರಾಧನಾ ಪದ್ಧತಿಯಲ್ಲಿ ಸಹಬಾಳ್ವೆ, ಸಹ ಮಾನವನೊಡನೆ ಸಹಕಾರದ ಬದುಕು, ಸಂಘರ್ಷವಿಲ್ಲದ ವಿಶ್ವದೃಷ್ಟಿ ಇಲ್ಲಿನ ಜನರಲ್ಲಿ ಸ್ವಂತಕ್ಕೆ ಸ್ವಲ್ಪ, ಸಮಾಜಕ್ಕೆ ಸರ್ವಸ್ವ ಎನ್ನುವ ಜೀವನ ದೃಷ್ಟಿಯನ್ನು ಬೆಳೆಸಿತ್ತು. ಆರ್ಥಿಕ ಶ್ರೀಮಂತಿಕೆ, ಶಿಸ್ತು, ಸುವ್ಯವಸ್ಥಿತ ಜೀವನ, ಸೈನ್ಯಬಲ ಮುಂತಾದವು ಜಗತ್ತಿನ ಅನೇಕ ದೇಶಗಳ ಗುಣಲಕ್ಷಣಗಳಾದರೆ ತ್ಯಾಗ ಮತ್ತು ಸೇವೆಗಳೇ ಭರತಖಂಡದ ಜೀವನಾದರ್ಶಗಳು ಎನ್ನುವ ಸ್ವಾಮಿ ವಿವೇಕಾನಂದ ವಾಕ್ಯಕ್ಕನುಗುಣವಾಗಿ ಪರಹಿತಕ್ಕಾಗಿ ಬದುಕುವ ಜೀವನವನ್ನು ಬೆಳೆಸಿಕೊಂಡಿತು ಇಲ್ಲಿನ ಸಮಾಜ.

ಪುರುಷಾರ್ಥಗಳಲ್ಲಿ ಧರ್ಮ, ಮೋಕ್ಷಗಳ ಜೊತೆಗೆ ಅರ್ಥ, ಕಾಮಗಳನ್ನೂ ಒಳಗೊಂಡ ನಂಬಿಕೆ ನಮ್ಮದು. ಆದರೆ ಅರ್ಥ, ಕಾಮಗಳನ್ನು ಧರ್ಮ, ಮೋಕ್ಷಗಳ ಚೌಕಟ್ಟಿನೊಳಗೆ ಸಾಧಿಸಬೇಕು ಎನ್ನುವುದನ್ನು ವಿವೇಕ ಪೂರ್ಣವಾಗಿ ನಮ್ಮ ಹಿರಿಯರು ವ್ಯಕ್ತಿ ಜೀವನದಲ್ಲಿ ರೂಢಿಸಿದರು. ಪಾರಮಾರ್ಥಿಕ ದೃಷ್ಟಿಯನ್ನು ತನ್ನ ನಂಬಿಕೆಯಾಗಿ ರೂಢಿಸಿಕೊಂಡ ಭಾರತದ ಜನಜೀವನ ಆರ್ಥಿಕ ಸಮೃದ್ಧಿಯನ್ನು ಕಡೆಗಾಣಿಸಲಿಲ್ಲ. ಆರ್ಥಿಕ ಉನ್ನತಿ ಸಾಧಿಸಲು ಪ್ರೋತ್ಸಾಹ ಕೊಟ್ಟ ನಮ್ಮ ಹಿರಿಯರು ದೇಶ, ಸಮಾಜದ ಹಿತಕ್ಕಾಗಿ ಆರ್ಥಿಕ ಸಮೃದ್ಧಿಯನ್ನು ತ್ಯಜಿಸಿದ ರಾಜಾ ರಂತಿದೇವ, ಬಾಹುಬಲಿ, ಭಾಮಾಶಹ ಮುಂತಾದವರನ್ನು ಮಹಾತ್ಮರ ಪಟ್ಟಕ್ಕೇರಿಸಿತು. ರಾಜನಾಗಿದ್ದ ರಂತಿದೇವ ನ ತ್ವಹಂ ಕಾಮಯೇ ರಾಜ್ಯಂ, ನ ಸ್ವರ್ಗಂ ನ ಪುನರ್ಭವಂ । ಕಾಮಯೇ ದುಃಖತಪ್ತಾನಾಂ ಪ್ರಾಣಿನಾಂ ಆರ್ತಿನಾಶನಮ್ ॥ ಎನ್ನುತ್ತಾ ಪರಹಿತದ ತನ್ನ ಲಕ್ಷ್ಯವನ್ನು ಸಾದರಪಡಿಸಿದ್ದ.

ಪರಹಿತ ಸಾಧನೆ ಹಾಗೂ ಸ್ವಂತದ ಆರ್ಥಿಕ ಸಮೃದ್ಧಿಯ ನಡುವೆ ಒಂದು ವಿವೇಚನಾಯುತ ಸಮತೋಲನವನ್ನು ಕಂಡುಕೊಂಡ ಇಲ್ಲಿನ ಸಮಾಜ ಸಾವಿರಾರು ವರ್ಷಗಳ ಕಾಲ ಒಂದು ಸುಂದರ ಬದುಕನ್ನು ತನ್ನದಾಗಿಸಿಕೊಂಡಿತ್ತು. ಆ ಬದುಕು ಇಲ್ಲಿನ



ಜನಜೀವನವನ್ನು ವೈಯಕ್ತಿಕ ಹಾಗೂ ಸಾಮೂಹಿಕ ಉನ್ನತಿಯ ದಾರಿಯಲ್ಲಿ ಕೊಂಡೊಯ್ದದ್ದಲ್ಲದೇ ಜಗತ್ತಿಗೆ ಒಂದು ಸಮರಸ ಜೀವನ ದೃಷ್ಟಿಯನ್ನು ನೀಡಿತ್ತು. ಈ ದೃಷ್ಟಿಯನ್ನೇ ಪಂ. ದೀನದಯಾಳ್ ಉಪಾಧ್ಯಾಯರು ಏಕಾತ್ಮ ಮಾನವ ದರ್ಶನ ಎನ್ನುವ ವಿಚಾರಧಾರೆಯಲ್ಲಿ ಪ್ರಸ್ತುತಪಡಿಸಿದ್ದರು. ಈ ವಿಚಾರದಲ್ಲಿ ವ್ಯಕ್ತಿ-ಪರಮೇಷ್ಠಿ, ಸೃಷ್ಟಿ-ಸಮಷ್ಟಿಯ ನಡುವೆ ತಾಕಲಾಟವಿರಲಿಲ್ಲ, ಸಮರಸತೆಯಿತ್ತು. ಸ್ಪರ್ಧೆಯಿರಲಿಲ್ಲ, ಸಹಬಾಳ್ವೆಯಿತ್ತು.

16ನೇ ಶತಮಾನದ ಆರಂಭದಿಂದ ಅರಳಿದ ಪಶ್ಚಿಮದ ವಿಚಾರಧಾರೆ ಸಮಷ್ಟಿಗಿಂತ ವ್ಯಕ್ತಿ ಕೇಂದ್ರಿತವಾಗಿತ್ತು. ಡಾರ್ವಿನ್‌ನ ವಿಕಾಸವಾದದಲ್ಲಿ ವೈಜ್ಞಾನಿಕ ಸಂಶೋಧನೆಗಿಂತ ಪಶ್ಚಿಮದ ಸಂಸ್ಕೃತಿಯ ಪ್ರತಿಫಲನವೇ ಹೆಚ್ಚಿತ್ತು. Struggle for existence, Survival of the fittest, Individual rights, Exploitation of nature ಎನ್ನುವ ಡಾರ್ವಿನ್‌ನ ಸಿದ್ಧಾಂತದಲ್ಲಿ ಸಮರಸತೆಗೆ ಸ್ಥಾನವೇ ಇಲ್ಲ. ತಾಕಲಾಟವೇ ಹೆಚ್ಚು. ಇದರಿಂದ ಅರಳಿದ ಪಶ್ಚಿಮದ ಆರ್ಥಿಕ ದೃಷ್ಟಿ ಆರ್ಥಿಕ ಸಮೃದ್ಧಿಯ ಸಾಧನೆಯ ನಾಗಾಲೋಟದಲ್ಲಿ ತನ್ನನ್ನು ಒಡ್ಡಿಕೊಂಡಿತು. ಆಧುನಿಕ ಭೌತವಾದ ಕಳೆದ ನಾಲ್ಕು ಶತಮಾನಗಳಲ್ಲಿ ಜಗತ್ತಿನ ಮಿಕ್ಕೆಲ್ಲ ಜೀವನ ದೃಷ್ಟಿಗಳನ್ನು ಬದಿಗೆ ಸರಿಸಿ ತನ್ನ ಪಾರಮ್ಯವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟಿದೆ.

ಆಧುನಿಕ ಭೌತವಾದದ ಈ ನಾಗಾಲೋಟ ಮನುಷ್ಯನಿಗೆ ಸಮೃದ್ಧಿ ನೀಡಿದೆ. ಅಭಿವೃದ್ಧಿಯ ಫಲವನ್ನು ಉಣಿಸಿದೆ. ವಿಜ್ಞಾನದ ಸಂಶೋಧನೆಗಳು ಮಾನವನ ಮಿತಿಗಳನ್ನು ವಿಸ್ತರಿಸಿವೆ. ಜಗತ್ತನ್ನು ಹಳ್ಳಿಯಾಗಿಸಿದೆ. ಸಂಪರ್ಕವನ್ನು ಸುಲಭವಾಗಿಸಿದೆ. ಪ್ರಕೃತಿಯ ರಹಸ್ಯಗಳನ್ನು ಒಂದೊಂದಾಗಿ ಬಿಡಿಸುತ್ತಾ ಮನುಷ್ಯ ತನ್ನ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳುವ, ಮಿತಿಗಳನ್ನು ದಾಟುವ ಭರದಲ್ಲಿ ಇತಿಗಳನ್ನು ಉಲ್ಲಂಘಿಸಿರುವುದು ವಾಸ್ತವವೇ. ಈ ಕಾರಣಕ್ಕೆ ಅಭಿವೃದ್ಧಿಯ ಅನುಕೂಲತೆಗಳು ಆಧುನಿಕತೆಯ ಹೆಸರಿನಲ್ಲಿ ಮನುಷ್ಯನಿಗೆ ದೊರಕಿದ್ದಾಗಲೂ ಸಮರಸತೆಯ ದೃಷ್ಟಿಯ ಕೊರತೆಯ ಕಾರಣದಿಂದ ಹೊಸ ತಾಕಲಾಟಗಳು ಇಂದಿನ ಯುವಕರನ್ನು ಕಾಡುತ್ತಿರುವುದು ಅಷ್ಟೇ ವಾಸ್ತವ.

ಇಂದಿನ ಸಮಾಜ ಸಾಧನಗಳ ಅನುಕೂಲತೆಗಳನ್ನು ಹೊಂದಿದೆ. ಹೊಸ ಅವಕಾಶಗಳು ಕಣ್ಣೆದುರಿಗಿವೆ. ಅದರ ಹುಮ್ಮಸ್ಸಿನಲ್ಲಿ ಜೀವನ ದಿನೇ ದಿನೇ ವೇಗಗೊಳ್ಳುತ್ತಿದೆ. ಪರಿಧಿಗಳು ವಿಸ್ತರಿಸುತ್ತಿವೆ. ಅದರ ಜೊತೆಗೆ ಕುಟುಂಬಗಳು ಕಿರಿದಾಗುತ್ತಿವೆ, ಸಂಬಂಧಗಳು ಸೂಕ್ಷ್ಮವಾಗುತ್ತಿವೆ. ವೇಗ-ಧಾವಂತಗಳು ಜೀವನವನ್ನು ಹಗುರಾಗಿಸುತ್ತಿದೆ. ಆಧುನಿಕತೆಯ ಓಟ ಮನುಷ್ಯ ಜೀವನವನ್ನು ಸಂಕೀರ್ಣವಾಗಿಸುವ ಜೊತೆ ಮನುಷ್ಯ ಮತ್ತು ಪ್ರಕೃತಿಯ ನಡುವಿನ ತಾಕಲಾಟವನ್ನು ಅಪಾಯದ ಹಂತಕ್ಕೆ ತೆಗೆದುಕೊಂಡು ಹೋಗಿದೆ.

ಆಧುನಿಕತೆ ಹಾಗೂ ಪಾಶ್ಚಿಮಾತ್ಯ ಬದುಕು ಒಂದೇ ಎನ್ನುವ ಅರ್ಥಹೀನ ವಾದ, ಅವಲಂಬನೆ ಹಾಗೂ ಅಳವಡಿಕೆ ಸಮಸ್ಯೆಯ ವಿಸ್ತರಣೆಗೆ ಕಾರಣವಾಗಿದೆ. ವಿಜ್ಞಾನದ ಸಾಧನೆಗಳನ್ನು ಮನುಷ್ಯ ಜೀವನದ ಒಳಿತಿಗೆ ಬಳಸಿಕೊಳ್ಳುವ ಹಂತದಲ್ಲೇ ಪಶ್ಚಿಮದ ಬದುಕನ್ನು ಅನುಕರಿಸ ಹೊರಟ ಭಾರತದ ಯುವ ಮನಸ್ಸುಗಳು ಪಶ್ಚಿಮದ ಏಕರೂಪತೆ, ಅನಿಯಮಿತತೆ, ಸ್ವಕೇಂದ್ರಿತ ಜೀವನ, ಭೋಗವಾದದ ದಾರಿಯನ್ನೂ ತನ್ನದನ್ನಾಗಿಸಿಕೊಂಡಿದೆ. ವಿಜ್ಞಾನ ಮತ್ತು ಪಶ್ಚಿಮದ ನಡುವಿನ ಅಂತರವನ್ನು ಮುಸುಕಾಗಿಸಿಕೊಂಡ ಯುವ ಜನತೆ ಇಂದು ಋಣಾತ್ಮಕ ವ್ಯೂಹದೊಳಗೆ (Negative spiral) ತನ್ನನ್ನು ಸಿಲುಕಿಸಿಕೊಂಡಿದೆ. ವೈದ್ಯಕೀಯ ಪಾರಮ್ಯ, ಸಂಪರ್ಕ ಸಾಧನಗಳು, ಆರ್ಥಿಕ ಉನ್ನತಿ ಮುಂತಾದ ಅನುಕೂಲತೆಗಳ ಜೊತೆಗೆ ಪರಿಸರ ನಾಶ, ಅತಿ ನಗರೀಕರಣ, ಸಣ್ಣ ಕುಟುಂಬಗಳು, ಭೂ ಸಂತ್ರಸ್ತರು ಮುಂತಾದ ಸಮಸ್ಯೆಗಳನ್ನೂ ಒಳಗೊಂಡಿದೆ.

ತ್ಯಜೇದೇಕಂ ಕುಲಸ್ಯಾರ್ಥೇ...... ಎನ್ನುತ್ತಿದ್ದ ಭಾರತೀಯ ಮನಸ್ಸುಗಳು ತ್ಯಜೇದ್ ಸರ್ವಸ್ವಂ ಸ್ವಾರ್ಥಾರ್ಥೇ...... ಎನ್ನುವ ದಾರಿಯಲ್ಲಿವೆ. ಅತ್ತ ಪಶ್ಚಿಮದ ಭೌತವಾದವನ್ನು ಪೂರ್ಣ ಒಪ್ಪಿಕೊಳ್ಳಲಾಗದೇ, ಇತ್ತ ಪರಂಪರೆಯಿಂದ ಬಂದ ಜೀವನ ದೃಷ್ಟಿಯನ್ನು ಅಳವಡಿಕೊಳ್ಳಲೂ ಆಗದೇ ತಾಕಲಾಟದ ಹಂತದಲ್ಲಿ ಇಂದಿನ ಸಮಾಜವಿದೆ.

ಆರ್ಥಿಕ ಸ್ಥಿತ್ಯಂತರದ, ಕೌಟುಂಬಿಕ ತಾಕಲಾಟಗಳ, ವ್ಯಕ್ತಿಗತ ಮಹತ್ವಾಕಾಂಕ್ಷೆಗಳ ಆಧುನಿಕತೆ ನಮ್ಮನ್ನು ಇಂದು ಅಸ್ವಸ್ಥತೆಯ ಅಂಚಿಗೆ ತಂದು ನಿಲ್ಲಿಸಿದೆ. ಇಂದು ನಮಗೆ ಅವಶ್ಯಕತೆಯಿರುವುದು ಆದರ್ಶದ ಆರಾಧನೆ, ಅಳವಡಿಕೆ. ಭಾರತದ ಸಮಾಜ ವಿಜ್ಞಾನ ಹಾಗೂ ಪಶ್ಚಿಮದ ಬದುಕಿನ ನಡುವಿನ ಅಂತರವನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಆಧುನಿಕತೆ ಹಾಗೂ ಭೋಗವಾದ ಒಂದೇ ಎನ್ನುವ ಸಂಕುಚಿತ ಮನಸ್ಸಿನಿಂದ ಹೊರಬರಬೇಕಾಗಿದೆ.

## ಚರ್ಚೆಗೊಂದು ಸಾಲು...

**ಸಂಘಟನೆಯ ಬೇರುಗಳನ್ನು ಗಟ್ಟಿಗೊಳಿಸಲು ಸದಸ್ಯತಾ ಅಭಿಯಾನ ಒಂದು ಅವಕಾಶ**



# ರಾಜಕೀಯ - ಯುವಕರಿಗೆ ಅವಕಾಶ ನಿರಾಕರಣೆ

**ವಿವಿಧ ಕ್ಷೇತ್ರಗಳಲ್ಲಿ ಯುವಕರು ಅಪೂರ್ವ ಸಾಧನೆ ಮಾಡಿದ ಬಹಳಷ್ಟು ನಿದರ್ಶನಗಳಿವೆ. ಲ್ಯಾರಿ ಪೇಜ್ ಗೂಗಲ್‌ನ್ನು ಸ್ಥಾಪಿಸಿದಾಗ ಆತನ ವಯಸ್ಸು 25. ಮಾರ್ಕ್ ಝುಕರ್‌ಬರ್ಗ್ ಫೇಸ್ಬುಕ್ ಸ್ಥಾಪಿಸಿದಾಗ ಆತನಿಗೆ 20 ವರ್ಷವೂ ಆಗಿರಲಿಲ್ಲ. ಜಾರ್ಜ್ ಸೊರೊಸ್, ಜಾನ್ ಡಿ. ರಾಕ್ ಫೆಲ್ಲರ್ ಮುಂತಾದವರು ಸಿರಿವಂತರಾಗಿ ಖ್ಯಾತರಾಗುವಾಗ ಅವರ ವಯಸ್ಸು 50 ತಲುಪಿತ್ತು. ಆದರೆ ಎಲಾನ್ ಮಸ್ಕ್ ಎಲೆಕ್ಟ್ರಿಕ್ ವಾಹನಗಳನ್ನು ತಯಾರಿಸುವ ಮೂಲಕ ಜನಪ್ರಿಯತೆಗೇರಿದಾಗ ಅವರಿಗೆ 30 ವರ್ಷವೂ ಆಗಿರಲಿಲ್ಲ. ಭಾರತದಲ್ಲೂ ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗೈದ ಹಲವಾರು ಯುವಕರ ಉದಾಹರಣೆಗಳು ಸಿಗುತ್ತವೆ. ಭಾರತಕ್ಕೆ ಪ್ರಸಿದ್ಧಿ ಮತ್ತು ಹಣ ತಂದುಕೊಟ್ಟ ಐಟಿ ಉದ್ಯಮದಲ್ಲಿ ಯುವಕರೇ ಅಧಿಕ ಸಂಖ್ಯೆಯಲ್ಲಿರುವುದು, ಆದರೂ ಯುವಕರು ಉನ್ನತಿಗೆ ಬರದಿರುವ ಅಥವಾ ಮೇಲೇರಲು ಕಷ್ಟಪಡುತ್ತಿರುವ ಕ್ಷೇತ್ರವೊಂದಿದ್ದರೆ ಅದು ರಾಜಕೀಯ ಕ್ಷೇತ್ರ.**



**ರಾಮ್ ಮಾಧವ್**
ಲೇಖಕರು

**ದೇ**ಶದ ಭವಿಷ್ಯವು ಯುವಕರ ಕೈಯಲ್ಲಿದೆ ಎಂಬುದಾಗಿ ಇದೀಗ ಸಾಮಾನ್ಯವಾಗಿ ಕೇಳಿ ಬರುತ್ತಿರುವ ಮಾತು, ವಾಸ್ತವಿಕ ವಿಷಯವೆಂದರೆ ಕೇವಲ ಭವಿಷ್ಯವಷ್ಟೇ ಅಲ್ಲ, ವರ್ತಮಾನ ಕೂಡಾ ಈಗ ಯುವಕರ ಕೈಯಲ್ಲಿದೆ.

ಸ್ವಲ್ಪ ಹಿಂದಿನವರೆಗೆ ಪ್ರಮುಖ ಕೈಗಾರಿಕೆಗಳು, ಉದ್ದಿಮೆಗಳು, ಸಾಮಾಜಿಕ ಸಂಘಟನೆಗಳು ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಎಲ್ಲವೂ ಹಿರಿಯರ ಕೈಯಲ್ಲಿತ್ತು. ಆದರೆ ಕಳೆದೆರಡು ದಶಕಗಳಲ್ಲಿ ಪರಿಸ್ಥಿತಿ ಬದಲಾಗಿದೆ. ಕೈಗಾರಿಕೋದ್ಯಮ ಬೆಳೆದ ಕಾರಣದಿಂದಾಗಿ ಯುವಕರು ಮುಂಚೂಣಿಗೆ ಬಂದು ಉನ್ನತ ಸ್ಥಾನಕ್ಕೇರುತ್ತಿದ್ದಾರೆ. ತಂತ್ರಜ್ಞಾನ ಮತ್ತು ಆವಿಷ್ಕಾರಗಳು ಪ್ರಗತಿಗೆ ಮೂಲವಾದುದರಿಂದ ಇದರಲ್ಲಿ ನಿಪುಣರಾದ ಯುವ ಜನಾಂಗವು ಪ್ರತಿಯೊಂದು ಕ್ಷೇತ್ರದಲ್ಲೂ ಮುಂಚೂಣಿಗೆ ಬರುತ್ತಿದೆ.

ಕೈಗಾರಿಕೆ, ಸಂಶೋಧನೆ, ವ್ಯಾಪಾರ, ವಾಣಿಜ್ಯೋದ್ಯಮ, ಸಾಮಾಜಿಕ ಮಾಧ್ಯಮ ಮೊದಲಾದವುಗಳಲ್ಲಿ ಈಗ ಯುವಕರದೇ ನಾಯಕತ್ವ. ಡಿಜಿಟಲ್ ಕ್ರಾಂತಿ, ಎನ್‌ಜಿಒ ಮತ್ತು ಸಾಮಾಜಿಕ ಆಂದೋಲನದಲ್ಲಿ ಅವರು ಅವಿಭಾಜ್ಯ ಅಂಗವಾಗಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಯುವಕರು ಅಪೂರ್ವ ಸಾಧನೆ ಮಾಡಿದ ಬಹಳಷ್ಟು ನಿದರ್ಶನಗಳಿವೆ. ಲ್ಯಾರಿ ಪೇಜ್ ಗೂಗಲ್‌ನ್ನು ಸ್ಥಾಪಿಸಿದಾಗ ಆತನ ವಯಸ್ಸು 25. ಮಾರ್ಕ್ ಝುಕರ್‌ಬರ್ಗ್ ಫೇಸ್ಬುಕ್ ಸ್ಥಾಪಿಸಿದಾಗ ಆತನಿಗೆ 20 ವರ್ಷವೂ ಆಗಿರಲಿಲ್ಲ. ಜಾರ್ಜ್ ಸೊರೊಸ್, ಜಾನ್ ಡಿ. ರಾಕ್ ಫೆಲ್ಲರ್ ಮುಂತಾದವರು ಸಿರಿವಂತರಾಗಿ ಖ್ಯಾತರಾಗುವಾಗ ಅವರ ವಯಸ್ಸು 50 ತಲುಪಿತ್ತು. ಆದರೆ ಎಲಾನ್ ಮಸ್ಕ್ ಎಲೆಕ್ಟ್ರಿಕ್ ವಾಹನಗಳನ್ನು ತಯಾರಿಸುವ ಮೂಲಕ ಜನಪ್ರಿಯತೆಗೇರಿದಾಗ ಅವರಿಗೆ 30 ವರ್ಷವೂ ಆಗಿರಲಿಲ್ಲ.

ಭಾರತದಲ್ಲೂ ಕೈಗಾರಿಕೆ, ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಅಪೂರ್ವ ಸಾಧನೆಗೈದ ಹಲವಾರು ಯುವಕರ ಉದಾಹರಣೆಗಳು ಸಿಗುತ್ತವೆ. ಭಾರತಕ್ಕೆ ಪ್ರಸಿದ್ಧಿ ಮತ್ತು ಹಣ ತಂದುಕೊಟ್ಟ ಐಟಿ ಉದ್ಯಮದಲ್ಲಿ ಯುವಕರೇ ಅಧಿಕ ಸಂಖ್ಯೆಯಲ್ಲಿರುವುದು, ಆದರೂ ಯುವಕರು ಉನ್ನತಿಗೆ ಬರದಿರುವ ಅಥವಾ ಮೇಲೇರಲು ಕಷ್ಟಪಡುತ್ತಿರುವ ಕ್ಷೇತ್ರವೊಂದಿದ್ದರೆ ಅದು ರಾಜಕೀಯ ಕ್ಷೇತ್ರ.

ಜಗತ್ತಿನ ಜನಸಂಖ್ಯೆಯ ಶೇ. 50ರಷ್ಟು ಜನ 30ಕ್ಕಿಂತ ಕಡಿಮೆ ವಯಸ್ಸಿನವರು, ಭಾರತದಲ್ಲಂತೂ ಈ ವಯಸ್ಸಿನವರ ಸಂಖ್ಯೆ ಶೇ. 60ರ ಹತ್ತಿರವಿದೆ. ಆದರೂ ವಿಶ್ವಸಂಸ್ಥೆಯ ಮಾಹಿತಿಯೊಂದರ ಪ್ರಕಾರ ಚುನಾಯಿತ ಪ್ರತಿನಿಧಿಗಳಲ್ಲಿ ಯುವಕರ ಸಂಖ್ಯೆ ಶೇ. 2ಕ್ಕಿಂತಲೂ ಕಡಿಮೆ, 2016ರಲ್ಲಿ ವಿಶ್ವಸಂಸ್ಥೆಯು ಇದನ್ನೊಂದು ಸವಾಲಾಗಿ ಸ್ವೀಕರಿಸಿ ರಾಜಕೀಯದಲ್ಲಿ ಯುವಕರ ಪಾಲುದಾರಿಕೆ ಹೆಚ್ಚಿಸಲು ಆಂದೋಲನ ನಡೆಸಿತು, ವಿಶ್ವಸಂಸ್ಥೆಯ ಹಲವಾರು ಅಂಗಸಂಸ್ಥೆಗಳು ಅದಕ್ಕೆ ಸಹಕಾರ ನೀಡಿದವು, ಆದರೂ ಇದು ದೊಡ್ಡಯಶಸ್ಸು ಕಾಣಲಿಲ್ಲ.

ಭಾರತದಂತಹ ಸಂವೇದನಾಶೀಲ ಪ್ರಜಾಪ್ರಭುತ್ವ ರಾಷ್ಟ್ರದಲ್ಲೂ ವಿಧಾನಸಭೆಗೆ ಅಥವಾ ಸಂಸತ್ತಿಗೆ ಚುನಾಯಿಸಲ್ಪಡುವ ಯುವಕರ ಸಂಖ್ಯೆ ಬಹಳಷ್ಟು ಕಡಿಮೆ, ದೇಶದಲ್ಲಿ ಯುವಕರೇ ಈಗ ಅಧಿಕ ಜನಸಂಖ್ಯೆ ಹೊಂದಿದ್ದರೂ ಇತ್ತೀಚಿನ 18ನೇ ಲೋಕಸಭಾ ಚುನಾವಣೆಯಲ್ಲಿಆಯ್ಕೆಯಾದ ಜನಪ್ರತಿನಿಧಿಗಳ ಸರಾಸರಿ ವಯಸ್ಸು 5 ವರ್ಷ, 17ನೇ ಲೋಕಸಭೆಯಲ್ಲಿ ಜನಪ್ರತಿನಿಧಿಗಳ ಸರಾಸರಿ ವಯಸ್ಸು 50 ವರ್ಷವಾಗಿತ್ತು. ಪ್ರಸ್ತುತ ಶೇ. 11ರಷ್ಟು ಸಂಸತ್ ಸದಸ್ಯರು ಮಾತ್ರ 40 ವರ್ಷಕ್ಕಿಂತ ಕೆಳಗಿನವರಾಗಿದ್ದಾರೆ. ಶೇ. 38ರಷ್ಟು ಮಂದಿ 41 ರಿಂದ 55 ವರ್ಷದೊಳಗಿನವರಾಗಿದ್ದಾರೆ. ಸುಮಾರು ಅರ್ಧದಷ್ಟು ಸಂಸದರುಗಳು 55ಕ್ಕಿಂತ ಹೆಚ್ಚಿನ ವಯಸ್ಸಿನವರು.

ಯುವ ನಾಯಕರನ್ನು ರಾಜಕೀಯದಲ್ಲಿ ತೊಡಗಿಸಿಕೊಳ್ಳುವ ಪ್ರಯತ್ನಗಳು ನಡೆದಿಲ್ಲವೆಂದಲ್ಲ. ಆದರೆ ಅಂತಹ ಪ್ರಯತ್ನಗಳೆಲ್ಲಾ ಸ್ವಜನಪಕ್ಷಪಾತ ಮತ್ತು ವಂಶವಾದಿ ರಾಜಕೀಯಕ್ಕೆ ಸೀಮಿತವಾಗಿದೆ. ಕೆಲವು ರಾಜಕಾರಣಿಗಳ ಕುಟುಂಬದ ಯುವಸದಸ್ಯರಷ್ಟೇ ರಾಜಕೀಯದಲ್ಲಿ ನಾಯಕರಾಗಿ ಮೇಲೇರುತ್ತಿದ್ದಾರೆ. ಬಿಜೆಪಿ ಮತ್ತು ಎಡಪಕ್ಷಗಳು ಮಾತ್ರ ಇದಕ್ಕೆ ಅಪವಾದವಾಗಿವೆ. ಸ್ವಾತಂತ್ರ್ಯ ದೊರಕಿದಂದಿನಿಂದಲೇ ಇಂತಹ ಸ್ವಜನಪಕ್ಷಪಾತ ಆರಂಭವಾಗಿದೆ. ಸಮರ್ಥ ಯುವಕನೊಬ್ಬ ಕುಟುಂಬ ರಾಜಕಾರಣದ ಮೂಲಕ ಮೇಲೇರಿ ಬಂದರೂ ಅದು ದೊಡ್ಡ ಸಮಸ್ಯೆ ಎನಿಸಲಾರದು. ಆದರೆ ನಮ್ಮಲ್ಲಿ ಸಾಮಾನ್ಯವಾಗಿ ಅಸಮರ್ಥ ಯುವಕರು ಕೇವಲ ತಮ್ಮ ವಂಶದ ನೆಲೆಯಲ್ಲಿ ರಾಜಕೀಯವಾಗಿ ಮೇಲೇರುತ್ತಿದ್ದಾರೆ. ಅವರು ನಾಯಕರಾಗಿ ಮೆರೆಯಲು ಸಾಮರ್ಥ್ಯಕ್ಕಿಂತ ಹೆಚ್ಚಾಗಿ ವಂಶವೇ ಕಾರಣವಾಗುತ್ತಿದೆ. ತಮಿಳುನಾಡಿನಿಂದ ಹಿಡಿದು ಜಮ್ಮು-ಕಾಶ್ಮೀರದವರೆಗೆ ಕೆಲವು ಕುಟುಂಬಗಳು ರಾಜಕೀಯದಲ್ಲಿ ತಮ್ಮದೇ ಹಿಡಿತ ಸಾಧಿಸಿಕೊಂಡು ಬಂದಿದೆ. ಇವು ಇನ್ನಿತರ ಸಮರ್ಥ, ಶುದ್ಧ ಚಾರಿತ್ರ್ಯದ ಮತ್ತು ನಿಷ್ಠಾವಂತ ಯುವಕರು ಮೇಲೇರಲು ಅವಕಾಶ ನಿರಾಕರಿಸಿವೆ.

ಈ ಕೆಟ್ಟ ಪರಂಪರೆಯು ಸ್ವಾತಂತ್ರ್ಯ ಆಂದೋಲನದ ಸಮಯದಲ್ಲೇ ಆರಂಭಗೊಂಡಿತು. ಮೋತಿಲಾಲ್ ನೆಹರೂ ಅವರು ತಮ್ಮ ರಾಜಕೀಯ ಮತ್ತು ಆರ್ಥಿಕ ಪ್ರಭಾವವನ್ನು ಉಪಯೋಗಿಸಿಕೊಂಡು ತಮ್ಮ ಪುತ್ರ ಜವಹಾರಲಾಲ್ ಅವರನ್ನು ಕಾಂಗ್ರೆಸ್ ಪಕ್ಷದಲ್ಲಿ ಮೇಲೆತ್ತಿದರು. ಜವಾಹರಲಾಲ್ ನೆಹರು ಸಮರ್ಥ ನಾಯಕರೇನೋ ಹೌದು, ಆದರೆ 40ನೇ ವಯಸ್ಸಿನಲ್ಲೇ ಅವರು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಲು ಕಾರಣ ಅವರ ಸಾಮರ್ಥ್ಯವಲ್ಲ, ಬದಲಾಗಿ ತಮ್ಮ ತಂದೆಯ ಪ್ರಭಾವ, ಸ್ವಾತಂತ್ರ್ಯಾ ನಂತರ ಕಾಂಗ್ರೆಸ್ಸಿನಲ್ಲಿ ಇದೇ ಪರಂಪರೆ ಮುಂದುವರಿಯಿತು.

ನೆಹರೂ ಬಳಕ ಇಂದಿರಾಗಾಂಧಿ ಕೂಡಾ ತಮ್ಮ 40ನೇ ವಯಸ್ಸಿನಲ್ಲೇ ಕಾಂಗ್ರೆಸ್‌ನ ಅಧ್ಯಕ್ಷರಾದರು. ಇದನ್ನು ನೆಹರೂ ಒಪ್ಪಿದರೆ ಅಥವಾ ಇಲ್ಲವೇ ಎಂಬುದು ಚರ್ಚಾಸ್ಪದ ವಿಷಯ. ಏಕೆಂದರೆ ಕೆಲವು ಶಿಕ್ಷಣವೇತ್ತರರು ನೆಹರೂ ಇದನ್ನು ವಿರೋಧಿಸಿದ್ದರೆಂದು ವಾದಿಸುವುದಿದೆ. ಆದರೆ ಒಂದಂತೂ ನಿಜ ಅಲ್ಲಿಂದ ಬಳಿಕ ಕಾಂಗ್ರೆಸ್ ಎಂಬುದು ನೆಹರೂ-ಗಾಂಧಿ ಕುಟುಂಬದ ಸೊತ್ತಾಗಿದೆ. ಇದೇರೀತಿ ಕೆಲವು ಪ್ರಾದೇಶಿಕ ಪಕ್ಷಗಳ ಪರಿಸ್ಥಿತಿಯೂ ವಂಶವಾದಿ ಸೊತ್ತಿನಂತಾಗಿದೆ.

ಪ್ರಧಾನಿ ಮೋದಿಯವರು ಈ ವಿಪರ್ಯಾಸವನ್ನು ಸ್ವಾತಂತ್ರ ದಿನದ ಭಾಷಣದಲ್ಲಿ ಉಲ್ಲೇಖಿಸಿದ್ದರು. ಪರಿವಾರವಾದಿ ಮತ್ತು ಜಾತಿವಾದಿ ರಾಜಕೀಯವನ್ನು ತೊಡೆದು ಹಾಕಬೇಕಾಗಿದೆ ಎಂದು ಅವರು ಕರೆ ನೀಡಿದ್ದರು. ನಮ್ಮ ರಾಜಕೀಯ ಕ್ಷೇತ್ರವನ್ನು ವಂಶವಾದಿ ಆಳ್ವಿಕೆಯಿಂದ ಮುಕ್ತಗೊಳಿಸುವುದು ಅತ್ಯಗತ್ಯವಾಗಿದೆ. ಹೊಸ ಪೀಳಿಗೆಯ ನಾಯಕರನ್ನು ನಾವು ಬೆಳೆಸಬೇಕಾಗಿದೆ. ರಾಜಕೀಯ ಹಿನ್ನೆಲೆ ಇಲ್ಲದ ಕುಟುಂಬದಿಂದ 1 ಲಕ್ಷ ಯುವಕರನ್ನು ರಾಜಕೀಯದಲ್ಲಿ ಬೆಳೆಸಬೇಕಾಗಿದೆ. ಯಾವುದೇ ರಾಜಕೀಯ ಕೌಟುಂಬಿಕ ಹಿನ್ನೆಲೆ ಇರದ ಯುವಜನರು ಮುಂದೆ ಬಂದು ಜನರನ್ನು ಪ್ರತಿನಿಧಿಸಬೇಕಾಗಿದೆ ಹಾಗೂ ರಾಜಕೀಯದಲ್ಲಿ ನಾಯಕತ್ವ ವಹಿಸಬೇಕಾಗಿದೆ'' ಎಂದು ಪ್ರಧಾನಿ ಶ್ರೀ ಮೋದಿ ಹೇಳಿದ್ದರು. ಮುಂದಿನ ದಿನಗಳಲ್ಲಿ ಯುವಕರು ರಾಜಕೀಯದ ವ್ಯಾಖ್ಯಾನವನ್ನು ಬದಲಿಸಬೇಕಾಗಿದೆ ಎಂದು ಅವರು ಸಾರಿದ್ದರು.

ಇದನ್ನೇ ಅವರು 'ಮನ್ ಕೀ ಬಾತ್, ರೇಡಿಯೋ ಭಾಷಣದಲ್ಲೂ ಉಲ್ಲೇಖಿಸಿದ್ದರು. ಬಹಳಷ್ಟು ಯುವಕರು ರಾಜಕೀಯ ಪ್ರವೇಶಿಸಲು ಸಿದ್ಧರಿದ್ದಾರೆ. ಅವರಿಗೆ ಸರಿಯಾದ ಅವಕಾಶ ಮತ್ತು ಮಾರ್ಗದರ್ಶನ ಬೇಕಾಗಿದೆ ಎಂದೂ ಅವರು ಹೇಳಿದರು. ಪ್ರಧಾನಿ ಶ್ರೀ ಮೋದಿ ಹೇಳಿದಂತೆ ದೇಶದ ಯುವಕರು ಈಗ ಸಿದ್ಧರಾಗಿದ್ದಾರೆ. ಆದರೆ ರಾಜಕೀಯ ವರ್ಗವು ಇದಕ್ಕೆ ಸಿದ್ಧವಾಗಿದೆಯೇ? ರಾಜಕೀಯ ಜೋಕ್ ಹೇಗಿದೆ ಎಂದರೆ ರಾಜಕೀಯ ಮುಖಂಡರು ತಮ್ಮ ಪುತ್ರ ಅಥವಾ ಪುತ್ರಿ ರಾಜಕೀಯದಲ್ಲಿ ನಾಯಕತ್ವ ವಹಿಸಲು ಮುಂದಾಗುವ ತನಕ ಉಳಿದ ಯುವ ನಾಯಕರ ಕುರಿತಂತೆ ಮಾತನಾಡುವುದೇ ಇಲ್ಲ, ಇಂತಹ ಮನಸ್ಥಿತಿ ಬದಲಾಗುವುದೇ?



# BRUTUS - an Honorable Man



ಸಂತೋಷ್ ತಮ್ಮಯ್ಯ
ಅಂಕಣಕಾರರು

ಮೂಡಾ ಹಗರಣದಿಂದ ಇಕ್ಕಟ್ಟಿಗೆ ಸಿಲುಕಿದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಪ್ರಕರಣ ಜನಪ್ರತಿನಿಧಿಗಳ ನ್ಯಾಯಾಲಯದ ಮೆಟ್ಟಿಲೇರಿದೆ. ನ್ಯಾಯಾಲಯದಲ್ಲಿ ವಾದಿಸುತ್ತಾ ಪ್ರಕರಣವನ್ನು ಸಿದ್ದರಾಮಯ್ಯನವರ ಪರ ವಕೀಲರು ಮುಖ್ಯಮಂತ್ರಿಗಳನ್ನು ಇನ್ನಿಲ್ಲದಂತೆ ಹೊಗಳಿ ನನ್ನ ಕಕ್ಷಿದಾರರು ತಪ್ಪೆಸಗಿಲ್ಲ ಎಂದು ಪಟ್ಟುಬಿಡದೆ ವಾದಿಸಿದರು. ಅದುವರೆಗೆ ಸಾಧ್ಯವಿದ್ದ ಎಲ್ಲಾ ದಾಖಲೆ, ಕಾನೂನು ಸೂಕ್ಷ್ಮಗಳ ಥಾಳಗಳನ್ನು ಉದುರಿಸಿದ್ದ ದೂರುದಾರರ ಪರ ವಕೀಲರು, ''ಮಹಾಸ್ವಾಮಿಗಳೇ, ನನ್ನ ಪ್ರತಿವಾದಿ ವಕೀಲರ ವಾದ ಬ್ರೂಟಸ್‌ನನ್ನು **brutus is an honorable man** ಎಂದು ಬಣ್ಣಿಸಿದಂತಿದೆ ಎಂದು ಹೇಳಿದಾಗ ನ್ಯಾಯಮೂರ್ತಿಗಳು ತುಟಿಯಂಚಿನಲ್ಲಿ ಕಿರುನಗುವನ್ನು ತಂದುಕೊಂಡು, ಹೌದು, **brutus is an honorable man** ಎಂದು ಐತಿಹಾಸಿಕವಾದ 'ಆ್ಯಂಟನಿಯ ಭಾಷಣ'ದಂತೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ನುಡಿದು **you too brutus?** ಎಂದು ಪ್ರಸನ್ನವದನರಾದರು! ಹಾಗಾದರೆ ಏನಿದು **brutus is an honorable man** ನ್ಯಾಯಮೂರ್ತಿಗಳಿಂದ 'ಹೌದು' ಮತ್ತು **you too brutus**ನ ಅರ್ಥವೇನು? ಅಸಲಿಗೆ ಯಾರು ಈ ಬ್ರೂಟಸ್ ಸಿದ್ದರಾಮಯ್ಯ ಪ್ರಕರಣದಲ್ಲಿ ಈ ಬ್ರೂಟಸ್ ನ್ಯಾಯಾಲಯದಲ್ಲಿ ಉಲ್ಲೇಖವಾಗಲು ಕಾರಣವೇನು? ಸೂಕ್ಷ್ಮಮತಿ ದೂರುದಾರರ ಪರ ವಕೀಲರು ಸಿದ್ದರಾಮಯ್ಯನವರನ್ನು ಬ್ರೂಟಸ್‌ನಿಗೆ ಹೋಲಿಸಿದ್ದರಾ?

ಹೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು...' ವಿಕ್ರಮಾರ್ಜುನ ವಿಜಯದ ಒಂಬತ್ತನೆಯ ಅಧ್ಯಾಯದ ಈ 69ನೇ ಪದ್ಯವನ್ನು ಒಂದಲ್ಲಾ ಒಂದು ಸಂದರ್ಭದಲ್ಲಿ ಓದದ, ಕೇಳದ ಸಾಹಿತ್ಯದ ವಿದ್ಯಾರ್ಥಿಗಳು ಇರಲಾರರು! ಏಕೆಂದರೆ ಅದೊಂದು ಪದ್ಯ ಪಂಪನ ಕಾಲವಾಗಿ ಅದೆಷ್ಟೋ ಶತಮಾನಗಳವರೆಗೆ ವಿದ್ವಾಂಸರಲ್ಲಿ ಚರ್ಚೆಗೆ ವಸ್ತುವಾಯಿತು. ಆಧುನಿಕ ಸಾಹಿತಿಗಳಂತೂ ಅದನ್ನು ಹಿಗ್ಗಾಮುಗ್ಗಾ ಎಳೆದು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಿದರು. ಇದೊಂದು ಪದ್ಯದ ಕಾರಣಕ್ಕೆ ಹಲವಾರು ಸಾಹಿತಿಗಳು ಪರಸ್ಪರ ಕಿತ್ತಾಡಿಕೊಂಡರು. ಕೊನೆಗೆ ನೋಡುವಷ್ಟು ನೋಡಿದ ಉಡುಪಿಯ ಮಂಜೇಶ್ವರ ಗೋವಿಂದ ಪೈ ಸಂಶೋಧನಾ ಕೇಂದ್ರ, ಪಾದೇಕಲ್ಲು ವಿಷ್ಣುಭಟ್ಟರ ಸಂಪಾದಕತ್ವದಲ್ಲಿ 'ಭಾನುಮತಿಯ ನೆತ್ತ' ಹೆಸರಿನ ಪುಸ್ತಕವೊಂದನ್ನು ಹೊರತಂದು ಚರ್ಚೆಯನ್ನು ನಿಲ್ಲಿಸಿತು. ನೆತ್ತವನಾಡಿದ (ಪಗಡೆಯಾಡಿದ) ಭಾನುಮತಿ ಸೋತಾಗ ಏನಾಯಿತು? ಕರ್ಣನೇಕ ಆಕೆಗೆ ಕೀಟಲೆ ಮಾಡಿದ? ಕೊರಳ ಮುತ್ತಿನ ಸರ ತುಂಡಾಗಿ ಬಿದ್ದಿದ್ದನ್ನು ಕಂಡ ದುರ್ಯೋಧನ ಪತ್ನಿಯನ್ನು ಶಂಕಿಸಿದನೇ? ಮೊದಲಾದ ವಿವರಗಳು ಇಲ್ಲಿ ಅಪ್ರಸ್ತುತ. ಆದರೆ ಪಂಪ ಎಲ್ಲಾ ಕಾಲಕ್ಕೂ ಪ್ರಸ್ತುತ ಎಂಬುದನ್ನು ಈ ಸಾಲು ನಿರೂಪಿಸುತ್ತದೆ. ಕವಿಯೊಬ್ಬ ಗೆಲ್ಲುವುದು ಹೀಗೆ. ಕವಿ ತಾನಳಿದರೂ ಕಾವ್ಯದ ಮೂಲಕ ಬದುಕಿರುತ್ತಾನೆ ಎಂಬುದಕ್ಕೆ ಈ ನೆತ್ತವನಾಡಿ ಭಾನುಮತಿ ಸೋಲ್ತೊಡೆ...' ಉತ್ತಮ ಉದಾಹರಣೆ. ಅದು ಕಾವ್ಯದ ಮಹತ್ವಕ್ಕೆ ಸಾಕ್ಷಿ ಕೂಡ.

ಪಂಪನ ಈ ಸಾಲು ಗಂಭೀರ ಸಾಹಿತ್ಯಕ ಚರ್ಚೆಗೆ ಗ್ರಾಸವಾದರೆ, ಆಂಗ್ಲ ಸಾಹಿತ್ಯದಲ್ಲಿ ಇದಕ್ಕಿಂತಲೂ ಮಜವಾದ ಅನೇಕ ಸಂಗತಿಗಳಿವೆ. ಹಲವು ಆಂಗ್ಲ ನಾಟಕಗಳು ಸಾಹಿತ್ಯಕ ವಲಯವನ್ನು ಎಂದೋ ದಾಟಿ ಸಮಾಜದೊಳಗೆ ಬೆರೆತುಹೋದವುಗಳಿವೆ. ಯಾವುದೋ ಶತಮಾನದ ಕವಿಯ ಸಾಲುಗಳು ಇಂಗ್ಲಿಷಿನಲ್ಲಿ ಇಂದಿಗೂ ನಾಣ್ಣುಡಿಗಳಾಗಿ ಬಳಕೆಯಾಗುತ್ತಿವೆ. ಕವಿಸಮಯ ಇಂದಿಗೂ ರೂಪಕವಾಗಿ ಹರಿಯುತ್ತಿವೆ. ಕವಿ ಸೃಷ್ಟಿಸಿದ ಪಾತ್ರಗಳಿಂದ ಅನೇಕ ಪದಪುಂಜಗಳು ಹುಟ್ಟಿವೆ, ಜಾಗತಿಕವಾಗಿ ಹರಡಿವೆ. ಕವಿಸಮಯವನ್ನು ಜಗತ್ತು ಇಂದಿಗೂ ಹೊತ್ತು ನಡೆಯುತ್ತಿದೆ. ಜಾಗತೀಕರಣ ಪೂರ್ವದಲ್ಲೂ ಅವು ಗಡಿ, ಭಾಷೆ, ಸಂಸ್ಕೃತಿಗಳ ಎಲ್ಲೆಗಳನ್ನು ಮೀರಿ ಬಳಕೆಯಾಗುತ್ತಿವೆ. ಅದಕ್ಕೆ ಇತ್ತೀಚಿನ ಒಂದು ಉದಾಹರಣೆ ಕರ್ನಾಟಕದ ರಾಜಕೀಯ ಮತ್ತು ನ್ಯಾಯಾಂಗದಲ್ಲಿ ನಡೆದ ಒಂದು ಪ್ರಸಂಗ.

ಮೂಡಾದಲ್ಲಿ ನಡೆದಿದೆಯೆನ್ನಲಾದ ಹಗರಣ, ಅದರಿಂದ ಇಕ್ಕಟ್ಟಿಗೆ ಸಿಲುಕಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಕರಣ ಜನಪ್ರತಿನಿಧಿಗಳ ನ್ಯಾಯಾಲಯದ ಮೆಟ್ಟಿಲೇರಿದ್ದು, ವಿರೋಧಪಕ್ಷಗಳ ಪ್ರತಿಭಟನೆ, ಪಾದಯಾತ್ರೆಗಳೆಲ್ಲವೂ ರಾಜ್ಯದ ಜನರಿಗೆ ಕುತೂಹಲ ಮತ್ತು ಮನರಂಜನೆಯನ್ನು ಒದಗಿಸಿರಬಹುದು. ಆದರೆ ಮೊನ್ನೆ ನ್ಯಾಯಾಲಯದ ಕಲಾಪದಲ್ಲಿ ಅದು ಬೇರೆಯೇ ಒಂದು ಸಂವೇದನೆಯನ್ನು ಸೃಷ್ಟಿ ಮಾಡಿತು. ನ್ಯಾಯಾಲಯದಲ್ಲಿ ವಾದಿಸುತ್ತಾ ಪ್ರಕರಣವನ್ನು ಸಿದ್ದರಾಮಯ್ಯನವರ ಪರ ವಕೀಲರು ಮುಖ್ಯಮಂತ್ರಿಗಳನ್ನು ಇನ್ನಿಲ್ಲದಂತೆ ಹೊಗಳಿದರು. ನನ್ನ ಕಕ್ಷಿದಾರರು ತಪ್ಪೆಸಗಿಲ್ಲ ಎಂದು ಪಟ್ಟುಬಿಡದೆ ವಾದಿಸಿದರು. ಇಂಥವರು ಭ್ರಷ್ಟಾಚಾರ ಎಸಗಲು ಸಾಧ್ಯವೇ ಮಹಾಸ್ವಾಮಿ ಎಂದು ನ್ಯಾಯಮೂರ್ತಿಗಳಲ್ಲಿ ಅರಿಕೆ ಮಾಡಿಕೊಂಡರು. ಅದುವರೆಗೆ ಸಾಧ್ಯವಿದ್ದ ಎಲ್ಲಾ ದಾಖಲೆ, ಕಾನೂನು ಸೂಕ್ಷ್ಮಗಳ ಥಾಳಗಳನ್ನು ಉದುರಿಸಿದ್ದ ದೂರುದಾರರ ಪರ ವಕೀಲರು, ''ಮಹಾಸ್ವಾಮಿಗಳೇ, ನನ್ನ ಪ್ರತಿವಾದಿ ವಕೀಲರ ವಾದಗಳನ್ನು ಕೇಳಿದರೆ ನನಗೆ ಷೇಕ್ಸ್‌ಪಿಯರನ ಜೂಲಿಯಸ್ ಸೀಸರ್ ನಾಟಕ ನೆನಪಿಗೆ ಬರುತ್ತದೆ. ಅವರ ವಾದ ಬ್ರೂಟಸ್‌ನನ್ನು brutus is an honorable man ಎಂದು ಬಣ್ಣಿಸಿದಂತಿದೆ ಎಂಬ ಮಹಾ ಅಸ್ತ್ರವನ್ನು ಹೂಡಿದರು. ಬುದ್ದಿವಂತ ವಕೀಲರ ಕಾನೂನು ತಜ್ಞತೆ, ಸಾಹಿತ್ಯ ಜ್ಞಾನ ಮತ್ತು ನ್ಯಾಯಾಲಯದಲ್ಲಿ ಅದನ್ನು ಮಂಡಿಸಿದ ರೀತಿಗೆ ಮಾರುಹೋದ ನ್ಯಾಯಮೂರ್ತಿಗಳು ತುಟಿಯಂಚಿನಲ್ಲಿ ಕಿರುನಗುವನ್ನು ತಂದುಕೊಂಡು, ಹೌದು, brutus is an honorable man ಎಂದು ಐತಿಹಾಸಿಕವಾದ 'ಆ್ಯಂಟೊನಿಯ ಭಾಷಣ'ದಂತೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ನುಡಿದರು. ಜೊತೆಗೆ you too bru& tus? ಎಂದು ಪ್ರಸನ್ನವದನರಾದರು! ನ್ಯಾಯಾಲಯದಲ್ಲಿ ನೆರೆದಿದ್ದ ಸೂಕ್ಷ್ಮಮತಿ ವಕೀಲರುಗಳು ಒಮ್ಮೆ ಮೈಕೊಡವಿಕೊಂಡರು. ಅದಕ್ಕೆ ಎರಡು ಕಾರಣಗಳಿದ್ದವು. ಒಂದು, ವಕೀಲರ ವಾದಕ್ಕೆ ಪ್ರತಿಯಾಗಿ ನ್ಯಾಯಮೂರ್ತಿಗಳ ಸ್ಪಂದನೆ ನೂರಾರು ಅರ್ಥಗಳನ್ನು ಸೂಚಿಸುವಂತಿತ್ತು ಮತ್ತು ಇನ್ನೊಂದು, ಆ ಪ್ರಸಂಗವನ್ನು ಕೆಲವು ವಕೀಲರುಗಳು ತೀರಾ ಒಣವೆನಿಸುವ ನ್ಯಾಯಾಲಯದ ಕೊಠಡಿಯಲ್ಲಿ ಪರಿಮಳಭರಿತವಾದ ಸುಗಂಧವೊಂದು ತೇಲಬಂದಂತಾಯಿತು ಎಂದು ಹೇಳಿಕೊಂಡರು! ಹಾಗಾದರೆ ಏನಿದು brutus is an honorable man ನ್ಯಾಯಮೂರ್ತಿಗಳೆಂದ 'ಹೌದು' ಮತ್ತು you too brutusನ ಅರ್ಥವೇನು? ಅಸಲಿಗೆ ಯಾರು ಈ ಬ್ರೂಟಸ್ ಸಿದ್ದರಾಮಯ್ಯ ಪ್ರಕರಣದಲ್ಲಿ ಈ ಬ್ರೂಟಸ್ ನ್ಯಾಯಾಲಯದಲ್ಲಿ ಉಲ್ಲೇಖವಾಗಲು ಕಾರಣವೇನು? ಸೂಕ್ಷ್ಮಮತಿ ದೂರುದಾರರ ಪರ ವಕೀಲರು ಸಿದ್ದರಾಮಯ್ಯನವರನ್ನು ಬ್ರೂಟಸ್‌ನಿಗೆ ಹೋಲಿಸಿದ್ದರಾ? ನ್ಯಾಯಮೂರ್ತಿಗಳಿಗೂ ಅದು ಅರ್ಥವಾಗಿ ಅವರು you too brutus so?

ಈ ಬ್ರೂಟಸ್‌ನನ್ನು ಅರಿಯುವ ಮೊದಲು ಜೂಲಿಯಸ್ ಸೀಸರನನ್ನು ತಿಳಿಯಬೇಕು. ಕ್ರಿ.ಪೂ Iನೇ ಶತಮಾನದಲ್ಲಿ ರೋಮ್ ಸಾಮ್ರಾಜ್ಯದ ಮಹಾವೀರನೂ, ತತ್ವಶಾಸ್ತ್ರಜ್ಞನೂ ರೋಮ್ ಧಾರ್ಮಿಕ ಮುಖಂಡನೂ ಆಗಿದ್ದ ಜೂಲಿಯಸ್ ಸೀಸರ್ ಪ್ರಾಚೀನ ರೋಮ್ ನಾಗರಿಕತೆಗೆ ಬೆಳಕನ್ನು ನೀಡಿದವನು. ಆ ಕಾಲದಲ್ಲೇ ಅನೇಕ ಪರಿವರ್ತನೆಗಳನ್ನು ತಂದ ಸೀಸ ದಾರ್ಶನಿಕನಾಗಿದ್ದನು. ಕಾನೂನುತಜ್ಞನಾಗಿದ್ದ ಸೀಸರ್ ಜನಾನುರಾಗಿ ಮತ್ತು

ಜನಪ್ರಿಯನಾಗಿದ್ದ. ರೋಮಿನ ನ್ಯಾಯಾಧೀಶ (ಪೀಟರ್) ಆಗಿಯೂ ನೇಮಕವಾಗಿದ್ದ ಸೀಸ ನ್ಯಾಯದಾನವನ್ನು ತೂಕಕ್ಕಿಟ್ಟು ಮಾಡುತ್ತಿದ್ದ. ಮಹತ್ವಾಕಾಂಕ್ಷಿಯಾಗಿದ್ದ ಸೀಸ ಭಾಷಣ ಕಲೆ ಮತ್ತು ತತ್ವಶಾಸ್ತ್ರವನ್ನು ರೋಮಿನಾಚೆಯ ಕ್ಲೋಡ್ ನಗರದಲ್ಲಿ ಶಾಸ್ತ್ರೀಯವಾಗಿ ಕಲಿತು ಬಂದಿದ್ದ. ತನ್ನ ಬಹುಮುಖ ಪ್ರತಿಭೆಯಿಂದ ಸೀಸ ರೋಮ್ ಗಣರಾಜ್ಯದಲ್ಲಿ ಬಹುಬೇಗನೆ ಗುರುತ್ತಿಸಿಕೊಂಡ, ಅದರ ಫಲವಾಗಿ ಆತನನ್ನು ರೋಮನ್ ತುಕಡಿಯೊಂದರ ಕ್ಲೆಸ್ಟರ್ (ಸೇನಾಪತಿ) ಆಗಿ ನೇಮಿಸಿ ಸೋನಿನ ದಂಗೆಯನ್ನು ಅಡಗಿಸಲು ಕಳುಹಿಸಲಾಯಿತು. ಸೀಸರ್ ಸ್ಪೇನಿನ ದಂಗೆಯನ್ನು ನಿರ್ದಯವಾಗಿ ಅಡಗಿಸಿದ ರೀತಿ, ಕೆಲವರಿಗೆ ನೀಡಿದ ಕ್ಷಮಾದಾನಗಳಿಂದ ಆತ ಮತ್ತಷ್ಟು ಜನಪ್ರಿಯನಾದ. ತನ್ನ ಸಂವೇದನಾಶೀಲತೆಯಿಂದ ಖ್ಯಾತಿಯ ಶಿಖರಕ್ಕೇರಿದ, ಅದೂ ಎಂಥ ಜನಪ್ರಿಯತೆಯೆಂದರೆ ಸ್ಪೇನಿನಲ್ಲಿ ಸೀಸರನಿಗೆ ಸಿಕ್ಕ ಯಶಸ್ಸಿನಿಂದ ರೋಮ್ ಗಣರಾಜ್ಯವನ್ನು ನಿಯಂತ್ರಿಸುತ್ತಿದ್ದ ಗೆಳೆಯನಂತೆ ಕಂಡ. ಅದೇ ಹೊತ್ತಿನಲ್ಲಿ ಸೀಸರ್‌ನ ಅರಿವಿಗೆ ಬಾರದಂತೆ ಕೆಲವರು ಸೀಸರ್‌ನ ಬಳಗವೇ ಆಗಿದ್ದ ಕೆಲವರನ್ನು ಸಂಚಿನ ಗುಂಪಿಗೆ ಸೇರಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರು. ಸೆನೆಟ್ ಸದಸ್ಯರು ಸೀಸರ್‌ನನ್ನು ಕೊಲ್ಲಲು ಇನ್ನಿಲ್ಲದ ಹುನ್ನಾರ ನಡೆಸಲಾರಂಭಿಸಿದ್ದರು. ಆ ಗುಂಪಿನಲ್ಲಿ ಬ್ರೂಟಸ್‌ನ ನಿಕಟವರ್ತಿಯಾಗಿದ್ದ 'ಕೃಶಕಾಯದ ಬಿಳುಚಿಕೊಂಡ' (ಪ್ಲೂಟಾರ್ಕ್ ವರ್ಣನೆ) ಕ್ಯಾಸಿಯಸ್ ಇದ್ದ ಮತ್ತು ಸೀಸರನನ್ನು ಇನ್ನಿಲ್ಲದಂತೆ ಹೊಗಳುತ್ತಿದ್ದ ಬಕೇಟ್ ಬುದ್ದಿಯ ಆ್ಯಂಟನಿಯೂ ಇದ್ದ. ಅಂದರೆ ಬಕೇಟ್ ಬುದ್ಧಿಗೆ ಕೂಡ ಪುರಾತನ ರೋಮಿನಷ್ಟೇ ಇತಿಹಾಸವಿದೆ! ಒಂದು ದಿನ ಸೆನೆಟ್‌ನ 60 ಜನ ಸದಸ್ಯರು ಕ್ಯಾಸಿಯಸ್ ಮತ್ತು ಆ್ಯಂಟನಿಯೊಡನೆ ಬ್ರೂಟಸ್‌ನ ಬಳಿ ಬಂದು, ರೋಮ್ ಉಳಿಯಲು ಸೀಸರ್ ನಾಶವಾಗಲೇಬೇಕು ಮತ್ತು ನೀನದರ ನೇತೃತ್ವ ವಹಿಸಿಕೊಳ್ಳಬೇಕೆಂದು ಕೇಳಿಕೊಂಡರು. ಆಘಾತಗೊಂಡು ಒಪ್ಪದ ಬ್ರೂಟಸ್‌ನನ್ನು ಸಂಚುಕೋರರು, ''ಹೇಡಿಯಾದವನು ಪದೇಪದೇ ಸಾಯುತ್ತಾನೆ, ಧೀರನಾದವನು ಒಮ್ಮೆ ಮಾತ್ರ ಸಾಯುತ್ತಾನೆ'' ಎಂದು ತಾತ್ವಿಕವಾಗಿ ಕಟ್ಟಿಹಾಕತೊಡಗಿದರು. ಬ್ರೂಟಸ್ ಅದಕ್ಕೂ ಬಗ್ಗದಿದ್ದಾಗ ದುಷ್ಟಕೂಟ ಆತನ ರೋಮ್‌ಭಕ್ತಿಯನ್ನು ಕೆರಳಿಸಲು 500 ವರ್ಷಗಳ ಹಿಂದೆ ರೋಮಿನ ನಿರಂಕುಶ ರಾಜರಾಗಿದ್ದ ಟಾರ್ಕಿನ್ನರನ್ನು ಹೊರಗಟ್ಟಿದ ಲೂಸಿಯಸ್ ಬ್ರೂಟಸ್ ಎಂಬವನ ರೋಮ್ ಭಕ್ತಿಯನ್ನೂ, 'ಪರಾಕ್ರಮವನ್ನೂ ಮಾರ್ಕಸ್ ಬೂಟಿನ ಮುಂದೆ ಮಂಡಿಸತೊಡಗಿದರು. ''ನೀನೂ ಕೂಡ ಒಬ್ಬ ಬ್ರೂಟಿಸ್ ಎನ್ನುವುದನ್ನು ಮರೆಯಬೇಡ' ಎಂದು ತಲೆತಿರುಗಿಸಿದರು. ಆಗ ಮಾರ್ಕಸ್ ಬ್ರೂಟಸ್ ಬದಲಾದ ಸಂಚಿನ ಭಾಗವಾದ, ಹಿಂದಿನ ಬ್ರೂಟಸನ ತ್ಯಾಗ ಅವನೆದೆಯನ್ನು ಉಬ್ಬಿಸತೊಡಗಿಸಿತು. ಉಪಕಾರ ಸ್ಮರಣೆಯನ್ನು ಮರೆತ, ಕ್ಯಾಸಿಯಸನು ಸೀಸರ್‌ನ ವಿರುದ್ಧ ಎಲ್ಲರನ್ನೂ ಎತ್ತಿಕಟ್ಟುವ ಕಾರ್ಯವನ್ನು ನಾಜೂಕಿನಿಂದ ಮಾಡಿದ, ಬ್ರೂಟಸ್ ಪಿತೂರಿಯ ನಾಯಕನಾದರೆ ತಾವು ಮಾಡುವ ಕೊಲೆಗೆ ಪಾವಿತ್ರ್ಯತೆ ಮತ್ತು ನ್ಯಾಯಸಮ್ಮತತೆ ಲಭಿಸುತ್ತದೆ, ಜನರನ್ನು ನಂಬಿಸಬಹುದೆಂದು ಪಿತೂರಿಗಾರರು ಯೋಜನೆ ಹಾಕಿದರು. ಬ್ರೂಟಸ್ ನಾಯಕನಾದರೆ ಸೀಸರನಿಗೆ ಎಳ್ಳಷ್ಟೂ ತಿಳಿಯದು ಎಂಬ ತಂತ್ರವೂ ಇತ್ತು. ಇದರ ನಡುವೆ ಸೀಸರನಿಗೆ ಜ್ಯೋತಿಷಿಯೊಬ್ಬ ''ಮಾರ್ಚ್ 15ನೇ ತಾರೀಖು ನಿನಗೆ ಕಂಟಕವಿದೆ, ಎಚ್ಚರದಿಂದಿರು ಎಂದಿದ್ದ. ನೋಡನೋಡುತ್ತಲೇ ಮಾರ್ಚ್ 15 ಬಂತು. ಸೀಸರ್ ಶಾಸನಸಭೆಗೆ ಹೊರಟ. ದಾರಿಯಲ್ಲಿ ಅದೇ ಜ್ಯೋತಿಷಿ ಸೀಸರನಿಗೆ ಎದುರಾದ. ಸೀಸರ್ ಅವನಿಗೆ, ''ಮಾರ್ಚ್ 15 ಬಂತು ಎಂದು ಗೇಲಿ ಮಾಡಿದ, ಜ್ಯೋತಿಷಿ ಯೋಜನೆಯನ್ನು ತಿಳಿದಿದ್ದನೋ ಏನೋ, ಆತ ಹೌದು ಆದರೆ ಮಾರ್ಚ್ 15 ಇನ್ನೂ ಮುಗಿದಿಲ್ಲ ಎಂದು ಎಲ್ಲವೂ ಪಿತೂರಿಗಾರರು ಅಂದುಕೊಂಡಂತೆಯೇ ನಡೆಯಿತು. ಷೇಕ್ಸ್‌ಪೀಯರ್ ಪ್ರಕಾರ ಅಂದು ಸೀಸರನಿಗೆ ಮೊದಲು ಚೂರಿ. ಹಾಕಿದವನು ಬ್ರೂಟಸ್. ಅದನ್ನು ಕಂಡ ಸೀಸರ್ ಆಶ್ಚರ್ಯಚಕಿತನಾಗಿ you too brutus? ( Et tu, Brute, ಬ್ರೂಟಸ್ ನೀನೂನಾ?) ಎಂದನಂತೆ. ಬ್ರೂಟಸನೇ ಕೊಲ್ಲಲು ಯತ್ನಿಸಿದ ಮೇಲೆ ಇನ್ನು ಬದುಕಿರುವುದು ವ್ಯರ್ಥ ಎಂದುಕೊಂಡನಂತೆ ಸೀಸರ್ ಷೇಕ್ಸ್‌ಪಿಯರ್ ಪ್ರಕಾರ ಅಂದು ಸೀಸರನ ದೇಹಕ್ಕೆ 23 ಜನ ಚೂರಿ ಹಾಕಿದರು. ಇನ್ನು ಕೆಲವರ ಪ್ರಕಾರ ಚೂರಿ ಹಾಕಿದವರು 60 ಜನ ಮತ್ತು ಕೊನೆಗೆ ಚುಚ್ಚಿದವನು ಬ್ರೂಟಸ್. ಆಗ ಸೀಸರ್ ಮಾತಾಡುವ ಸ್ಥಿತಿಯಲ್ಲಿರಲಿಲ್ಲ ಎಂದು ಅನೇಕ ಇತಿಹಾಸಕಾರರು ಬರೆಯುತ್ತಾರೆ. ಆದರೆ ಷೇಕ್ಸ್‌ಪಿಯರನ ನಾಟಕಕ್ಕೆ ಆಕರವಾಗಿದ್ದ ಪ್ಲೂಟಾರ್ಕ್ ಕೃತಿಯ ಪ್ರಕಾರ ಸೀಸರ್ you too ಎಂದಿದ್ದ ಮತ್ತು ಸೀಸರ್‌ನ ಮರಣಾನಂತರ ಬ್ರೂಟಸ್ ಭಾಷಣವನ್ನೂ ಮಾಡಿದ್ದ!

ವಿಚಿತ್ರವೆಂದರೆ ಈ ಬೆಳವಣಿಗೆಗಳ ನಂತರ ಪಿತೂರಿಗಾರರು ಅಂದುಕೊಂಡಂತೆ ಎಲ್ಲವೂ ನಡೆಯಲಿಲ್ಲ. ಸಂಚಿನ ಭಾಗವಾಗಿದ್ದ ಆ್ಯಂಟೊನಿ ಜನರೆದುರು ಬಂದು ಅಡ್ಡಗೋಡೆಯ ಮೇಲೆ ದೀಪವಿಟ್ಟಂತ ಮಾತಾಡತೊಡಗಿದ. ಒಮ್ಮೆ ಸೀಸರನನ್ನು ಹೊಗಳತೊಡಗಿದ, ಅದೇ ಭಾಷಣದಲ್ಲಿ ಬ್ರೂಟಸ್‌ನನ್ನು ಹೊಗಳುತ್ತಾ, This was the Noblest Roman of them all' ಎಂದೂ ಕುಟುಕಿದ! (ಇದು ಷೇಕ್ಸ್ ಪಿಯರ್ ನಾಟಕದಲ್ಲಿ ಮಾತ್ರ ಇದೆ), ಷೇಕ್ಸ್‌ಪಿಯರನ ಈ ವಾಕ್ಯವೇ boo brutus is an honorable man ಎಂಬ ರೂಪ ತಳೆಯಿತು. ಜನರ ನಡುವೆ ಆಡುನುಡಿಯಾಗಿ ಬಳಕೆಗೆ ಬಂತು. ಎಷ್ಟೆಂದರೆ ಕರ್ನಾಟಕದ ನ್ಯಾಯಾಲಯ ಕಲಾಪದಲ್ಲೂ ಅದು ಉಲ್ಲೇಖವಾಗುವಷ್ಟು! ಅದು ಸಾಹಿತ್ಯ ಕೃತಿಯೊಂದು ಸಮಾಜಕ್ಕೆ ಕೊಡಬಹುದಾದ ದೊಡ್ಡ ಕೊಡುಗೆ. ಆದರೆ ದೂರುದಾರರ ಪರ ವಕೀಲರಿಗೆ ಸಿದ್ದರಾಮಯ್ಯ ಪ್ರಕರಣದಲ್ಲಿ ಈ ಸೀಸರ್ ಬ್ರೂಟಸ್ ನೆನಪಿಗೆ ಬಂದಿದ್ದೇಕೆ? ಪ್ರತಿವಾದಿ ವಕೀಲರು. ಸಿದ್ದರಾಮಯ್ಯನವರನ್ನು ಇನ್ನಿಲ್ಲದಂತೆ ಹೊಗಳಿ, ಅವರ

ಮೇಲಿನ ಆರೋಪವನ್ನು ಅಲ್ಲಗಳೆದಾಗಲೇ ದೂರುದಾರ ವಕೀಲರಿಗೆ ನೆನಪಾದನೆಂದರೆ ಅವರು ಸಿದ್ದರಾಮಯ್ಯನವರಲ್ಲಿ ಬ್ರೂಟಸ್‌ನನ್ನು ಕಂಡಿರಲೇಬೇಕು. ಜೊತೆಗೆ ಈ ಬ್ರೂಟಸ್ ಸರ್ಕಾರವೆಂಬ ವ್ಯವಸ್ಥೆಗೆ ಚೂರಿ ಹಾಕಲು ಹೊರಟಿದ್ದಾರೆಂದು ಅವರಿಗನಿಸಿರಬೇಕು!

ಬಿಟ್ಟಿ ಭಾಗ್ಯಗಳಿಗೆ ಮಾನವತೆ, ಸಮಾನತೆ, ಸಮಾಜವಾದಗಳ ವ್ಯಾಖ್ಯಾನಗಳನ್ನು ಕೊಟ್ಟುಕೊಳ್ಳುವ ಮುಖ್ಯ ಮಂತ್ರಿಗಳು ಬ್ರೂಟಸ್‌ನಂತೆ ಎಲ್ಲೋ ಎಡವಿರಲೇಬೇಕು. ತತ್ವಜ್ಞಾನಿ ಮಾರ್ಕಸ್ ಬ್ರೂಟಸ್‌ನೇ ಕ್ಯಾಸಿಯಸನ ಮಾತುಗಳಿಗೆ ಬಲಿಯಾಗಲಿಲ್ಲವೇ? ಜೊತೆಗೆ ಸಿದ್ದರಾಮಯ್ಯ ಬಳಗದಲ್ಲಿ ಬ್ರೂಟನನ ಬಳಗದಲ್ಲಿದ್ದಂತೆ ಹೊಗಳುಭಟರೇ ತುಂಬಿದ್ದಾರೆ. ಅದರಲ್ಲೂ ಆ್ಯಂಟೊನಿಯಂಥ ಶಕುನಿ, ರೀತಿಯ ವ್ಯಕ್ತಿಗಳೇ ಹೆಚ್ಚಿದ್ದಾರೆ. ಅಲ್ಲದೆ ಸಂಚುಕೋರರು ಬ್ರೂಟಿಸನನ್ನು ಹಾಳುಮಾಡಲು 500 ವರ್ಷದ ಹಿಂದಿನ ಇನ್ನೊಬ್ಬ ಬ್ರೂಟಸ್‌ನ ಉಬ್ಬಿಸಿದಂತೆ ಸಿದ್ದರಾಮಯ್ಯನವರನ್ನೂ ದೇವರಾಜ ಅರಸು ಎಂದು ಅಟ್ಟಕ್ಕೇರಿಸುವವರಿದ್ದಾರೆ! ಕೊನೆಗೆ ದೇವರಾಜ ಅರಸು ಸ್ಥಿತಿ ಕೂಡ ಟಾರ್ಕಿನ್ನರನ್ನು ರೋಮಿನಿಂದ ಓಡಿಸಿದ ಹಳೆಯ ಬ್ರೂಟಸನ ಸ್ಥಿತಿಯೇ ಆಯಿತು. ಟಾರ್ಕಿನ್ನರನ್ನು ಓಡಿಸಿದರೂ ಆತ ರಾಜನಾಗಲಿಲ್ಲ, ರೋಮ್ ಇತಿಹಾಸದಲ್ಲಿ ಅಜರಾಮರ ಎನಿಸಿಕೊಳ್ಳಲಿಲ್ಲ. ದೂರುದಾರರ ಪರವಾದ ಬುದ್ಧಿವಂತ, ಸೂಕ್ಷ್ಮಗ್ರಾಹಿ ವಕೀಲರಿಗೆ ಇವೆಲ್ಲವೂ ತಲೆಗೆ ಬಂದಿರಬಹುದು, ಕಿರು ನಗುವಿನಿಂದ you too brutus? ಎಂದ ನ್ಯಾಯಮೂರ್ತಿಗಳಿಗೂ ಆ ಸೂಕ್ಷ್ಮತೆ ಹೊಳೆದಿರಬಹುದು, ಆದರೆ ಕಟ್ಟಕಡೆಯದಾಗಿ ನಮಗೆ ಮೂಡುವ ಪ್ರಶ್ನೆ ಒಂದೇ. ಇಲ್ಲಿ ಸಿದ್ದರಾಮಯ್ಯನವರೇ ಸ್ವತಃ ಬ್ರೂಟಸನೋ ಅಥವಾ ಸಿದ್ದರಾಮಯ್ಯನವರೇ ಬ್ರೂಟಸ್ ತರದ ವ್ಯಕ್ತಿಗಳಿಂದ ಸುತ್ತುವರಿದಿದ್ದಾರೋ ಎನ್ನುವುವುದು.

# ಹತಾಶ ಕಾಂಗ್ರೆಸ್‌ನ ಹಳೇ ಚಾಳಿ

ಒಂದು ವಿಷಯ ತಮ್ಮ ಬುಡಕ್ಕೆ ಬಂದಾಗ, ತಮ್ಮ ಮೇಲಿನ ಆರೋಪಗಳನ್ನು ಮುಚ್ಚಿಕೊಳ್ಳಲು ಇತರರೆಡೆಗೆ ಬೊಟ್ಟು ಮಾಡಿ ತೋರಿಸುವ ಕೆಟ್ಟ ಚಾಳಿ ಕೆಲವರಿಗೆ ಇರುತ್ತದೆ. ಅಂತಹುದೆ ಚಾಳಿ ಕಾಂಗ್ರೆಸಿಗರಿಗೆ ಇದೆ. ಬೇರೆಯವರ ಮೇಲೆ ವೃಥಾ ಆರೋಪ ಮಾಡುವುದು, ತಿರುಗಿ ಅವರದ್ದೆ ತಪ್ಪುಗಳನ್ನು ಸಾಕ್ಷಿ ಸಮೇತ ಇಟ್ಟಾಗ, ಹುರುಳಿಲ್ಲದಂತೆ ಮಾತಾಡುವುದು ಕಾಂಗ್ರೆಸ್ ನಾಯಕರ ರೂಢಿಯಾಗಿದೆ.

ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಮೇಲೆ, ಕಾಂಗ್ರೆಸ್ ನಾಯಕರು 40% ಆರೋಪ ಮಾಡಿದರು. ಆದರೆ ಆಡಳಿತಕ್ಕೆ ಬಂದು ಒಂದು ವರ್ಷವಾದರೂ ಈ 40% ಆರೋಪವನ್ನು ತನಿಖೆಯನ್ನು ಮಾಡಲಿಲ್ಲಾ, ಸಾಬೀತು ಪಡಿಸಲಾಗಲಿಲ್ಲಾ. ನಮ್ಮ ಪಕ್ಷದ ಹಿರಿಯ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಮೇಲೆ, ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ಅವರ ಮೇಲೆ ಹಗರಣ ಮಾಡಿದ್ದೀರಿ ಎಂದು ಆರೋಪಿಸುತ್ತಾರೆ.



ಕೋವಿಡ್ ಸಮಯದಲ್ಲಿ ಕೋಟ್ಯಾಂತರ ರೂಗಳ ಹಗರಣವಾಗಿದೆ ಎಂದು ದೂರುತ್ತಾರೆ. ಮಾಜಿ ಸಚಿವರಾದ ಶ್ರೀ ಮುರಗೇಶ್ ನಿರಾಣಿ ಮೇಲೆ, ವಿರೋಧ ಪಕ್ಷದ ನಾಯಕರಾದ ಶ್ರೀ ಆರ್.ಅಶೋಕ್‌ರವರ ಮೇಲೆ ಭೂ ಕಬಳಿಕೆ ಆರೋಪ ಮಾಡುತ್ತಾರೆ. ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರನ್ನು ಜಂತಕಲ್ಲು ಪ್ರಕರಣ ಮರೆತುಬಿಟ್ಟೀರಾ ಎಂದು ಕೇಳುತ್ತಾರೆ. ನಾನು ದ್ವೇಷದ ರಾಜಕಾರಣ ಮಾಡಿಲ್ಲಾ ಎಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಭಾಷಣ ಮಾಡುತ್ತಾರೆ. ಬಿಜೆಪಿಯವರು ರಾಜಭವನವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ಹೇಳಿಕೆ ಕೊಡುತ್ತಾರೆ. ಆದರೆ ರಾಜ್ಯದಲ್ಲಿ ಪ್ರಸ್ತುತ ಆಡಳಿತದಲ್ಲಿರುವುದು ತಮ್ಮದೆ ಪಕ್ಷ ಎಂದು ಕಾಂಗ್ರೆಸ್ ನಾಯಕರುಗಳು ಮರೆತಿದ್ದಾರೆ. ಈಗ ಆಡಳಿತದಲ್ಲಿರುವುದು ಕಾಂಗ್ರೆಸ್. ಅವರೇ ಮಾಡಿರುವ ಆರೋಪಗಳ ಬಗ್ಗೆ ತನಿಖೆ ಮಾಡಿಸಬಹುದಾದ ಸಂಪೂರ್ಣ ಅಧಿಕಾರವೂ ಇದೆ. ಆದರೆ ಯಾವುದನ್ನೂ ತನಿಖೆ ಮಾಡಿಸದೆ, ಸಾಬೀತು ಮಾಡದೆ ಸುಮ್ಮನೆ ವೃಥಾ ಆರೋಪ ಮಾಡುತ್ತಿರುವ ಕಾಂಗ್ರೆಸ್ ತನ್ನ ಹಳೇ ಚಾಳಿಯನ್ನು ಮುಂದುವರೆಸಿದೆ. ಕಾಂಗ್ರೆಸ್‌ನ ಹಗರಣಗಳನ್ನು ಬಿಜೆಪಿ ದಾಖಲೆ ಸಮೇತ ಆರೋಪ ಮಾಡುತ್ತಿದ್ದರೆ, ಬಿಜೆಪಿ ಮೇಲೂ ಹಗರಣಗಳ ಸುಳ್ಳು ಆರೋಪಗಳನ್ನು ಮಾಡಿ ಬೆದರಿಸುವ ತಂತ್ರ ಮಾಡುತ್ತಿದ್ದಾರೆ.

ಹಗರಣಗಳಲ್ಲಿ ಮುಳುಗಿರುವ ಕಾಂಗ್ರೆಸ್‌ಗೆ ಬಿಜೆಪಿಯ ಹೋರಾಟ ಮತ್ತು ಮೈಸೂರು ಚಲೋ ಪಾದಯಾತ್ರೆ ಬಿಸಿಮುಟ್ಟಿದೆ. ನಿಜವಾಗಿಯೂ ಹಗರಣದಲ್ಲಿ ಭಾಗಿಯಾಗಿರುವ ಕಾಂಗ್ರೆಸ್‌ಗೆ ಹತಾಶ ಭಾವ ಕಾಡುತ್ತಿದೆ. ಅದಕ್ಕೆ ಬಿಜೆಪಿ ಮೇಲೆ ಸತ್ಯವಲ್ಲದ ಆರೋಪವನ್ನು ಮಾಡುತ್ತಾ ಬೆದರಿಸುವ ಕುತಂತ್ರ, ಕಾಂಗ್ರೆಸಿನದು. ಕಾಂಗ್ರೆಸ್ ನಾಯಕರ ಪ್ರತೀ ಮಾತಿನಲ್ಲಿ ಅಧಿಕಾರ ಕಳೆದುಕೊಳ್ಳುವ ಭಯ, ಹತಾಶ ಮನಸ್ಥಿತಿ ಕಾಣುತ್ತಿರುವುದರ ದ್ಯೋತಕವಿದು.

# ಬಿಜೆಪಿ ಸದಸ್ಯತಾ ಅಭಿಯಾನ - 2024

## ರಾಜ್ಯ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಕಾರ್ಯಾಗಾರ



**ಸಶಕ್ತ, ಸಂಘಟಿತ ಭಾರತಕ್ಕಾಗಿ ಬಿಜೆಪಿ ಸದಸ್ಯತ್ವ ಅಭಿಯಾನವು ದೇಶದಾದ್ಯಂತ ಜಾರಿಯಲ್ಲಿದೆ. ಭಾರತೀಯ ಜನತಾ ಪಾರ್ಟಿಯ ಸದಸ್ಯತ್ವ ಪಡೆಯಲು 88 00 00 2024 ಸಂಖ್ಯೆಗೆ ಮಿಸ್ಡ್ ಕಾಲ್ ನೀಡಿ ಹಾಗೂ ಸಶಕ್ತ ಭಾರತ ನಿರ್ಮಾಣಕ್ಕೆ ಭಾಜಪದೊಂದಿಗೆ ಕೈಜೋಡಿಸಿ, ಸದಸ್ಯತ್ವ ಪಡೆಯುವುದರ ಮೂಲಕ ಸುರಕ್ಷಿತ ಬಲಿಷ್ಠ ಮತ್ತು ವಿಕಸಿತ ಭವ್ಯ ಭಾರತದ ನಿರ್ಮಾಣಕ್ಕೆ ಬಿಜೆಪಿಯೇ ಭರವಸೆ ಎಂಬುದು ಈ ಅಭಿಯಾನದ ಸಂದೇಶ. .**


(ವರದಿ)



**ರಜನಿ ಪೈ**
ರಾಜ್ಯ ಕಾರ್ಯಾಲಯ ಕಾರ್ಯದರ್ಶಿ,
ಮಹಿಳಾ ಮೋರ್ಚಾ


ಬಿಜೆಪಿ ರಾಜ್ಯ ಮಹಿಳಾ ಮೋರ್ಚಾ ವತಿಯಿಂದ ಸದಸ್ಯತಾ ಅಭಿಯಾನದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರಕ್ಕೆ ರಾಜ್ಯ ಪದಾಧಿಕಾರಿಗಳು, ಕಾರ್ಯಕಾರಿಣಿ ಸದಸ್ಯರು, ಜಿಲ್ಲಾ ಮಹಿಳಾ ಮೋರ್ಚಾದ ಅಧ್ಯಕ್ಷರು,ಪ್ರಧಾನ ಕಾರ್ಯದರ್ಶಿಗಳು, ಸಂಚಾಲಕರು, ಸಹ ಸಂಚಾಲಕರು ಅಪೇಕ್ಷಿತರಿದ್ದರು. ಕಾರ್ಯಾಗಾರವನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿದರು.

ಮಹಿಳಾ ಮೋರ್ಚಾ ರಾಜ್ಯಾಧ್ಯಕ್ಷರಾದ ಕು. ಸಿ. ಮಂಜುಳಾ ರವರ ಅಧ್ಯಕ್ಷತೆಯಲ್ಲಿ ಹಾಗೂ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು ಮತ್ತು ಸದಸ್ಯತಾ ಅಭಿಯಾನ ಕಾರ್ಯಾಗಾರದ ರಾಜ್ಯ ಉಸ್ತುವಾರಿಗಳಾದ ಶ್ರೀಮತಿ ಸೋನಲ್ ಬೆನ್ ಪಟೇಲ್ ರವರ ಉಪಸ್ಥಿತಿಯಲ್ಲಿನಡೆಯಿತು.

ಕಾರ್ಯಾಗಾರವನ್ನು ಬಿಜೆಪಿ ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ಉದ್ಘಾಟಿಸಿ ಮಾತನಾಡಿದ ಮಹಿಳಾ ದೌರ್ಜನ್ಯದ ಸಂದರ್ಭದಲ್ಲೂ ರಾಜ್ಯದ ಕಾಂಗ್ರೆಸ್ ಸರಕಾರ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ಆಕ್ಷೇಪಿಸಿದರು. ರಾಜ್ಯದ ಜನರು ಈ ಸರಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಇದು ಜನವಿರೋಧಿ ಸರ್ಕಾರ ಎಂದು ಟೀಕಿಸಿದರು. ವಿಪಕ್ಷವಾಗಿದ್ದಾಗ ಹೋರಾಟಗಳು ಅನಿವಾರ್ಯ ಎಂದ ಅವರು, ಚುನಾವಣೆ ಬಂದಾಗ ಮಾತ್ರ ಹೋರಾಟ ಮಾಡಿದರೆ ಅದು ಜನತೆಗೆ ಮಾಡಿದ ಅವಮಾನ ಮತ್ತು ಅನ್ಯಾಯ. ರಾಜ್ಯದ ಚುಕ್ಕಾಣಿ ಹಿಡಿದ ಸರಕಾರ ಜನವಿರೋಧಿ ನೀತಿಗಳನ್ನು



ಅನುಸರಿಸುತ್ತದೋ ಆಗ, ರಾಜ್ಯದ ಜನರ ಪರವಾಗಿ ಹೋರಾಡುವುದು ನಮ್ಮ ಕರ್ತವ್ಯ ಎಂದು ನುಡಿದರು.ಈ ದುಷ್ಟ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಮಹಿಳೆಯರ ಮೇಲೆ ನಿರಂತರವಾಗಿ ದೌರ್ಜನ್ಯ ಹೆಚ್ಚಾಗಿದೆ. ರಾಜ್ಯದಲ್ಲಿ ವಾಲ್ಮೀಕಿ ನಿಗಮದ ಹಗರಣ, ಮೂಡ ಹಗರಣದ ವಿರುದ್ಧ ಹೋರಾಟಗಳು ನಡೆದಿವೆ. ಮಹಿಳಾ ದೌರ್ಜನ್ಯ ನಿರಂತರವಾಗಿ ನಡೆಯುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯದ ಸಂದರ್ಭದಲ್ಲಿ ಮುಖ್ಯಮಂತ್ರಿ, ಗೃಹ ಸಚಿವ, ಸಚಿವರ ನಡವಳಿಕೆ ಪ್ರಮುಖವಾಗುತ್ತದೆ ಎಂದು ವಿಶ್ಲೇಷಿಸಿದರು. ಈ ಸರಕಾರ ಬಂದ ಬಳಿಕ ಅಭಿವೃದ್ಧಿ ಆರಂಭವೇ ಆಗಿಲ್ಲ. ಅಭಿವೃದ್ಧಿ ಕಾರ್ಯಗಳಿಗೆ ಇವರು ಚಾಲನೆಯನ್ನೇ ಕೊಟ್ಟಿಲ್ಲ ಎಂದು ಟೀಕಿಸಿದರು. ಮಹಿಳೆಯರಿಗೆ ಗೃಹಲಕ್ಷ್ಮಿ ಎಂದರು, ಲೋಕಸಭಾ ಚುನಾವಣೆ ಬಂದಿತ್ತು. ಮತದಾನಕ್ಕೆ 3-4 ದಿನಗಳ ಮೊದಲು 3 ಕಂತು ಬಿಡುಗಡೆ ಮಾಡಿದ್ದರು ಎಂದು ವಿವರಿಸಿದರು. ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಚುನಾವಣೆ ಬಂದಾಗ ಮತ್ತೆ ಕಂತು ಬಿಡುಗಡೆ ಆಗಲಿದೆ ಎಂದು ತಿಳಿಸಿದರು. ಲೋಕಸಭಾ ಚುನಾವಣೆಯಲ್ಲಿ ಹೆಚ್ಚು ಸ್ಥಾನ ಬರದಿದ್ದರೆ ಗ್ಯಾರಂಟಿ ಸ್ಥಗಿತ ಎಂದು ಬೆದರಿಸಿದ್ದರು.

ಉಚಿತ ಬಸ್ ಪ್ರಯಾಣದಿಂದ ಶಾಲಾ ಮಕ್ಕಳು, ಕಾಲೇಜು ವಿದ್ಯಾರ್ಥಿಗಳು ಪರದಾಡುವಂತಾಗಿದೆ. ಉಚಿತ ಬಸ್ ಪ್ರಯಾಣದ ಹೆಸರಿನಲ್ಲಿ ಮಹಿಳೆಯರ ಮೂಗಿಗೆ ತುಪ್ಪ ಹಚ್ಚಿದ್ದಾರೆ ಎಂದು ಟೀಕಿಸಿದರು.ಸದಸ್ಯತ್ವ ಅಭಿಯಾನದ ಮೂಲಕ ಮಹಿಳಾ ಮೋರ್ಚಾವನ್ನು ಸದೃಢಪಡಿಸಿ ಎಂದು ಹೇಳಿದ ಅವರು, ಮಾನ್ಯ ನರೇಂದ್ರ ಮೋದಿಜೀ ಅವರ ನೇತೃತ್ವದಲ್ಲಿ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬರಲು ಹಿರಿಯರ ತಪಸ್ಸು, ಕಾರ್ಯಕರ್ತರ ಶ್ರಮ, ಅವಿರತ ಹೋರಾಟ ಕಾರಣ ಎಂದು ವಿಶ್ಲೇಷಿಸಿದರು.

ಈಚೆಗೆ ನಡೆದ ಬೆಂಗಳೂರು- ಮೈಸೂರು ಪಾದಯಾತ್ರೆ ನನಗೆ ರಾಜ್ಯಾಧ್ಯಕ್ಷನಾಗಿ ಮೊದಲ ಆಂದೋಲನ. ಮಹಿಳೆಯರು ಸೇರಿದ್ದು, ಪಾದಯಾತ್ರೆಗೆ ಹೊಸ ಹುಮ್ಮಸ್ಸನ್ನು ಮಹಿಳಾ ಮೋರ್ಚಾವೂ ನೀಡಿತ್ತು ಎಂದು ಕೃತಜ್ಞತೆ ಸಲ್ಲಿಸಿದರು.ದುಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ಪಾದಯಾತ್ರೆ ಎಂದು ಪ್ರಕಟಿಸಿದಾಗ ನಮಗೂ ಆತಂಕ ಇತ್ತು. ತಯಾರಿ ಆಗಿರಲಿಲ್ಲ, 5 ದಿನಗಳಷ್ಟೇ ಬಾಕಿ ಇದ್ದವು. ಪಾದಯಾತ್ರೆ ಆಗಬೇಕೇ ಬೇಡವೇ ಎಂಬ ಗೊಂದಲವೂ ಇತ್ತು. ಕೇಂದ್ರದ ವರಿಷ್ಠರಲ್ಲೂ ಆತಂಕವಿತ್ತು. ಪಾದಯಾತ್ರೆಯು ರಾಜ್ಯದ ಚರಿತ್ರೆಯಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡತಕ್ಕಂಥ ಆಂದೋಲನ ಆಗಲಿದೆ ಎಂದು ವರಿಷ್ಠರಿಗೆ ನಾನು ತಿಳಿಸಿದ್ದೆ ಎಂದು ವಿವರಿಸಿದರು. ಒಟ್ಟಾರೆಯಾಗಿ ಲಕ್ಷ ಲಕ್ಷ ಸಂಖ್ಯೆಯಲ್ಲಿ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಆಡಳಿತ ಪಕ್ಷದವರು ಆತಂಕ ಪಟ್ಟುಕೊಂಡು ನಮ್ಮ ಪಾದಯಾತ್ರೆ ಶುರು ಆಗುವುದಕ್ಕೂ ಮೊದಲೇ ಜನಾಂದೋಲನ ಮಾಡಿದ್ದರು ಎಂದು ರಾಜ್ಯಾಧ್ಯಕ್ಷರಾದ ಶ್ರೀ ಬಿ.ವೈ. ವಿಜಯೇಂದ್ರ ರವರು ತಿಳಿಸಿದರು. ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ತಮ್ಮ ರಾಜಕೀಯ ಜೀವನದಲ್ಲಿ ಇಷ್ಟು ಆತಂಕಕ್ಕೆ ಗುರಿ ಮಾಡಿದ ಸಂದರ್ಭ ಯಾವತ್ತೂ ಇರಲಿಲ್ಲ. ಪಾದಯಾತ್ರೆ ವೇಳೆ ಊಟೋಪಚಾರ, ವಸತಿ, ವೈದ್ಯಕೀಯ ಸೇರಿ ಎಲ್ಲ ವ್ಯವಸ್ಥೆಗಳು ವ್ಯವಸ್ಥಿತವಾಗಿ ನಡೆದಿವೆ ಎಂದು ಹೇಳಿದರು. ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷರಾದ ಕು. ಕೆ. ಮಂಜುಳ ಅವರು ಮಾತನಾಡಿ, ಮಹಿಳೆಯರ ಮೇಲೆ ದೌರ್ಜನ್ಯ ನಡೆದಾಗ ನಿರ್ದಾಕ್ಷಿಣ್ಯ ಕ್ರಮ ಅಗತ್ಯ. ಆಗ ದುಷ್ಟರು, ದುರುಳರು, ಕ್ರಿಮಿಗಳು ಮನೆ ಸೇರಿಕೊಳ್ಳುತ್ತಾರೆ ಎಂದು ತಿಳಿಸಿದರು. ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರಾದ ಶ್ರೀಮತಿ ಸೋನಲ್ ಬೆನ್ ಪಟೇಲ್ ರವರು ಸದಸ್ಯತಾ ಅಭಿಯಾನದ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.



ಸದಸ್ಯತಾ ಅಭಿಯಾನದ ಕಾರ್ಯಾಗಾರದಲ್ಲಿ ಸೇರಿದ್ದ ಮಹಿಳೆಯರು ರಾಜ್ಯಾಧ್ಯಕ್ಷರಾದ ಶ್ರೀ ಬಿ. ವೈ. ವಿಜಯೇಂದ್ರರವರಿಗೆ ರಾಖಿ ಕಟ್ಟುವುದರ ಮೂಲಕ ಸಂಭ್ರಮಿಸಿದ್ದು ವಿಶೇಷವಾಗಿತ್ತು. ವಿಧಾನಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಮತಿ ಶಿಲ್ಪಾ ಸುವರ್ಣ, ಡಾ. ಶೋಭಾ ನಿಸ್ಸೀಮಗೌಡ, ಮಾಹಿತಿ ತಂತ್ರಜ್ಞಾನ ವಿಭಾಗದ ಶ್ರೀಮತಿ ಶ್ಯಾಮಲಾ ರಘುನಂದನ್ ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಸ್ಮರಣೆ - ಪ್ರೇರಣೆ

# ಕುಗ್ಗದ ಸಾಮಾಜಿಕ ಕಳಕಳಿ

## ಶ್ರೀನಿವಾಸ ಐಯ್ಯಂಗಾರ್

**ಬೆಂ**ಗಳೂರು ನಗರದ ಶ್ರೀ ಶ್ರೀನಿವಾಸ ಐಯ್ಯಂಗಾರ್ ಪರಿವಾರದ ಹಿರಿಯ ಕಾರ್ಯಕರ್ತರು. ಪರಿವಾರದ ವಿವಿಧ ಸಂಘಟನೆಗಳಲ್ಲಿ ಅನ್ಯಾನ್ಯ ಜವಾಬ್ದಾರಿಗಳನ್ನು ನಿರ್ವಹಿಸಿ ಪ್ರಸ್ತುತ ಸಾರ್ಥಕವಾದ ನಿವೃತ್ತ ಜೀವನವನ್ನು ನಡೆಸುತ್ತಿದ್ದಾರೆ. 92 ರ ಈ ವಯಸ್ಸಿನಲ್ಲೂ ಅವರಲ್ಲಿನ ಸಾಮಾಜಿಕ ಕಳಕಳಿ ಕಿಂಚಿತ್ತೂ ಕಡಿಮೆಯಾಗಿಲ್ಲ ಎಂಬುದಕ್ಕೆ ಅವರು ಬರೆದಿರುವ ಈ ಪತ್ರವೇ ಸಾಕ್ಷಿ. ಬಾಂಗ್ಲಾ ದೇಶದಲ್ಲಿ ನಡೆಯುತ್ತಿರುವ ಹಿಂದೂಗಳ ಮೇಲಿನ ದೌರ್ಜನ್ಯವನ್ನು ಖಂಡಿಸುವುದರ ಜೊತೆಗೆ, ಈ ಆಕ್ರಮಣವನ್ನು ಸಂಘಟಿತರಾಗಿ ಎದುರಿಸದಿದ್ದರೆ ಮುಂದೊಂದು ದಿನ ಇದೇ ತೆರನಾದ ಕರಾಳ ಪರಿಸ್ಥಿತಿಯನ್ನು ನಮ್ಮ ದೇಶದಲ್ಲೂ ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯ ಕಳಕಳಿಯನ್ನು ವ್ಯಕ್ತಪಡಿಸಿ, ಸಂಘಟಿತ ಹೋರಾಟದ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಈ ಹಿರಿಯರು ತಮ್ಮ ಈ ವಯಸ್ಸಿನಲ್ಲೂ ವ್ಯಕ್ತಪಡಿಸುತ್ತಿರುವ ಸಾಮಾಜಿಕ ಕಳಕಳಿಗೆ ಅವರಿಗೊಂದು ನಮನ ಸಲ್ಲಿಸೋಣ, ಅವರ ಎಚ್ಚರಿಕೆಯ ಸಂದೇಶವನ್ನು ಗಂಭೀರವಾಗಿ ಪರಿಗಣಿಸೋಣ, ಅವರ ಭಾವನೆಗಳಲ್ಲಿ ನಾವೂ ಜೊತೆಯಾಗೋಣ.

**130 ಕೋಟಿ ಭಾರತೀಯರಿಗೆ ಒಂದು.. ಎಚ್ಚರಿಕೆಯ ಘಂಟೆ।**

ಭಾರತದಲ್ಲೇ ಹುಟ್ಟಿ ಈ ಮಣ್ಣಿನಲ್ಲಿ ಬೆಳೆದು, ಇಲ್ಲಿನ ಅನ್ನ ನೀರಿನಿಂದ ಬದುಕಿರುವ ಮಠಾಧಿಪತಿಗಳೇ, ಸಾಧು, ಸಂತರೇ, ರಾಜಕಾರಣಿಗಳೇ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನೌಕರರೇ, ಯುವಕ-ಯುವತಿಯರೇ, ರೈತ ಬಾಂಧವರೇ, ಎಲ್ಲಾ ಸಂಘ ಸಂಸ್ಥೆಗಳ ಸದಸ್ಯರೇ, ಎಲ್ಲಾ ಮಾಧ್ಯಮದವರೇ, ಮಾತಾ ಪಿತೃಗಳಿಗೆ ಸಮಾನರಾದ ಹಿರಿಯರೇ ಸರ್ವರಿಗೂ ನಮಸ್ಕಾರಗಳು.

ನಮಗೆಲ್ಲರಿಗೂ ದೇವರು ಹೃದಯ, ಕಣ್ಣು, ಕಿವಿ ದಯಪಾಲಿಸಿದ್ದಾನಲ್ಲದೇ ಬಾಂಗ್ಲಾದೇಶ ಮತ್ತು ಪಾಕಿಸ್ತಾನಗಳಲ್ಲಿ ಹಿಂದೂ ಮಹಿಳೆಯರ ಮೇಲೆ ಬರ್ಭರ ಅತ್ಯಾಚಾರ, ಅಪಹರಣ, ಮತಾಂತರ, ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಹೋಗುತ್ತಿದೆ. ಇದು ನಮ್ಮ ಅಂತರಾಳಕ್ಕೆ ಇನ್ನೂ ತಟ್ಟಿಲ್ಲವೇಕೆ?, ಮೇಲೆ ಬರೆದಿರುವ ಎಲ್ಲಾ ವರ್ಗದ ಜನರಿಗೆ ತಾಯಂದಿರು, ಅಕ್ಕ-ತಂಗಿಯರು, ಇದ್ದಾರಲ್ಲವೇ?, ನಾವು ಹೀಗೆ ಸ್ಥಿತಪ್ರಜ್ಞರಾಗಿ ಕುಳಿತರೆ, ಭಯೋತ್ಪಾದಕರು ಇಂದಲ್ಲ ನಾಳೆ ನಮ್ಮ ಮೇಲೂ ದಾಳಿ ಮಾಡುವ ಸಮಯ ಬರಬಹುದಲ್ಲವೇ?.

ಏಳಿ, ಎದ್ದೇಳಿ, ಎಚ್ಚರಗೊಳ್ಳಿ 130 ಕೋಟಿ ಜನತೆ ಒಂದಾಗಿ ಒಕ್ಕೊರಲಿನಿಂದ ಘರ್ಜಿಸಿ ಆ ಎರಡು ದೇಶಗಳಲ್ಲಿನ ಸರ್ಕಾರ ಮತ್ತು ಭಯೋತ್ಪಾದಕರಿಗೆ ಎಚ್ಚರಿಕೆ ಕೊಟ್ಟು ಈ ಕೂಡಲೇ ಅಲ್ಲಿನ ಹಿಂದೂಗಳ ಮೇಲೆ ನಡೆಯುತ್ತಿರುವ ಅತ್ಯಾಚಾರವನ್ನು ನಿಲ್ಲಿಸಿ, ಶಾಂತಿ ಸ್ಥಾಪಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಆಗಹಪೂರ್ವಕವಾಗಿ ಒತ್ತಾಯಿಸಬೇಕೆಂಬುದು ನನ್ನ ಕಳಕಳಿಯ ಪ್ರಾರ್ಥನೆ.

ಸಹಸ್ರ ವರ್ಷಗಳ ಕಾಲ ಭಾರತದಲ್ಲಿ ಹಿಂದೂಗಳಾದ ನಾವು ಪರಕೀಯರ ದಬ್ಬಾಳಿಕೆಗೆ ಸಿಕ್ಕಿ, ನರಮೇಧ ಅನುಭವಿಸಿದ್ದು ಸಾಕು. ಈಗ ಸಂಘಟಿತರಾಗಿ ನಮ್ಮ ಪೀಳಿಗೆಯ ಹಿತದೃಷ್ಟಿಯಿಂದ ಅನ್ಯಾಯದ ವಿರುದ್ಧ ಹೋರಾಡಬೇಕಾದ ಅನಿವಾರ್ಯತೆ ಈಗ ಕೂಡಿ ಬಂದಿದೆ. ಜಗತ್ತಿನಾದ್ಯಂತ ಇರುವ ಎಲ್ಲಾ ಹಿಂದೂಗಳು ಆಯಾ ಸರ್ಕಾರಗಳ ಮೂಲಕ ಪಾಕಿಸ್ತಾನ ಮತ್ತು ಬಾಂಗ್ಲಾದೇಶದಲ್ಲಿ ಹಿಂದೂಗಳಿಗೆ ಅಲ್ಲಿನ ಸರ್ಕಾರಗಳು ರಕ್ಷಣೆ ಕೊಡಬೇಕೆಂದು ಆಗ್ರಹ ಮಾಡಬೇಕೆಂದು ಒತ್ತಾಯಿಸೋಣ.

ವಂದನೆಗಳೊಡನೆ.


**- ಶ್ರೀನಿವಾಸ ಐಯ್ಯಂಗಾರ್**
ಬೆಂಗಳೂರು

# ಮುಚ್ಚಿಟ್ಟ ಕರ್ನಾಟಕ ಚರಿತ್ರೆ



ಪ್ರವೀಣ್ ಕುಮಾರ್ ಮಾವಿನಕಾಡು
ಲೇಖಕರು

ದೇಶದ ಮತ್ತು ನಾಡಿನ ನಿಜ ಇತಿಹಾಸವನ್ನು ಮುಚ್ಚಿಡುವ ಮತ್ತು ಸುಳ್ಳು ಇತಿಹಾಸವನ್ನು ವಿಜೃಂಭಿಸುವ ಬರಹಗಳೇ ತುಂಬಿದ್ದ ಸಾಹಿತ್ಯ ಲೋಕದೊಳಗೆ ಇಳಿದು ಮುಚ್ಚಿಟ್ಟ ಇತಿಹಾಸವನ್ನು ಕೆದಕಿ ತೋರಿಸುವ ಪ್ರಯತ್ನಕ್ಕೆ ಹಲವಾರು ಯುವ ಬರಹಗಾರರು ಕೈ ಹಾಕುತ್ತಿರುವುದು ಕಳೆದೊಂದು ದಶಕದಿಂದ ಹೆಚ್ಚಾಗಿರುವುದು ಮತ್ತು ಅದಕ್ಕೆ ಅಪಾರ ಜನಸ್ಪಂದನೆ ವ್ಯಕ್ತವಾಗುತ್ತಿರುವುದು ಎಲ್ಲರಿಗೂ ತಿಳಿದೇ ಇದೆ. ಇದೇ ನಿಟ್ಟಿನಲ್ಲಿ ರಾಜ್ಯದಾದ್ಯಂತ ಹೊಸದೊಂದು ಆಯಾಮದ ಚರ್ಚೆಯನ್ನೇ ಹುಟ್ಟುಹಾಕಿದ್ದ 'ಮುಚ್ಚಿಟ್ಟ ದಲಿತ ಚರಿತ್ರೆ' ಪುಸ್ತಕದ ಲೇಖಕ ರಾಕೇಶ್ ಶೆಟ್ಟಿ ಅವರ ಮತ್ತೊಂದು ಪುಸ್ತಕ 'ಮುಚ್ಚಿಟ್ಟ ಕರ್ನಾಟಕ ಚರಿತ್ರೆ' ಇದೀಗ ಬಿಡುಗಡೆಯಾಗಿದೆ. ಕನ್ನಡದ ಅಸ್ಮಿತೆಯ ಪುನರುತ್ಥಾನ ಇತಿಹಾಸ ಎನ್ನುವ ಅಡಿಬರಹದೊಂದಿಗೆ ಪ್ರಕಟವಾಗಿರುವ ಈ ಪುಸ್ತಕದಲ್ಲೂ ತಮ್ಮ ಮೊದಲ ಪುಸ್ತಕದಂತೆಯೇ ಸಾಕಷ್ಟು ಮುಚ್ಚಿಟ್ಟ ಇತಿಹಾಸಗಳತ್ತ ಆಧಾರ ಸಹಿತವಾದ ಬೆಳಕು ಚೆಲ್ಲಿದ್ದಾರೆ.




ನಿಲುಮೆ ಪ್ರಕಾಶನದಿಂದ ಪ್ರಕಟಣೆಗೊಂಡಿರುವ ಈ ಪುಸ್ತಕದ ಹಿಂದೆ ಹತ್ತು ವರ್ಷಗಳ ಸುಧೀರ್ಘ ಅಧ್ಯಯನವಿದೆ. ಒಟ್ಟು 13 ಅಧ್ಯಾಯಗಳನ್ನು ಒಳಗೊಂಡಿರುವ ಈ ಕೃತಿಯ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲೂ ಅದರಲ್ಲಿ ನೀಡಲಾಗಿರುವ ಐತಿಹಾಸಿಕ ಮಾಹಿತಿಗಳಿಗೆ ಸಂಬಂಧಿಸಿದ ಆಧಾರಗಳನ್ನು ಎಲ್ಲಿಂದ ಹೆಕ್ಕಿ ತೆಗೆದಿದ್ದೇನೆ ಎನ್ನುವುದಕ್ಕೆ ಲೇಖಕರು ಆಧಾರಗಳನ್ನು ಒದಗಿಸಿದ್ದಾರೆ. ತಾವೇ ಖುದ್ದು ಸಂಬಂಧಿತ ಸ್ಥಳಗಳಿಗೆ ಭೇಟಿಯಿತ್ತು ಸಚಿತ್ರ ಮಾಹಿತಿಗಳನ್ನೂ ಒದಗಿಸಿದ್ದಾರೆ.

ಪ್ರಸ್ತುತ ನಮಗೆ ದೊರೆಯುವ ಇತಿಹಾಸ ಪುಸ್ತಕಗಳಲ್ಲಿ ಅಥವಾ ಮಕ್ಕಳಿಗೆ ಕಲಿಸಲಾಗುತ್ತಿರುವ ಪಠ್ಯ ಪುಸ್ತಕಗಳಲ್ಲಿ ಎಲ್ಲಿಯೂ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿಯವರ ಕುರಿತ ವಿವರವಾದ ಮಾಹಿತಿಗಳೇ ಇಲ್ಲ! ಅವರ ಶಕ್ತಿ, ಸಾಮರ್ಥ್ಯ, ಹೋರಾಟಗಳನ್ನು ಪೂರ್ತಿಯಾಗಿ ಕಡೆಗಣಿಸಲಾಗಿದೆ. ವಾಸ್ತವವಾಗಿ ಮೈಸೂರು ಧರ್ಮರಾಜ್ಯದ ಪುನರುತ್ಥಾನದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಎಲ್ಲ ಕಷ್ಟ ನಷ್ಟಗಳನ್ನೂ ಅನುಭವಿಸಿಯೂ ಒಂದಿನಿತೂ ಧೈರ್ಯಗುಂದದೆ ಸುಧೀರ್ಘವಾದ ಹೋರಾಟ ನಡೆಸಿ ಕನ್ನಡ ನಾಡನ್ನು ಮರಳಿ ಪಡೆದು ಮುನ್ನಡೆಸಿದ ಮತ್ತು ಸುಭಿಕ್ಷಗೊಳಿಸಿದ ಕೀರ್ತಿ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿಯವರಿಗೆ ಸಲ್ಲಬೇಕು. ಆದರೆ ಇಡೀ ನಾಡಿನ ಇತಿಹಾಸದಲ್ಲಿ ಅಜರಾಮರರಾಗಿ ಇರಬೇಕಾಗಿದ್ದ ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಅವರ ವಿವರಗಳನ್ನು ಯಾರಿಗೂ ತಲುಪದಂತೆ ಮುಚ್ಚಿಡಲು ಕಾರಣವೇನು? ಈ ಪ್ರಶ್ನೆಗೆ ನಿಖರವಾದ ಉತ್ತರ 'ಮುಚ್ಚಿಟ್ಟ ಕರ್ನಾಟಕ ಚರಿತ್ರೆ' ನಮಗೆ ನೀಡುತ್ತದೆ.

ಒಡೆಯ ರಾಜ್ಯದ ಸ್ಥಾಪನೆ ಹೇಗಾಯಿತು ಎನ್ನುವ ವಿವರವಾದ ಅಧ್ಯಾಯದಿಂದ ಪ್ರಾರಂಭಗೊಳ್ಳುವ ಪುಸ್ತಕದಲ್ಲಿ ಒಡೆಯರ್ ವಂಶದ ಪ್ರಮುಖರ ಪರಿಚಯ, ಯದುವಂಶ ಹಳಿ ತಪ್ಪಿದ ಬಗೆ, ಹಂತ ಹಂತವಾಗಿ ಹೈದರ್‌ಅಲಿಯ ಕೈಗೆ ಸಿಕ್ಕಿದ ಆಡಳಿತ ಮುಂತಾದ ವಿಷಯಗಳನ್ನು ಆಸಕ್ತಿಕರವಾಗಿ ಮತ್ತು ದಾಖಲೆಸಹಿತವಾಗಿ ಇಲ್ಲಿ ವಿವರಿಸಲಾಗಿದೆ.

ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿಯವರನ್ನು ಕೇಂದ್ರವಾಗಿ ಇಟ್ಟುಕೊಂಡು ಹೇಳದ ಈ ನಾಡಿನ ಇತಿಹಾಸವು ಎಂದಿಗೂ ಪೂರ್ಣವಾಗುವುದಿಲ್ಲ ಎನ್ನುವುದು ಲೇಖಕರ ಸ್ಪಷ್ಟ ಅಭಿಪ್ರಾಯವಾಗಿದ್ದು, ತಮ್ಮ ಆ ಅಭಿಪ್ರಾಯಕ್ಕೆ ಪೂರ್ಣ ನ್ಯಾಯವನ್ನು ಅವರು ತಮ್ಮ ಬರಹದಲ್ಲಿ ಒದಗಿಸಿದ್ದಾರೆ.

'ಸೀತಾ ದಂಡು' ಎನ್ನುವ ಗುಪ್ತ ಸೈನಿಕರ ಪಡೆಯ (ಈಗಿನ ಸಂದರ್ಭಕ್ಕೆ ಸೂಕ್ತವಾಗಿ ಹೇಳುವುದಾದರೆ, ಅಪರಿಚಿತರ ಪಡೆ) ಹುಟ್ಟು, ಅದರ ಕಾರ್ಯ ಶೈಲಿ, ಆ ಸೈನಿಕರ ಧರ್ಮನಿಷ್ಠೆ, ನಿಸ್ವಾರ್ಥತೆ, ಸಾಹಸ ಇತ್ಯಾದಿಗಳ ಕುರಿತ ಮಾಹಿತಿಗಳನ್ನು ಪುಸ್ತಕದ ಪ್ರಮುಖ ಭಾಗವಾಗಿ ಗುರುತಿಸಬಹುದು. ದೂರದಿಂದ ಸಿಖ್ಖರನ್ನು ಕರೆಸಿ ಸೀತಾ ದಂಡಿನ ಗುಪ್ತ ಸೈನಿಕರಿಗೆ ಶಸ್ತ್ರಾಸ್ತ್ರ ತರಬೇತಿ ಕೊಡಿಸಿ, ನಾಡಿಗೆ

ಆಕ್ರಮಣಕಾರರಿಂದ ಮುಕ್ತಿ ಕೊಡಿಸಿದ ಈ ಸೀತಾ ದಂಡಿನ ಹಿಂದಿನ ಶಕ್ತಿಯೆಂದರೆ ಅದು 'ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ'. ಇದುವರೆಗೆ ಬ್ರಿಟಿಷರ ದೊಡ್ಡ ಶತ್ರು ಎಂದು ಬಿಂಬಿಸಲಾಗಿರುವ ಟಿಪ್ಪುವನ್ನು ಕೊಲ್ಲುವ ಯಾವ ಇರಾದೆಯೂ ಬ್ರಿಟಿಷರಿಗೆ ಇರಲೇ ಇಲ್ಲ ಎನ್ನುವ ಸತ್ಯವನ್ನು ಓದಿದಾಗ ಇತಿಹಾಸದ ಎಷ್ಟೊಂದು ನಿಜ ಸಂಗತಿಗಳನ್ನು ಈ ನಾಡಿನ ಜನರಿಂದ ಮುಚ್ಚಿಡಲಾಗಿದೆ ಎನ್ನುವ ವಾಸ್ತವತೆ ತಿಳಿದು ಅಚ್ಚರಿಯಾಗುತ್ತದೆ!

ಎಲ್ಲ ಒಪ್ಪಂದಗಳನ್ನೂ ಮೀರಿ ಅನಿವಾರ್ಯವಾಗಿ ಟಿಪ್ಪು ಸುಲ್ತಾನ್ ವಿರುದ್ಧ ಯುದ್ಧವನ್ನು ಘೋಷಿಸಲೇಬೇಕಾದ ಅನಿವಾರ್ಯತೆ ಬ್ರಿಟಿಷರಿಗೆ ಎದುರಾಯಿತು. ಆದರೆ ಅವರಿಗೆ ಅವನನ್ನು ಸೋಲಿಸಬೇಕೆನ್ನುವ ಉದ್ದೇಶವಷ್ಟೇ ಇತ್ತೇ ಹೊರತೂ, ಕೊಲ್ಲುವ ಉದ್ದೇಶ ಇರಲೇ ಇಲ್ಲ! ಬದಲಾಗಿ ಹೇಗಾದರೂ ಮಾಡಿ ಟಿಪ್ಪುವನ್ನೇ ಉಳಿಸಿಕೊಳ್ಳಬೇಕು ಎನ್ನುವ ಉದ್ದೇಶವೇ ಅವರದ್ದಾಗಿತ್ತು ಎನ್ನುವುದಕ್ಕೆ ಲೇಖಕರು ಹಲವಾರು ಪೂರಕ ದಾಖಲೆಗಳನ್ನು ಒದಗಿಸುತ್ತಾರೆ. ಆದರೆ ಬ್ರಿಟಿಷರ ಎಲ್ಲ ಯೋಜನೆಗಳನ್ನೂ ತಲೆಕೆಳಗಾಗಿಸಿ ಟಿಪ್ಪುವನ್ನು ಹತ್ಯೆ ಮಾಡಿದ ಆ ವ್ಯಕ್ತಿಗಳು ಯಾರು? ಮುಚ್ಚಿಟ್ಟ ಈ ಎಲ್ಲ ವಿಷಯಗಳನ್ನೂ ತಿಳಿಯಬೇಕೆಂದರೆ ಈ ಪುಸ್ತಕವನ್ನೊಮ್ಮೆ ನೀವು ಓದಲೇಬೇಕು.

ಹಾಗೆ ನೋಡಿದರೆ ಈ ಪುಸ್ತಕ ಈಗಾಗಲೇ ಎಡಪಂಥೀಯ ವಲಯಗಳಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಕಾರಣವಾಗಬೇಕಿತ್ತು. ಆದರೆ ಆಗುವುದಿಲ್ಲ. ಏಕೆಂದರೆ ಯಾವ ಪುಸ್ತಕಗಳು ಅಥವಾ ಬರಹಗಳು ಸೂಕ್ತ ಆಧಾರಗಳೊಂದಿಗೆ ಪ್ರಕಟವಾಗುತ್ತವೆಯೋ, ಅವುಗಳ ಬಗ್ಗೆ ಧನಾತ್ಮಕವೇ ಇರಲಿ, ಋಣಾತ್ಮಕವೇ ಇರಲಿ ಬಹಿರಂಗವಾಗಿ ಮಾತಾಡಲೇಬಾರದು ಎನ್ನುವುದು ಅವರು ಮೊದಲಿನಿಂದಲೂ ರೂಢಿಸಿಕೊಂಡು ಬಂದಿರುವ ತಂತ್ರ. ಆದರೆ ಬಲಪಂಥೀಯರೆನಿಸಿಕೊಂಡವರು ಇದುವರೆಗೂ ಅಂತಹ ಯಾವ ನಿಬಂಧನೆಗಳನ್ನೂ ವಿಧಿಸಿಕೊಳ್ಳದೆ ಇರುವುದರಿಂದ ಈ ಪುಸ್ತಕವನ್ನು ಓದಿ, ವ್ಯಾಪಕ ಚರ್ಚೆ ನಡೆಸಲು ಮತ್ತು ನಿಜ ಇತಿಹಾಸದ ಅರಿವನ್ನು ಇಡೀ ನಾಡಿಗೆ ಹಂಚಲು ಯಾವ ಅಡ್ಡಿಯೂ ಇಲ್ಲ ಎಂದು ಭಾವಿಸುತ್ತೇನೆ.

**ಪುಸ್ತಕ ಲೇಖಕರು : ರಾಕೇಶ್ ಶೆಟ್ಟಿ ಮೊ. 8431671309**

# ಮಾಸದ ಮಾಧುರ್ಯ 89ನೇ ಕಾರ್ಯಕ್ರಮದಲ್ಲಿ
# ಹಿಂದುಸ್ಥಾನಿ ಗಾಯನ 'ಗಾನಸುಧೆ'



**ಪ್ರ**ಕೃತಿಯ ಹಾವ ಭಾವಗಳನ್ನು ಪ್ರತಿನಿಧಿಸುವುದೇ ಸಂಗೀತ. ಅದು ಹಿಂದುಸ್ಥಾನಿಯಿರಬಹುದು, ಕರ್ನಾಟಕ ಇರಬಹುದು, ಭಾವಗೀತೆಯಾಗಿರಬಹುದು ಎಲ್ಲದಕ್ಕೂ ಗುರುವಾಗಿ ಸಕಲ ಜೀವರಾಶಿಗಳಿಂದಲೂ ಪೂಜಿಸಲ್ಪಡುತ್ತಾ ಬಂದ ಭೂದೇವಿಗೆ ನಿತ್ಯನಮನ... ನಿತ್ಯನಮನ...

ದಿ. 01.08.2024ರಂದು ಮಲ್ಲೇಶ್ವರ ಜಗನ್ನಾಥ ಭವನದ ಮಂಥನ ಸಭಾಂಗಣದಲ್ಲಿ ಡಾ. ಅರ್ಚನಾ ಕುಲಕರ್ಣಿರವರ ವಿದ್ವತ್‌ಪೂರ್ಣ ಹಿಂದುಸ್ಥಾನಿ 'ಗಾನಸುಧೆ' ಕಾರ್ಯಕ್ರಮ ಎಲ್ಲಾ ಕಲಾಭಿಮಾನಿಗಳ ಮನ ಮುಟ್ಟುವಲ್ಲಿ ಯಶಸ್ವಿಯಾಗಿದ್ದು ಆಗಮಿಸಿದ್ದ ಎಲ್ಲರೂ ಕಾರ್ಯಕ್ರಮದ ಕೊನೆಯವರೆಗೂ ಇದ್ದು ಪ್ರೋತ್ಸಾಹಿಸಿದ್ದು ನಿದರ್ಶನವಾಯಿತು. ಸ್ವಾಮಿ ಅಯ್ಯಪ್ಪರ ಭಕ್ತರೂ, ರಾಜ್ಯ ಯುವ ಮೋರ್ಚಾ ಅಧ್ಯಕ್ಷರೂ ಆದ ದೊಡ್ಡಬಳ್ಳಾಪುರದ ಶಾಸಕರಾದ ಶ್ರೀ ಧೀರಜ್ ಮುನಿರಾಜು ರವರು ಮುಖ್ಯ ಅತಿಥಿಯಾಗಿ ಸಮಯಕ್ಕೆ ಸರಿಯಾಗಿ ಆಗಮಿಸಿ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ನೀವು ಮುಖ್ಯ ಅತಿಥಿಯಾಗಿ ಬರಬೇಕು, ನಿಮ್ಮ ಸಹಕಾರ, ಸಮಯ ಬೇಕು ಎಂದು ದೂರವಾಣಿ ಕರೆ ಮಾಡಿ ಕೇಳಿಕೊಂಡಾಗ ಒಂದು ಕ್ಷಣವೂ ಯೋಜನೆ ಮಾಡದೆ 'ಖಂಡಿತ ಬರುತ್ತೇನೆ, ನನ್ನಿಂದ ಏನಾಗಬೇಕು' ಎಂಬ ಭರವಸೆಯ ಮಾತು ಅತ್ತ ಕಡೆಯಿಂದ ಬಂದರೆ ಮುಖ್ಯವಾಗಿ ಕಲಾವಿದರಿಗೆ, ಕಾರ್ಯಕ್ರಮದ ಸಂಯೋಜಕರಿಗೆ ಬಹಳ ಹೆಮ್ಮೆಯೆನಿಸುತ್ತದೆ. ಈ ಮನಸ್ಸು ಈ ತುಡಿತ ಸದಾ ಅವರಲ್ಲಿರಲಿ, ಅವರ ಭವಿಷ್ಯ ಉಜ್ವಲವಾಗಲಿ ಎಂಬ ಹಾರೈಕೆ ನಮ್ಮದು.

ಕಾರ್ಯಕ್ರಮದ ಸಂಯೋಜಕರಾದ ಶ್ರೀ ದತ್ತಗುರು ಹೆಗಡೆ, ಕಾರ್ಯಾಲಯ ಕಾರ್ಯದರ್ಶಿಗಳಾದ ಶ್ರೀ ಲೋಕೇಶ್ ಅಂಬೆಕಲ್ಲು, ಲೆಕ್ಕ ಪತ್ರ ವಿಭಾಗದ ಮುಖ್ಯಸ್ಥರಾದ ಶ್ರೀ ವಿ. ಮೂಡಲಗಿರಿ ಇವರುಗಳು ಉಪಸ್ಥಿತರಿದ್ದು ಕಲಾವಿದರಾದ ಡಾ. ಅರ್ಚನಾ ಕುಲಕರ್ಣಿ, ಶ್ರೀ ರಾಘವೇಂದ್ರ ಜೋಶಿ (ತಬಲ ವಾದಕರು), ಶ್ರೀ ಕೆ. ಗುಂಡಪ್ಪ (ಹಾರ್ಮೋನಿಯಂ) ಅವರುಗಳಿಗೆ ಅಭಿನಂದನಾ ಪತ್ರ ಕೊಟ್ಟು ಸನ್ಮಾನಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ತಾಂತ್ರಿಕ ವ್ಯವಸ್ಥಾಪಕರಾದ ಶ್ರೀ ದಾಮೋದರ್ ನಾಯ್ಕ್ ರವರು ಎಲ್ಲರನ್ನೂ ವಂದಿಸಿದರು.

ಮನ್ ಕಿ ಬಾತ್



# ಅಪಾರ ಸಂಖ್ಯೆಯ ಯುವಜನ ರಾಜಕೀಯ ಅರಂಗೇಟ್ರಂಗೆ ಸಿದ್ಧ

**ಹೊಸಬರು ರಾಜಕೀಯ ಪ್ರವೇಶಿಸಿದರೆ ಪ್ರಜಾಪ್ರಭುತ್ವ ಬಲ ಹೆಚ್ಚಲಿದೆ**

**- ನರೇಂದ್ರ ಮೋದಿ, ಪ್ರಧಾನ ಮಂತ್ರಿಗಳು**

'ಮನ್ ಕಿ ಬಾತ್' 113ನೇ ಸಂಚಿಕೆಯಲ್ಲಿ ರಾಜಕೀಯಕ್ಕೆ ಹೊಸಬರ ಪ್ರವೇಶ, ಪ್ರಜಾಪ್ರಭುತ್ವದ ಬಲಗೊಳ್ಳುವಿಕೆ, ವಿಕಸಿತ ಭಾರತ, ಚಂದ್ರಯಾನ-3 ಸೇರಿದಂತೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಸಾಧನೆ ಮೊದಲಾದ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. 21ನೇ ಶತಮಾನದಲ್ಲಿ ಭಾರತದಲ್ಲಿ ಬಹಳಷ್ಟು ಸಂಗತಿಗಳು ನಡೆಯುತ್ತಿವೆ. ಅವು 'ವಿಕಸಿತ ಭಾರತ'ದ ಅಡಿಪಾಯವನ್ನು ಬಲಪಡಿಸುತ್ತಿವೆ. ಅಭಿವೃದ್ಧಿ ಹೊಂದಿದ ರಾಷ್ಟ್ರ ನಿರ್ಮಾಣದ ಗುರಿಯನ್ನು ಇನ್ನಷ್ಟು ಬಲಪಡಿಸುತ್ತಿದೆ ಎಂದು ಪ್ರಧಾನಿ ಶ್ರೀ ಮೋದಿ ಹೇಳಿದ್ದಾರೆ.

ದೊಡ್ಡ ಸಂಖ್ಯೆಯ ಯುವಜನರು ರಾಜಕೀಯಕ್ಕೆ ಸೇರಲು ಸಿದ್ಧರಿದ್ದಾರೆ. ಅವರಿಗೆ ಸರಿಯಾದ ಅವಕಾಶ ಹಾಗೂ ಮಾರ್ಗದರ್ಶನ ನೀಡಬೇಕಷ್ಟೆ ಎಂದು ಪ್ರಧಾನಿ ಶ್ರೀ ನರೇಂದ್ರ ಮೋದಿ ಹೇಳಿದ್ದಾರೆ. ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದ ಒಂದು ಲಕ್ಷ ಯುವಜನರು ರಾಜಕೀಯಕ್ಕೆ ಸೇರಬೇಕು ಎಂದು ಈ ಬಾರಿಯ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಕರೆ ಕೊಟ್ಟಿದ್ದಕ್ಕೆ ವ್ಯಾಪಕ ಪ್ರತಿಕ್ರಿಯೆಗಳು ಬಂದಿದ್ದು ದೊಡ್ಡ ಸಂಖ್ಯೆಯಲ್ಲಿ ಯುವಜನತೆ ರಾಜಕೀಯಕ್ಕೆ ಸೇರಲು ಸಿದ್ಧರಿದ್ದಾರೆ ಎಂದು ಹರ್ಷ ವ್ಯಕ್ತಪಡಿಸಿದರು. ಯುವಜನರು ತಮ್ಮ ಅನಿಸಿಕೆ, ಸಲಹೆ ಹಾಗೂ ಹೊಸ ಪರಿಕಲ್ಪನೆಯನ್ನು ಹಂಚಿಕೊಂಡಿದ್ದಾರೆ ಎಂದು ಹೇಳಿದರು.

ದೇಶದ ಸ್ವಾತಂತ್ರ್ಯ ಚಳವಳಿಯಲ್ಲಿ ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದವರು, ಸಮಾಜದ ಎಲ್ಲಾ ವರ್ಗದ ಅಸಂಖ್ಯಾತ ಜನರು ಭಾಗವಹಿಸಿದ್ದರು. ಅವರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮದೆನ್ನುವ ಎಲ್ಲವನ್ನೂ ಅರ್ಪಿಸಿದರು. 'ವಿಕಸಿತ ಭಾರತ'ದ ಪರಿಕಲ್ಪನೆ ನಿಜವಾಗಿಸಲು ಭಾರತೀಯರು ಮತ್ತೊಮ್ಮೆ ಅಂತಹ ಮನೋಭಾವ ತೋರಬೇಕಿದೆ ಎಂದು ಮೋದಿ ಉತ್ತೇಜನದ ಮಾತುಗಳನ್ನಾಡಿದರು.

### ಚಂದ್ರಯಾನ-3ರ ಯಶಸ್ಸು ದೇಶ ಮರೆಯಲ್ಲ

ಭಾರತ ಬಾಹ್ಯಾಕಾಶ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿದೆ. ಈವರೆಗೆ ಯಾರೂ ಪ್ರವೇಶಿಸದ ಚಂದ್ರನ ದಕ್ಷಿಣ ಧ್ರುವದಲ್ಲಿ ಭಾರತದ ಉಪಗ್ರಹ 'ಪ್ರಜ್ಞಾನ್' ಮತ್ತು ರೋಬೊ 'ರೋವರ್' ಅನ್ನು ಯಶಸ್ವಿಯಾಗಿ ಇಳಿಸಲಾಗಿದೆ. ಈ ಐತಿಹಾಸಿಕ ಸಾಧನೆಯ ಕ್ಷಣವನ್ನು ಇಡೀ ವಿಶ್ವವೇ ನೆನಪಿಡಲಿದೆ. ಭಾರತೀಯರಂತೂ ಮರೆಯಲು ಸಾಧ್ಯವೇ ಇಲ್ಲ ಎಂದು ಹೇಳಿದರು. ಆ.23ರಂದು ದೇಶ ಮೊದಲ 'ರಾಷ್ಟ್ರೀಯ ಬಾಹ್ಯಾಕಾಶ ದಿನ' ಆಚರಿಸಿತು. ಮತ್ತೊಮ್ಮೆ ಎಲ್ಲರೂ ಚಂದ್ರಯಾನ -3ರ ಯಶಸ್ಸು ನೆನಪಿಸಿಕೊಳ್ಳಬೇಕು. ನಮ್ಮ 'ಇಸ್ರೊ' ಉಡ್ಡಯನ ಮಾಡಿದ ಉಪಗ್ರಹ ಬಲು ಯಶಸ್ವಿಯಾಗಿ 2023ರ ಆ.23ರಂದು ಚಂದ್ರನ ದಕ್ಷಿಣ ಧ್ರುವದ 'ಶಿವ-ಶಕ್ತಿ ಪಾಯಿಂಟ್'ನಲ್ಲಿ ಇಳಿಯಿತು. ಈ ಸಾಧನೆ ಮಾಡಿದ ವಿಶ್ವದ ಮೊದಲ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ ಎಂದು ಪ್ರಧಾನಿ ಮೋದಿ ಅಭಿಮಾನದಿಂದ ನುಡಿದರು.

### ಯುವ ವಿಜ್ಞಾನಿಗಳ ಜತೆ ಸಂವಾದ

ಬಾಹ್ಯಾಕಾಶ ಕ್ಷೇತ್ರದಲ್ಲಿನ ಈ ಸಾಧನೆ ಮತ್ತು ಸುಧಾರಣೆಗಳಿಂದಾಗಿ ದೇಶದ ಯುವಜನರು ಬಹಳಷ್ಟು ಪ್ರಯೋಜನ ಪಡೆದಿದ್ದಾರೆ. ಸ್ಟಾರ್ಟ್‌ಅಪ್ 'ಸ್ಪೇಸ್‌ಟೆಕ್ ಗ್ಯಾಲಕ್ಸಿ' ತಂಡವನ್ನು ಕಟ್ಟಿದ ಐಐಟಿ ಮದ್ರಾಸ್‌ನ ಹಿರಿಯ ವಿದ್ಯಾರ್ಥಿಗಳ ಜತೆ ಮೋದಿ ಸಂವಾದ ನಡೆಸಿದರು. ಯುವ ವಿಜ್ಞಾನಿ ಸುಯಾಶ್ ಮಾತನಾಡಿ, ನಾವು ಗೆಳೆಯರು ಐಐಟಿ ಮದ್ರಾಸ್‌ನಲ್ಲಿ ವ್ಯಾಸಂಗ ಮಾಡುವಾಗ 'ಹೈಪರ್ ಲೂಪ್' ಎಂಬ ಯೋಜನೆ ಹೊಳೆದು 'ಅವಿಷ್ಕಾರ್ ಹೈಪರ್ ಲೂಪ್' ತಂಡ ಆರಂಭಿಸಿದೆವು. ಆ ಯೋಜನೆಯೊಂದಿಗೇ ಅಮೆರಿಕಕ್ಕೆ ತೆರಳಿದೆವು. ಏಷ್ಯಾದಿಂದ ಅಲ್ಲಿಗೆ ಹೋಗಿ ತ್ರಿವರ್ಣ ಧ್ವಜ ಹಾರಿಸಿದ ಏಕೈಕ ತಂಡ ನಮ್ಮದು ಎಂದು ವಿವರಿಸಿದರು. ಉತ್ತರಾಖಂಡದ ಅಲ್ಮೋರಾ ಜಿಲ್ಲೆಯ ರಕ್ಷಿತ್ ತಮ್ಮ ಸ್ಟಾರ್ಟ್‌ಅಪ್‌ನಲ್ಲಿನ ತಂತ್ರಜ್ಞಾನದ ಪ್ರಯೋಜನಗಳ ಬಗ್ಗೆ ಮಾತನಾಡಿದರು. 'ನಮ್ಮ ಹೈಪರ್ ಲೂಪ್'ದಿಂದ ದೇಶದ ಯಾವುದೇ ಮೂಲೆಯ ಸ್ಪಷ್ಟ ಚಿತ್ರ ತೆಗೆಯಬಹುದು. ನಾವು ಸಂಗ್ರಹಿಸುವ ಡೇಟಾವನ್ನು ಎರಡು ಕ್ಷೇತ್ರಗಳನ್ನು ಅಭಿವೃದ್ಧಿಪಡಿಸಲು ಬಳಸಲಾಗುತ್ತದೆ. ದೇಶದ ಗಡಿಗಳು ಹಾಗೂ ಸಾಗರ(ಸಮುದ್ರ)ಗಳ ಮೇಲ್ವಿಚಾರಣೆ. ಅಲ್ಲದೇ ಶತ್ರುಗಳ ಚಟುವಟಿಕೆಗಳನ್ನೂ ಈ ಹೈಪರ್ ಲೂಪ್ ಮೂಲಕ ಸದಾ ಗಮನಿಸಲಾಗುತ್ತದೆ. ಆ ಮೂಲಕ ದೇಶದ ಸುರಕ್ಷೆಗಾಗಿ ಶ್ರಮಿಸಲಾಗುತ್ತದೆ. ಎರಡನೆಯದಾಗಿ ದೇಶದ ರೈತರನ್ನು ಬಲಿಷ್ಟಗೊಳಿಸಲೂ ನಮ್ಮ ತಂತ್ರಜ್ಞಾನದಿಂದ ಅನುಕೂಲವಿದೆ ಎಂದು ವಿವರಿಸಿದರು.

# ಬಿಜೆಪಿ ಸದಸ್ಯತಾ ಅಭಿಯಾನ - 2024 ಜಿಲ್ಲಾ ಮಟ್ಟದ ಕಾರ್ಯಾಗಾರ



ಚಿಕ್ಕಬಳ್ಳಾಪುರ




ಚಿಕ್ಕೋಡಿ



ಕೊಡಗು




ಕೊಪ್ಪಳ



ಮಂಡ್ಯ




ವಿಜಯನಗರ



ದಾವಣಗೆರೆ



ಯಾದಗಿರಿ

ಸೃಷ್ಟಿ



ಕಾಲೇ ವರ್ಷತು ಪರ್ಜನ್ಯಃ

# ಹನುಮಂತನ ಭಕ್ತಿ–ಕೃಷ್ಣನ ನಾಯಕತ್ವ

**ಅ**ಹಂ ನಮ್ಮ ಮೊದಲ ಶತ್ರು. ಈ ಅಹಂ ಬಿಟ್ಟು ಹೆಜ್ಜೆ ಇಟ್ಟವರು ದೈವತ್ವದೆಡೆಗೆ ಸಾಗಿದ್ದಾರೆ ಅಥವಾ ದೈವವಂತೆ ಪೂಜಿಸಲ್ಪಡುತ್ತಾರೆ. ಇದಕ್ಕೆ ಸಾಕ್ಷಿ ನಮ್ಮ ಮಹಾಭಾರತ ರಾಮಾಯಣದ ಪ್ರಸಂಗಗಳು. ಮಹಾಭಾರತದಲ್ಲಿ ಅರ್ಜುನನಿಗೆ ಶ್ರೀಕೃಷ್ಣನ ಮೇಲಿನ ಭಕ್ತಿಗಿಂತ ತನ್ನ ಸಾಮರ್ಥ್ಯದ ಬಗ್ಗೆ ಸ್ವಲ್ಪ ಅಹಂ ಜಾಸ್ತಿ ಆದರೆ ಹನುಮಂತನಿಗೆ ತನ್ನೆಲ್ಲಾ ಶಕ್ತಿಗೆ, ಸಾಮರ್ಥ್ಯಕ್ಕಿಂತ ಶ್ರೀ ರಾಮನ ಮೇಲಿನ ಭಕ್ತಿಯ ಮೇಲೆಯೇ ನಂಬಿಕೆ.

ಕುರುಕ್ಷೇತ್ರದ ಯುದ್ಧದ ಸಂದರ್ಭದಲ್ಲಿ ಅರ್ಜುನನ ರಥದ ಮೇಲಿನ ಧ್ವಜದಲ್ಲಿ ಹನುಮಂತನಿದ್ದಾನೆ. ಆದರೆ ಅದು ಕೇವಲ ಧ್ವಜವಲ್ಲ ನಿಜವಾಗಿಯೂ ಹನುಮಂತನೇ ಅಲ್ಲಿ ನಿಂತು ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಜೊತೆಯಾಗಿ ಸಹಕರಿಸುತ್ತಾನೆ. ಕೌರವರ ಸಂಹಾರಕ್ಕಾಗಿ ಅರ್ಜುನನ ರಥದಲ್ಲಿ ಹನುಮಂತನಿರಬೇಕೆಂದು ಶ್ರೀಕೃಷ್ಣನಿಗೆ ಅನಿಸಿ ಬಿಡುತ್ತದೆ. ಇದಕ್ಕಾಗಿ ಅವನು ಅರ್ಜುನ ಮತ್ತು ಹನುಮಂತರಿಬ್ಬರೂ ಸಂಧಿಸುವಂತೆ ಮಾಡುತ್ತಾನೆ. ಆಗ ಹನುಮಂತ ಮತ್ತು ಅರ್ಜುನರಲ್ಲಿ ಸಣ್ಣದೊಂದು ಸಂಘರ್ಷ ನಡೆಯುತ್ತದೆ. ಲಂಕೆಗೆ ಹನುಮಂತ ಕಟ್ಟಿರುವ ಸೇತುವೆಯಂತೆ ತಾನೂ ಸೇತುವೆ ಕಟ್ಟುತ್ತೇನೆ ಎಂದು ಅರ್ಜುನ ಅಹಂನಿಂದ ತನ್ನ ಬಾಣದಿಂದ ಸೇತುವೆಯನ್ನು ಕಟ್ಟುತ್ತಾನೆ. ಆದರೆ ಕ್ಷಣಾರ್ಧದಲ್ಲಿ ಅದನ್ನು ತುಳಿದ ಹನುಮಂತ ಸೇತುವೆಯನ್ನು ಕೆಡವುತ್ತಾನೆ. ಇದೇ ರೀತಿ ತುಂಬಾ ಸಲ ಪುನರಾವರ್ತಿತವಾಗುತ್ತದೆ. ಅರ್ಜುನನ ಅಹಂ ಗೆ ಪೆಟ್ಟು ಬೀಳುತ್ತದೆ. ಕೊನೆಯ ಬಾರಿ ಸೇತುವೆಯನ್ನು ನಿರ್ಮಿಸಿ, ಈ ಬಾರಿ ಈ ಸೇತುವೆಯೇನಾದರು ಬಿದ್ದರೆ ತಾನು ಅಗ್ನಿ ಪ್ರವೇಶ ಮಾಡುವುದಾಗಿ ಪ್ರಮಾಣ ಮಾಡಿಬಿಡುತ್ತಾನೆ. ಅರ್ಜುನನ ಅಗ್ನಿ ಪ್ರವೇಶವನ್ನು ತಡೆಯಬೇಕಾದ ಅನಿವಾರ್ಯತೆಯಿಂದ ಶ್ರೀಕೃಷ್ಣ ಅವನ ಬೆನ್ನಿಗೆ ನಿಂತು ಬಿಡುತ್ತಾನೆ. ಇದರಿಂದ ಹನುಮಂತ ಎಷ್ಟೆ ಪ್ರಯತ್ನಪಟ್ಟರೂ ಸೇತುವೆ ಬೀಳುವುದೇ ಇಲ್ಲಾ. ಆಗ ಹನುಮಂತನಿಗೆ ಎಲ್ಲಾ ಸಂದರ್ಭಗಳಲ್ಲೂ ಶ್ರೀ ರಾಮನ ಸ್ಮರಣೆ ಮಾಡಿ ಮುನ್ನಡಿಯಿಡುವ ತನಗೆ ಹಿನ್ನಡೆಯಾಗಿದ್ದಕ್ಕೆ ಶ್ರೀರಾಮನ ಮೇಲಿನ ತನ್ನ ಭಕ್ತಿ ಕಡಿಮೆಯಾಗಿರುವುದೇ ಕಾರಣವೆಂದು ದುಃಖಿತನಾಗಿ, ರಾಮನ ಕುರಿತು ತಪಸ್ಸು ಮಾಡಲು ಅಣಿಯಾಗುತ್ತಾನೆ. ಆಗ ಶ್ರೀಕೃಷ್ಣ ಮತ್ತೆ ರಾಮನ ಅವತಾರದಲ್ಲಿ ಹನುಮಂತನಿಗೆ ಕಾಣಿಸಿಕೊಂಡು, ನಿನ್ನ ಭಕ್ತಿ ಕಡಿಮೆ ಆಗಲಿಲ್ಲಾ, ಮಹಾಭಾರತದಲ್ಲಿ ಅರ್ಜುನನಿಗೆ ನಿನ್ನ ಸಹಾಯ ಬೇಕು, ಅರ್ಜುನನ ರಥದಲ್ಲಿ ನೀನಿರಬೇಕು ಅದಕ್ಕೆ ನಾನು ಹೀಗೆ ಮಾಡಿದೆ ಎಂದು ಹನುಂತನಿಗೆ ಹೇಳುತ್ತಾನೆ. ಅದಕ್ಕೆ ಹನುಮಂತನು ಒಪ್ಪಿಕೊಳ್ಳುತ್ತಾನೆ.

ರಾಮಾಯಣದಲ್ಲಿ ಹನುಮಂತನಿಗೆ ತನ್ನ ಶಕ್ತಿಗೆ ಕಾರಣ, ಕರ್ತೃ ಶ್ರೀರಾಮು ಹಾಗೂ ರಾಮನ ಮೇಲೆ ಇರುವ ಭಕ್ತಿಯೇ. ಮಹಾಭಾರತದಲ್ಲಿ ಅರ್ಜುನನಿಗೆ ಶ್ರೀ ಕೃಷ್ಣನಿಗಿಂತ ತನಗಿರುವ ಸಾಮರ್ಥ್ಯದ ಬಗ್ಗೆಯೇ ಅಹಂ. ಅರ್ಜುನನಿಗೆ ತನ್ನಿಂದ ಯುದ್ದ ಗೆದ್ದಿದ್ದು, ಎನ್ನುವ ಅಹಂ ಭಾವವಿತ್ತು, ಆದರೆ ಹನುಮಂತನಿಗೆ ಎಲ್ಲವೂ ರಾಮನಿಂದಲೇ, ರಾಮನ ಶಕ್ತಿಯಿಂದಲೇ ಸಾಧ್ಯವಾಗಿದ್ದು ಎನ್ನುವ ಭಾವವಿತ್ತು. ಅದಕ್ಕೆ ಇರಬೇಕು, ಕಲಿಯುಗದಲ್ಲಿ ಶ್ರೀ ಕೃಷ್ಣ ಮತ್ತು ಶ್ರೀ ರಾಮನ ದೇವಸ್ಥಾನಕ್ಕಿಂತ ಹೆಚ್ಚು ಹನುಮಂತನ ದೇವಸ್ಥಾನವಿದೆ, ಇನ್ನು ಅರ್ಜುನನಿಗಂತೂ ದೇವಸ್ಥಾನವೇ ಇಲ್ಲ.

ಅರ್ಜುನ ಮತ್ತು ಹನುಮಂತ ಪಾತ್ರಗಳೆರಡೂ ವೈಚಾರಿಕ ಸಂಘಟನೆಯೊಳಗೆ ಇರುವ ಕಾರ್ಯಕರ್ತರು ಮತ್ತು ನಾಯಕರು ಹೇಗಿರಬೇಕು ಎಂಬುವ ಸಂದೇಶವನ್ನು ಕೊಡುತ್ತದೆ. ಅರ್ಜುನನಂತೆ ನಾನು, ನನ್ನಿಂದಲೇ ಎಲ್ಲವೂ ಎನ್ನುವ ಕಾರ್ಯಕರ್ತರೂ ಸಂಘಟನೆಯಲ್ಲಿದ್ದಾರೆ, ನನ್ನ ಬೆನ್ನಿಗೆ ಸಂಘಟನೆಯಿರುವುದರಿಂದಲೇ ನನ್ನೆಲ್ಲಾ ಶಕ್ತಿ ಎನ್ನುವ ಕಾರ್ಯಕರ್ತರೂ ಇದ್ದಾರೆ. ಇಬ್ಬರೂ ಕಾರ್ಯಕರ್ತರೇ, ಆದರೆ ಹನುಮಂತನ ಭಕ್ತಿಯ ತೆರನಾದ ಬದ್ಧತೆಯನ್ನು ಸಂಘಟನೆಯೊಳಗೆ ಬೆಳೆಸಿಕೊಂಡ ಕಾರ್ಯಕರ್ತನಿಗೆ ಸಿಗುವ ಮಾನ್ಯತೆಯೇ ಬೇರೆ, ಹಾಗೆಯೇ. ಅರ್ಜುನನಂತೆ ಶ್ರೀ ಕೃಷ್ಣನ ಪ್ರಭಾವಕ್ಕಿಂತ ತನ್ನ ಶಕ್ತಿಯಿಂದಲೇ ಎಂದುಕೊಳ್ಳುವ ಕಾರ್ಯಕರ್ತನಿಗೆ ಸಿಗುವ ಪ್ರಾಶಸ್ತ್ಯವೇ ಬೇರೆ. ಅರ್ಜುನನಂತಹ ಕಾರ್ಯಕರ್ತನಾಗಬೇಕೋ, ಹನುಮಂತನ ತೆರನಾದ ಕಾರ್ಯಕರ್ತನಾಗಬೇಕೋ ನಿರ್ಧರಿಸಬೇಕಾದವರು ನಾವು.

– ಸ್ವಯಂಭೂ

**KAMALA PATHA** Monthly in Kannada
Date of Publication : 8th of Every Month
Price : ₹ 10/- Pages : 36

RNI No.:KARKAN/2023/84034 REGISTERED NEWSPAPER UNDER No. KKRNA/BGE/1173/2023-25
LICENCED TO POST WITHOUT PAYMENT - LICENCE No. PMG BG/WPP-408/2023-2025
OFFICE OF POSTING : BENGALURU PSO - 560 026 DATE OF POSTING : 10th / 15th / 20th OF EVERY MONTH

**KAMALA PATHA** – Printed and Published by **H.S. GOPINATH** on behalf of **SAMAGRA VIKASA TRUST**, Printed at **RASHTROTTHANA MUDRANALAYA,** No. 8 & 8/1, Satya Pramoda Teertha, Building, 3rd Main, 9th Cross, Chamrajpet, BENGALURU – 560 018. Published At # 7/6, 4TH Cross, CC Road, Sarvagna Nagar, Cox Town, BENGALURU – 560 005. Editor: **B. V. PRAKASH (Bidare Prakash)**